TIGHT BINDING BOOK

UNIVERSAL
LIBRARY
OU_198505
UNIVERSAL
LIBRARY

Narasimharaja Wadiyar Series.

ಬಿ. ವೆಂಕಟಾಚಾರ್ಯ

MYSORE:
PRINTED BY P. PALLONJEE
AT THE G. T. A. PRINTING WORKS, MYSORE
1912

Narasimharaja Wadiyar Series.

ಬಿ. ವೆಂಕಟಾಚಾರ್ಯ

ಮೂರು ಆಣೆ.

ವಿಜ್ಞಾಪನೆ

ಶ್ರೀ ಶಚೀಶಚಂದ್ರಬಾಬುಗಳು ರಚಿಸಿರುವ ಮೂಲಗ್ರಂಥವನವಲಂಬನೆಯಿಂದೀ ಗ್ರಂಥವು ರಚಿತವಾಗಿರುವುದು. ಗ್ರಂಥದ ಉತ್ಕರ್ಷಾಪಕರ್ಷವನ್ನು ಕುರಿತು ತರ್ಕಿಸಿ ವ್ಯವಸ್ಥೆಯಂ ಮಾಡುವ ಭಾರವನ್ನು ಸಹೃದಯರಾದ ಪಾಠಕಮಹಾಶಯರಿಗೊಪ್ಪಿಸಿರುವೆವು-ಆರ್ಯನಾರಿಯರು ಎಷ್ಟೊಂದು ಕಷ್ಟಕ್ಕೊಳಗಾದರೂ ತಮ್ಮ ಸತೀತ್ವದ ಸಂರಕ್ಷಣೆಯು ತಮಗೆ ಪ್ರಥಮಕರ್ತವ್ಯವೆಂದು ತಿಳಿದಿರುವರು-ಸತೀತ್ವದ ರಕ್ಷಣೆಗೆಸಲವಾಗಿ ಪ್ರಾಣವನ್ನಾದರೂ ಕೊಡಲು ಸಿದ್ಧವಾಗಿರುವರು. ಸ್ವಭಾವಸಿದ್ಧವಾದಾ ಬುದ್ಧಿವೈಭವವು ಅವರಿಗೆ ಪುರುಷಾನುಕ್ರಮವಾಗಿ ಬಂದು ಅವರ ರಕ್ತದಲ್ಲಿ ಗಡುತರವಾಗಿ ಸೇರಿಹೋಗಿ ಹುಟ್ಟುಬುದ್ಧಿಯಾಗಿ ಪರಿಣಮಿಸಿರುವುದು. ಅದುಕಾರಣ ಅವರಿಗದು ಶೈಶವದಿಂದಲೂ ಚಿರಭ್ಯಸ್ತವಾಗಿ ಹೃದಯದಲ್ಲಿ ಅಂಟಿ ನಾಟಿರುವುದು-ಅವರಿಗದು ಎರಡನೆಯ ಸ್ವಭಾವವೆಂದು ಹೇಳಬಹುದು-ಹಾಗಿರುವ ಪತಿಪ್ರಾಣ ಸ್ವಭಾವವುಳ್ಳ ನಾರಿಯರು ಪ್ರಪಂಚದಲ್ಲಿ ಭಾರತವರ್ಷದಲ್ಲಿ ಹೊರ್ತು ಮತ್ತಾವ ದೇಶದಲ್ಲಿಯೂ ಅಷ್ಟೊಂದು ಹೇರಳವಾಗಿ ಕಣ್ಗೊಳಿಸರೆಂದು ತೋರುತ್ತದೆ-ಅದಲ್ಲದೆ ಮಾತಾಪಿತೃಗಳಲ್ಲಿ ಅಸದೃಶವಾದ ಭಕ್ತಿಯು ಆರ್ಯರಲ್ಲಿ ಅದೇಮಾದಿರಿಯಾಗಿ ಪುರುಷಾನುಕ್ರಮವಾಗಿ ಅವಿಚ್ಛಿನ್ನವಾಗಿ ಬಂದಿರುವುದು. ಈ ಗ್ರಂಥದಲ್ಲಿ ಆ ಎರಡರ ಉಜ್ವಲ ಉದಾಹರಣೆಗಳನ್ನು ನೋಡಬಹುದು-ಆದರೆ ಪಾಶ್ಚಾತ್ಯರ ನಾಗರಿಕದ ಸಂಘರ್ಷಣದಿಂದ ವಾಂಛನೀಯವಾದಾ ನೈಜಸ್ವಭಾವಗಳು ಸ್ವಲ್ಪಸ್ವಲ್ಪವಾಗಿ ಬಾಧೆಗೊಂಡು ಶೈಥಿಲ್ಯವಂ ಹೊಂದುತಿರುವುದು ಚಿಂತನೀಯವಾಗಿದೆ-ನಮ್ಮ ಸಮಾಜಗಳಲ್ಲಿ ಈಚೀಚಗೆ ಹೆಚ್ಚಾಗಿ ಹಬ್ಬುತಿರುವ ವಿಲಾಸತೆಯಲ್ಲಾಸಕ್ತಿಯೂ, ಗುರುಹಿರಿಯರಲ್ಲಿ ಲಾಘವವೂ ಈಗೀಗ ಏರ್ಪಾಟಾಗುತಿರುವುದೆಂಬ ಧರ್ಮಶಿಕ್ಷಣದಿಂದಲೂ ನೈತಿಕಶಿಕ್ಷಣದಿಂದಲೂ ಮುಂದೆ ವೃದ್ಧಿಗೊಳ್ಳದೆ ತಡೆಯಲ್ಪಟ್ಟು ಆರ್ಯನರ ನಾರಿಯರು ಪ್ರಾರ್ಥನೀಯವಾದಾ ತಮ್ಮ ಪೂರ್ವದ ಸ್ವಭಾವಗಳನ್ನು ಹೊಂದುವುದರಲ್ಲಿ ಸಂದೇಹವಿರದು, ಇತಿ—

ಮೈಸೂರು
1912

ಬಿ. ವೆಂಕಟಾಚಾರ್ಯ

ಶ್ರೀ ಸ್ಯೈ ನಮಃ

ನೀರದ

ಮೊದಲನೆಯ ಪರಿಚ್ಛೇದ.

"ತಾಯಿ! ಭಿಕ್ಷವ ನೀಡಿ, ತಾಯಿ!"

"ಅರೆ. ಆರು?"

"ನಾವು, ಭಿಕ್ಷುಕರು, ತಾಯಿ!"

ಮನೆಯ ಯಜಮಾನಿಯು ಬಂದು ಕೇಳಿದಳು. ಭಿಕ್ಷುಕರು ಬಾಗಿಲಲ್ಲಿ ನಿಂತಿದ್ದವರು ಅಂಗಳಕ್ಕೆ ಬಂದು ನಿಂತರು

ಭಿಕ್ಷುಕರೊಳೊಬ್ಬ ಚಿಕ್ಕ ಹುಡುಗಿ ಹುಡುಗಿಯಾಗಿದ್ದರೂ ಲಜ್ಜೆಯಿಂದ ಕೂಡಿದವಳಾಗಿದ್ದಳು ಮೆಲ್ಲಮೆಲ್ಲಗೆ ಬಂದವಳು ಅಂಗಳದಲ್ಲಿ ತುಸು ಸಂಕುಚಿತೆಯಾಗಿ ನಿಂತುಕೊಂಡಳು. ಛಿಂದಿಯಾಗಿದ್ದೊಂದು ಬಟ್ಟೆಯನ್ನುಟ್ಟಿದ್ದಳು ತಲೆಯ ಕೂದಲು [illegible] ಗಾಳಿಗೆ ಅತ್ತಿತ್ತ ಹಾರಾಡುತ್ತಿದ್ದಿತು. ಮೈ ತೈಲಹೀನವಾಗಿ ಧೂಳಿಯಿಂದ ವ್ಯಾಪ್ತವಾಗಿದ್ದಿತು. ಮುಖವು ಬಾಡಿ ಕ್ಷೀಣವಾಗಿದ್ದಿತು. ಕ್ಷೀಣವಾಗಿದ್ದ ಮುಖದಲ್ಲೆರಡು ದೊಡ್ಡ ದೊಡ್ಡ

ಕಣ್ಣುಗಳು ಭ್ರಮರಚುಂಬಿತ ನೀಲಪದ್ಮದಂತೆ ಕಂಗೊಳಿಸುತ್ತಿದ್ದುವು. ಹುಡುಗಿಯನ್ನು ನೋಡಿದರೆ, ಚಿಕ್ಕದಾಗಿದ್ದೊಂದು ಚಂಪಕದ ಹೂವು ಅರಳುವುದಕ್ಕೆ ಮೊದಲು, ಅಲವರ್ಗಾಚಂಡಮಾರುತದಿಂದ ಹೊಡೆಯಲ್ಪಟ್ಟು ಛಿನ್ನಭಿನ್ನವಾಗಿ ನೆಲದಮೇಲೆ ಬಿದ್ದು ಹೊರಳಾಡಿದ್ದಂತೆ ಕಾಣುವುದು. ಹುಡುಗಿಯು ಸುಂದರಿಯೆಂದು ಯಜಮಾನಿಗೆ ಬೋಧೆಯಾಯಿತು. ಆದರೆ ಭಿಕ್ಷದವಳಿಗೆ ರೂಪಸೌಂದರ್ಯವುಂಟೆಂದು ಹೇಳಬಹುದೆ? ಯಜಮಾನಿಗೆ ಕೋಪವುಂಟಾಗಿ, ಅವಳು ರುಕ್ಷಕಂಠದಿಂದ, "ಗೃಹಸ್ಥರ ಮನೆಯಲ್ಲಿ ಊಟವಾದ ಬಳಿಕ ಮಧ್ಯಾಹ್ನದ ಮೇಲೆ ಭಿಕ್ಷವನ್ನು ನೀಡುವುದಿಲ್ಲ" ವೆಂದು ಹೇಳಿ ಗದರಿಸಿಕೊಂಡು, ಸ್ಥಾನಾಂತರ ಹೊರಟುಹೋದಳು.

ಹುಡುಗಿಯೂ ಹೊರಟುಹೋಗಲುದ್ಯುಕ್ತೆಯಾದಳು. ಹೋಗಲುದ್ಯುಕ್ತೆಯಾದಾಗ ಕಣ್ಣೀರು ತುಂಬಿದವಳಾದಳು. ಹೆಚ್ಚಾಶೆಯಿಂದವಳು ದೂರವಾಗಿದ್ದ ಗ್ರಾಮಕ್ಕೆ ಭಿಕ್ಷಕ್ಕೆಸಲವಾಗಿ ಬಂದಿದ್ದವಳು. ವಿಫಲಮನೋರಥೆಯಾಗಿ ಹೊರಟಳು. ಹಜಾರದಲ್ಲಿ ನಿಂತಿದ್ದೊಬ್ಬ ದಾಸಿಯು, ಶೋಕಭಾರಾಕ್ರಾಂತೆಯಾಗಿದ್ದ ಹುಡುಗಿಯ ಮುಖವನ್ನು ನೋಡಿ, "ಅಹಾ! ಹುಡುಗಿಯು ಎಷ್ಟೊಂದು ಚಲುವೆಯು!" ಎಂದಂದುಕೊಂಡು. ಅವಳನ್ನು ಕುರಿತು, "ಹುಡುಗಿ! ನಿನ್ನ ಮನೆಯಿರುವುದೆಲ್ಲಿ?" ಎಂದು ವಿಚಾರಿಸಿದಳು.

ಹುಡುಗಿಯು ಮುಖಬಾಡಿದವಳಾಗಿ, "ಗೊತ್ತಿಲ್ಲ" ವೆಂದಳು.

ದಾಸಿ—ನೀನಿರುವ ಮನೆಯು ನಿನಗೆ ಗೊತ್ತಿಲ್ಲವೆ?

ಹುಡುಗಿ—ಇಲ್ಲ.

ದಾಸಿ—ನೀನಿರುವುದೆಲ್ಲಿ?

ಹುಡುಗಿ—ಕೃಷ್ಣಪುರದಲ್ಲಿ.

ದಾಸಿ—ಕೃಷ್ಣಪುರವು ಇಲ್ಲಿಗೆ ಬಹಳದೂರ.

ಹುಡುಗಿ—ಅಹುದು.

ದಾಸಿ—ಆಮುದರಿಂದಲೇ ಬರುವುದಕ್ಕೆಷ್ಟೊಂದು ಹೊತ್ತಾಯಿತು?

ಹುಡುಗಿಯು ಮುಖತಗ್ಗಿದವಳಾಗಿ ಸುಮ್ಮನಿದ್ದಳು. ದಾಸಿಯು, "ನಿನಗಾರಿದ್ದಾರೆಯೆ?" ಎಂದು ವಿಚಾರಿಸಿದಳು.

ಹುಡುಗಿ—ನನಗಾರೂ ಇಲ್ಲ.

ದಾಸಿ—ಆರೂ ಇಲ್ಲವೆ? ಅಹಾ! ಹಾಗಾದರಾರಬಳಿ ಇರುತ್ತಿ?

ಹುಡುಗಿ—ಮುದುಕಿಯೊಬ್ಬಳು ದಯೆಗೈದು ತನ್ನ ಮನೆಯಲ್ಲೊತ್ತಟ್ಟು ಸ್ವಲ್ಪ ಸ್ಥಳವನ್ನು ಕೊಟ್ಟಿದ್ದಾಳೆ.

ದಾಸಿ—ಎಷ್ಟು ದಿನಗಳಿಂದ ಮುದುಕಿಯ ಮನೆಯಲ್ಲಿರುತ್ತಿ?

ಹುಡುಗಿ—ಒಂದು ವರ್ಷವಾಗುತ ಬಂದಿತು.

ದಾಸಿ—ಅದಕ್ಕೆ ಮೊದಲು ಎಲ್ಲಿದ್ದೆ?

ಹುಡುಗಿಯು ಸುಮ್ಮನಿದ್ದಳು-ಉತ್ತರವನ್ನು ಕೊಡಲಿಲ್ಲ. ದಾಸಿಯು ಆ ಪ್ರಸ್ತಾಪವನ್ನು ಬಿಟ್ಟು, "ನೀನಾವ ಜಾತಿಯವಳು?" ಎಂದು ಕೇಳಿದಳು.

ಹುಡುಗಿ—ಅದನಗೆ ಗೊತ್ತಿಲ್ಲ.

ದಾಸಿ—ಮುದುಕಿಯು ನಿನ್ನ ಜಾತಿಯವಳೆ?

ಹುಡುಗಿ—ನಾನದನ್ನು ಹೇಳಲಾರೆನು-ನನಗದು ತಿಳಿಯದು.

ದಾಸಿಯು ಕ್ಷಣಕಾಲ ಮೌನವಾಗಿ ಚಿಂತಿಸುತಿದ್ದು, ಚಿಂತಾಂತದಲ್ಲಿ, ನೀನಿಲ್ಲಿ ಕುಳಿತಿರು, ನಾನು ಹೋಗಿ ಯಜಮಾನಿಗೆ ಹೇಳಿ ಎರಡು ತುತ್ತು ಅನ್ನವನ್ನು ತಂದುಕೊಡುವೆನು" ಎಂದಳು.

ಹೀಗೆಂದು ಹೇಳಿ ದಾಸಿಯು ಯಜಮಾನಿಯನ್ನು ಹುಡುಕಿಕೊಂಡು ಹೋದಳು. ಯಜಮಾನಿಯು ಶಯನಾಗಾರದಲ್ಲಿ ಮಂಚದಮೇಲೆ ಮಲಗಿಕೊಂಡು ಕೈಯಲ್ಲೊಂದು ಬೀಸಣಿಗೆಯನ್ನು ಹಿಡಿದು ಬೀಸಿಕೊಳ್ಳುತ್ತಿದ್ದಳು. ಬಿಳಿಪು ಕಪ್ಪು ಮಿಶ್ರಿತವಾಗಿದ್ದವಳ ತಲೆಯ ಕೂದಲರಾಶಿಯು ಮಂಚದಮೇಲೆ ಬಿದ್ದು ಹಾರಾಡುತಿದ್ದಿತು-ಯಜಮಾನಿಯು ಒಂದು ಮಾಂಸಸ್ತೂಪವಿಶೇಷವಾಗಿದ್ದಳು; ಆದರವಳ ತಪ್ತಕಾಂಚನಗೌರವರ್ಣದಿಂದಾದೋಷವು ಬಹಳಮಟ್ಟಿಗೆ ಮುಚ್ಚಲ್ಪಟ್ಟಿದ್ದಿತು. ಅವಳು ಮಂಚದಮೇಲೆ ಉರುಡಾಡುತಿದ್ದುದನ್ನು ನೋಡಿದರೆ, ಮಂಚದಮೇಲೆ ಅವರೇ ಬೇಳೆಯ ರಾಶಿಯು ಉದ್ದಾಗಿ ಸುರಿದಿದ್ದಂತೆ ತೋರುವುದು.

ದಾಸಿಯು ಮರೆಯಲ್ಲಿ ನಿಂತು ನೋಡಿದಳು-ಯಜಮಾನಿಯು ನಿದ್ರಾಳು-ಆಗವಳಿಗೆ ತೊಂದರೆಯನ್ನು ಕೊಡದೆ ದಾಸಿಯು ಬೇಗನೆ ಅಡಿಗೆಯ ಮನೆಗೆ ಹೋಗಿ ನೋಡಿದಳು. ಅಡಿಗೆಯವನು ಅನ್ನವನ್ನು ದಾಸದಾಸಿಯ

ರಿಗೆ ಸಲವಾಗಿ ತಂಡತಂಡವಾಗಿ ಕಂಚಿನ ಗಂಗಳಗಳಲ್ಲಿ ಬಡಿಸಿಟ್ಟಿದ್ದನು. ದಾಸಿಯು ಅವನನ್ನು ಕುರಿತು, "ನನ್ನ ಗಂಗಳವಾವುದು?" ಎಂದು ಕೇಳಿದಳು.

ಅಡಿಗೆಯವನು—ನಿನ್ನ ಗಂಗಳವನ್ನು ಬೇರೆ ಇಟ್ಟಿದ್ದೇನೆ-ತಂದುಕೊಡುವೆನು.

ಹೀಗೆಂದು ಹೇಳಿ ಪಾಚಕನು ನಾನಾವಿಧ ವ್ಯಂಜನಾದಿಗಳಿಂದೊಡನೆ ಅನ್ನವನ್ನು ಬಡಿಸಿದ್ದೊಂದು ದೊಡ್ಡ ತಟ್ಟೆಯನ್ನು ತಂದುಕೊಟ್ಟನು. ದಾಸಿಯು ಆ ತಟ್ಟೆಯನ್ನು ತೆಗೆದುಕೊಂಡು ಹಜಾರಕ್ಕೆ ಬಂದು, ಅದರಲ್ಲಿದ್ದ ಅನ್ನ ಮುಂತಾದುದರಲ್ಲಿ ಅರ್ಧವನ್ನು ಒಂದೆಲೆಯಲ್ಲಿ ಬಡಿಸಿ ಹುಡುಗಿಯ ಬಳಿ ಇಟ್ಟು, ಬಳಿಕ ತಾನು ಸ್ವಲ್ಪ ದೂರದಲ್ಲಿ ಕುಳಿತು ಊಟವಂ ಮಾಡತೊಡಗಿದಳು.

ಹುಡುಗಿಯು ಊಟವನ್ನು ಮಾಡಲಿಲ್ಲ. ಅನ್ನವನ್ನು ಇಟ್ಟುಕೊಂಡು ಸುಮ್ಮನೆ ಕುಳಿತಿದ್ದಳು. ಮುಖ ತಗ್ಗಿದವಳಾಗಿ, ಕಣ್ಣುಗಳು ಅಶ್ರುಧಾರಾಕುಲವಾಗಿದ್ದುವು. ದಾಸಿಯು "ಊಟವ ಮಾಡೆ, ತಾಯಿ!" ಎಂದಳು.

ಹುಡುಗಿಯು ಕೈಹಾಕಲಿಲ್ಲ-ಸುಮ್ಮನಿದ್ದಳು. ಗಂಡಸ್ಥಲದಮೇಲೆ ಕಣ್ಣೀರು ಹರಿದು ನೆಲದಮೇಲೆ ತೊಟಕಿತು. ದಾಸಿಯು ಅದನ್ನು ನೋಡಿದಳು. ನೋಡಿ, "ಅನ್ನದ ಮುಂದೆ ಕುಳಿತು ಅಳುವುದೆ? ಛಿ! ಕೊಳಕ್ಕೆ ಹೋಗಿ ಕೈಕಾಲುಗಳನ್ನು ತೊಳೆದುಕೊಂಡು ಬಂದು ಊಟವನ್ನು ಮಾಡು- ನೀನು ಊಟವನ್ನು ಮಾಡದೆ ನಾನೂ ಊಟವನ್ನುಮಾಡುವುದಿಲ್ಲ"ವೆಂದಳು.

ದಾಸಿಯು ಊಟಮಾಡದೆ ಕುಳಿತಿದ್ದುದನ್ನು ನೋಡಿ ಹುಡುಗಿಯ ಅಳುವು ಮತ್ತಷ್ಟು ಹೆಚ್ಚಾಗಿ, ಅವಳು ಬೇಗನೆದ್ದು ಕೊಳಕ್ಕೆ ಹೋಗಿ ಕೈಕಾಲುಗಳನ್ನು ತೊಳೆದುಕೊಂಡು ಬಂದು ಊಟಮಾಡತೊಡಗಿದಳು.

ಎರಡನೆಯ ಪರಿಚ್ಛೇದ.

ಹುಡುಗಿಯು ಊಟವನ್ನು ಮಾಡುತ್ತಿದ್ದ ಮನೆಯ ಪರಿಚಯವು ಪಾಠಕರಿಗೆ ಆವಶ್ಯಕವಾಗಿರುವುದು. ಮನೆಯಲ್ಲಿ ಮೂರು ಮಹಲುಗಳು—ಸದರುಮಹಲು, ಒಳಗಿನ ಮಹಲು, ಪಾಕಶಾಲೆ-ಸದರು ಮಹಲಿನಲ್ಲಿ ಜನರ ಗದ್ದಲವು ಹೆಚ್ಚು-ಕೆಲವುಮಂದಿ ಕಾವಲುಗಾರರು, ಇಬ್ಬರು ಚಾಕರರು, ಒಬ್ಬ ಮೇಸ್ಟರು (Teacher) ನಾಲ್ಕುಮಂದಿ ಮಾಲಿಗಳು, ನಾಯಬರು. ಗುಮಾಸ್ತರು-ಒಳಗಿನ ಮಹಲಿನಲ್ಲಿಯೂ ಅನೇಕಮಂದಿ ಜನರಿದ್ದರು-ಅವರ ವಿವರಣೆಯು ಪ್ರಕೃತ ಪ್ರಯೋಜನವಿಲ್ಲ-ಒಳಗಿನ ಮಹಲಿಗೆ ಹಿಂದೆ ಒಂದು ಅಂಗಳ-ಅದರಾಚೆ ಪಾಕಶಾಲೆ-ಪಾಕಶಾಲೆಯು ಸಣ್ಣಪುಟ್ಟದಲ್ಲ-ದೊಡ್ಡ ದೊಡ್ಡ ಮೂರು ಮನೆಗಳು-ಮನೆಯೊಳಗೆ ದೊಡ್ಡದೊಂದು ಹಜಾರ.

ಮನೆಗೆ ಹಿಂದುಗಡೆ ಚಿಕ್ಕದೊಂದು ಕೊಳ. ಕೊಳಕ್ಕೆ ಸುತ್ತ ಫಲಪುಷ್ಪಗಳ ತೋಟ. ತೋಟಕ್ಕೆ ಸುತ್ತ ಪಾಗಾರದ ಗೋಡೆ. ಗೋಡೆಯಲ್ಲಿ ತೋಟಕ್ಕೆ ಹೋಗುವ ಬಾಗಿಲು.

ಮನೆಯ ಯಜಮಾನನು ಬಹು ದಿವಸಗಳಿಗೆ ಹಿಂದೆ ಹೆಂಡತಿಯನ್ನೂ ಒಬ್ಬ ಮಗನನ್ನೂ ಬಿಟ್ಟು ಸ್ವರ್ಗಾರೋಹಣವ ಮಾಡಿದ್ದನು. ಅವನೊಬ್ಬನೇ ಸ್ವರ್ಗಕ್ಕೆ ಹೋದವನು-ವಿಷಯಸಂಪತ್ತುಗಳಾವವೂ ಅವನೊಡನೆ ಹೋಗಲಿಲ್ಲ. ವಿಷಯಸಂಪತ್ತುಗಳನ್ನು ಅನುಭವಿಸತಕ್ಕವನು ಏಕಮಾತ್ರ ಪುತ್ರ-ಪುತ್ರನು ವಿಷಯಭಾರವನ್ನು ಸ್ವಂತವಾಗಿ ವಹಿಸಿರಲಿಲ್ಲ-ಯಜಮಾನಿಯು-ಮಗನ ಪ್ರತಿನಿಧಿಯಾದ ತಾಯಿ-ನಾಯಬ ಗುಮಾಸ್ತರ ಸಹಾಯದಿಂದ ಆಸ್ತಿಯ ಪೈವಟ್ಟುಗಳನ್ನು ನಡೆಯಿಸುತ್ತಿದ್ದಳು.

ಮಗನ ಹೆಸರು ರಮಣೀಮೋಹನ-ವಯಸ್ಸು ಹತ್ತೊಂಭತ್ತು ವರ್ಷ-ನೋಡುವುದಕ್ಕೆ ಸುಪುರುಷ. ಅವನು ಕಲಿಕತ್ತೆಯಲ್ಲಿದ್ದುಕೊಂಡು ಬಿ. ಎ. ಪರೀಕ್ಷೆಗೆ ಓದುತ್ತಿದ್ದನು. ಅಲ್ಲಿಯೂ ಸ್ವಂತಮನೆ-ಮನೆಯಲ್ಲಿ ಪಾಚಕರೂ, ಭೃತ್ಯರೂ ಇರುವರು-ಅವನ ಸಂಗಡ ಮಾಸ್ಟರೊಬ್ಬನಿರುತ್ತಿರುವನು. ಕಲಿಕತ್ತೆಯಲ್ಲಿ ಕಾಲೇಜು ಮುಚ್ಚಲ್ಪಟ್ಟಾಗ ರಮಣೀಮೋಹ

ನನು ಶಿಕ್ಷಕನಸಮೇತನಾಗಿ ಮನೆಗೆ ಬಂದಿರುವನು-ಪ್ರಕೃತ ಬಿಸಿಲಕಾಲ-ಕಾಲೇಜು ಮುಚ್ಚಲ್ಪಟ್ಟಿದ್ದಿತು-ಇಬ್ಬರೂ ಮನೆಗೆ ಬಂದಿದ್ದರು.

ರಮಣೀಮೋಹನನಿಗೆ ತಾಯಿಯಲ್ಲಿ ಪ್ರಾಣ-ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡಿದ್ದವನಿಗೆ ತಂದೆಯ ಗುರುತಾಗಲೀ ಸ್ಮರಣೆಯಾಗಲೀ ಇಲ್ಲ-ತಾಯಿಯೇ ತಂದೆತಾಯಿಯಾಗಿದ್ದಳು-ಅವಳೇ ಅಕ್ಕತಂಗಿ ಅಣ್ಣತಮ್ಮಂದಿರಾಗಿದ್ದಳು. ತಾಯಿಯನ್ನಗಲಿ ಕಲಿಕತ್ತಾದಲ್ಲಿರಬೇಕೆಂದರೆ ಅವನಿಗೆ ಮನಸ್ಸು ನಿಲ್ಲದು. ಆದರೆ ಉಪಾಯವಿಲ್ಲ-ಯತ್ನವಿಲ್ಲದೆ ವಿದ್ಯಾಭ್ಯಾಸಕ್ಕೆ ಸಲುವಾಗಿ ಕಲಿಕತ್ತೆಯಲ್ಲಿರಬೇಕಾಗಿದ್ದಿತು-ಅವನಿಗಿನ್ನೂ ಮದುವೆಯಿಲ್ಲ-ಹೆಣ್ಣೇನೋ ಗೊತ್ತಾಗಿದ್ದಿತು. ಬಿ. ಎ. ಪರೀಕ್ಷೆಯಾದ ಬಳಿಕ ಮದುವೆಯಾಗಬೇಕು.

ತಾಯಿ ವಿಶ್ವೇಶ್ವರಿಯು ಮಗನನ್ನು ಬಿಟ್ಟು ಮತ್ತಾರನ್ನೂ ಅರಿಯಳು-ಮಗನ ಮಂಗಳವನ್ನು ಬಿಟ್ಟು ಅವಳಿಗೆ ಬೇರೆ ಆಶೆ ಅಥವಾ ಯೋಚನೆಯಿರಲಿಲ್ಲ-ತನ್ನ ಪ್ರಾಣವನ್ನು, ಕಡೆಗೆ ಪ್ರಪಂಚವನ್ನೇ ಒತ್ತೆಟ್ಟು ಹೋಲಿಸಿದರೂ ತನ್ನ ಪ್ರಾಣಪುತ್ತಳಿಯಾಗಿದ್ದ ರಮಣೀಮೋಹನನಿಗೆ ಸಮನಾಗದು.

ಆದರೆ ವಿಶ್ವೇಶ್ವರಿಯು ಬಹಳ ಕ್ರೋಧವುಳ್ಳವಳಾಗಿಯೂ, ಮುಷ್ಕರದ ಸ್ವಭಾವದವಳಾಗಿಯೂ ಇದ್ದಳು-ಅವಳ ಇಷ್ಟಕ್ಕೆ ವಿರೋಧವಾಗಿ ಮಾತಾಡಲಾರಿಗೂ ಧೈರ್ಯವು ಸಾಲದು-ಆದರೆ ಒಬ್ಬಳುಮಾತ್ರ ಹಾಗೆ ಮಾತಾಡಲು ಧೈರ್ಯವುಳ್ಳವಳಾಗಿದ್ದಳು-ಆಗಾಗವಳಿಗೆ ಎದುರಿಸುತ್ತಿದ್ದಳು-ಮಧ್ಯೆಮಧ್ಯೆ ಮಾತಿಗೆ ಮಾತನ್ನು ಜೋಡಿಸುವವಳಾಗಿದ್ದಳು ಅವಳೊಬ್ಬ ದಾಸಿ-ಅವಳ ಹೆಸರು ವಾಮಾ-ಮೂವತ್ತು ವರ್ಷಗಳಿಂದ ವಾಮೆಯು ಮನೆಯಲ್ಲಿದ್ದು ಯಜಮಾನಿಯ ಮೇಲೆ ಅಧಿಕಾರವನ್ನು ನಡಿಸುತ್ತಿದ್ದಳು. ವಿಶ್ವೇಶ್ವರಿಯು ತೌರಮನೆಯಿಂದ ಅವಳನ್ನು ಸಂಗಡ ಕರೆತಂದಿದ್ದಳು. ವಿಶ್ವೇಶ್ವರಿಗೆ ಹತ್ತು ವರ್ಷದಲ್ಲಿ ಅತ್ತೆಯ ಮನೆಗೆ ಬಂದು ಹೊಸ ಸಂಸಾರವನ್ನು ಹೂಡಿದಾಗ ವಾಮೆಯೊಬ್ಬಳೇ ಅವಳಿಗೆ ಬೆಂಬಲವಾಗಿದ್ದಳು-ಅವಳೊಬ್ಬಳು ಮಾತ್ರ ವಿಶ್ವೇಶ್ವರಿಯ ವಿಶ್ವಾಸಕ್ಕೆ ಪಾತ್ರೆಯಾಗಿದ್ದಳು.

ವಾಮೆಯು ಜಾತಿಯಲ್ಲಿ ಕಾಯಸ್ಥೆ-ಮನೆಯ ಭಾಂಡಾರವೇ ಅವಳ ಸ್ವಾಧೀನವಲ್ಲಿದ್ದಿತು. ಮನೆಯಲ್ಲವಳಿಗೆ ನಿರ್ದಿಷ್ಟವಾದ ಕೆಲಸವಾವದೂ ಇಲ್ಲ-ಎಲ್ಲಾ ವಿಚಾರಗಳಲ್ಲಿಯೂ ಮೇಲ್ವಿಚಾರಣೆಯನ್ನು ಮಾಡುವಳು. ಮನೆಯ ಕೆಲಸಕಾರ್ಯಗಳೆಲ್ಲಾವವರಲ್ಲಿಯೂ ಕೊರತೆಯಿಲ್ಲದೆ ನೋಡಿಕೊಳ್ಳುವಳು-ದಾಸದಾಸಿಯರೆಲ್ಲರೂ ಅವಳಿಗೆ ಅಂಜುವರು. ಒಂದೊಂದು ಸಮಯದಲ್ಲಿ ಯಜಮಾನಿಯೂ ಅವಳಿಗೆ ಹೆದರದಿದ್ದಳೆಂದು ಹೇಳಲಾಗದು. ಅದುಕಾರಣ ಅವಳು ಯಜಮಾನಿಯ ಇಷ್ಟಕ್ಕೆ ವಿರೋಧವಾಗಿ ಭಿಕ್ಷುಕವಳಿಗೆ ಎರಡುತುತ್ತು ಅನ್ನವನ್ನು ಕೊಡಲು ಧೈರ್ಯಗೊಂಡಿದ್ದಳು.

ಮೂರನೆಯ ಪರಿಚ್ಛೇದ.

ಇಬ್ಬರೂ ಊಟವನ್ನು ಮಾಡಿದ ಬಳಿಕ ಮನೆಗೆ ಹಿಂದಿದ್ದ ಕೊಳದ ಸೋಪಾನಕ್ಕೆ ಹೋದರು. ಅಲ್ಲಿ ರಮಣೀಮೋಹನನು ಮೆಟ್ಲಮೇಲೆ ಕುಳಿತು ಕೊಳದಲ್ಲಿ ಮೀನುಗಳನ್ನು ಹಿಡಿಯುತ್ತಿದ್ದನು ಕೈಯಲ್ಲಿ ಹಿತ್ತಾಳೆಯ ಕಟ್ಟು ಹಾಕಿದ್ದ ಮೀನಗಾಳದ ಉದ್ದಕೋಲು-ಸೋಪಾನಕ್ಕೆ ರಡು ಪಾರ್ಶ್ವಗಳಲ್ಲಿಯೂ ಎರಡು ಹೂವಿನ ಮರಗಳು-ಶೀತಲವಾದಾ ಮರಗಳ ನೆರಳಿನಲ್ಲಿ ಕುಳಿತು ರಮಣೀಮೋಹನನು ಅರ್ವಿಂಗುಸಾಹೆಬನ ಪುಸ್ತಕದಲ್ಲಿ ಮೀನು ಹಿಡಿಯುವ ವಿಧಾನವನ್ನು ಕುರಿತು ಬರೆದಿರುವ ಕ್ರಮದ ಸತ್ಯಾಸತ್ಯವನ್ನು ಪರೀಕ್ಷಿಸುತಿದ್ದನು. ಆ ಸಮಯದಲ್ಲಿ ವಾಮೆಯೂ ಹುಡುಗಿಯೂ ಹೋಗಿ ಸೋಪಾನದ ಮೇಲೆ ನಿಂತರು. ರಮಣೀಮೋಹನನು ಹುಡುಗಿಯನ್ನು ನೋಡುತ "ವಾಮಾತಾಯಿ! ಹುಡುಗಿಯಾರು"? ಎಂದು ವಿಚಾರಿಸಿದನು.

ವಾಮಾ--ನನ್ನ ಮಗಳು,

ರಮಣೀ --ಅಲ್ಲ-ಹೇಳಬಾರದೆ?

ವಾಮಾ--ಹುಡುಗಿಯು ಭಿಕ್ಷವನ್ನು ಬೇಡಲು ಬಂದವಳು.

ರಮಣೀ:-ಭಿಕ್ಷದವಳಿಗೆ ಎಂತಹ ರೂಪಸೌಂದರ್ಯ!

ವಾಮಾ:-ರೂಪಸೌಂದರ್ಯಗಳು ಮತ್ತಾರಿಗೂ ಇರಬಾರದೆ-? ರೂಪಸೌಂದರ್ಯಗಳಿಗೆ ನಿಮ್ಮ ತಾಯಿಯೊಬ್ಬಳೇ ಅಧಿಕಾರಿಯೆ?

ರಮಣೀ:-ನಾನು ಹಾಗೆ ಹೇಳೆನು.

ವಾಮೆ:-ಹಾಗಾದರೆ, ನೀನು ಹೇಳುವುದೇನು?

ರಮಣೀ:-ಹುಡುಗಿಯ ಕೈಯಲ್ಲಿ ಭಿಕ್ಷದ ಜೋಳಿಗೆಯೂ ಕಾಣುವುದಿಲ್ಲ-ನೀನವಳಿಗೆ ಭಿಕ್ಷವನೀಡುವುದೂ ಕಾಣುವುದಿಲ್ಲ.

ವಾಮೆ:-ನಿಮ್ಮ ತಾಯಿಯು ಭಿಕ್ಷವನ್ನು ನೀಡಿಸಲಿಲ್ಲ.

ರಮಣೀ:-ಏಕೆ?

ವಾಮೆ:-ಮಧ್ಯಾಹ್ನದಮೇಲೆ ಗೃಹಸ್ಥರ ಮನೆಯಲ್ಲಿ ಭಿಕ್ಷವನೀಯುವುದಿಲ್ಲ.

ರಮಣೀಮೋಹನನು [illegible] ಎದ್ದು ನಿಂತನು. ವಾಮೆಯು, "ಎಲ್ಲಿಗೆ ಹೋಗುವೆ?" ಎಂದು ಕೇಳಿದಳು.

ರಮಣೀ:-ಭಿಕ್ಷವನ್ನು ತರುವುದಕ್ಕೆ.

ವಾಮೆ:-ನಿಮ್ಮ ತಾಯಿಯ ಇಷ್ಟಕ್ಕೆ ವಿರೋಧವಾಗಿ ಭಿಕ್ಷವನ್ನು ಕೊಡುವಿಯಾ?

ರಮಣೀ:-ಇಲ್ಲ ಹಾಗೆ ಮಾಡೆನು.

ವಾಮೆ:-ಹಾಗಾದರೆ ಏನನ್ನು ಮಾಡುವೆ?

ರಮಣೀ:-ಹುಡುಗಿಯು ಬೀದಿಯಲ್ಲಿ ಬಂದು ನಿಂತಿರಲಿ ನಾನಲ್ಲಿಗೆ ಭಿಕ್ಷವನ್ನು ತಂದುಕೊಡುವೆನು.

ವಾಮೆ:-ಹಾಗಾದರೆ, ಹೋಗು.

ರಮಣೀಮೋಹನನು ಬೇಗನೆ ಹೊರಟುಹೋದನು. ವಾಮೆಯೂ ಹುಡುಗಿಯೂ ಕೊಳಕ್ಕಿಳಿದು ಕೈಬಾಯಿಗಳನ್ನು ತೊಳೆದುಕೊಂಡು ಸೋಪಾನದ ಮೇಲೆ ಬಂದರು-ವಾಮೆಯು ಹುಡುಗಿಯನ್ನು ಕುರಿತು, "ನಿನ್ನ ಹೆಸರೇನು?" ಎಂದು ವಿಚಾರಿಸಿದಳು--

"ನೀರದೆ."

"ನೀನಿರುವ ಮನೆಯ ಮುದುಕಿಯ ಹೆಸರೇನು?"

"ಕಾಳಿ."

"ಅವಳಾವ ಜಾತಿಯವಳು ?"

"ಕಾಯಸ್ಥೆ."

"ಅವಳಿಗೆಷ್ಟು ವಯಸ್ಸು."

"ಅವಳು ಮುದುಕಿ—ಕೂತರೆ ಏಳಲಾರಳು."

ಅಷ್ಟರೊಳಗೆ ರಮಣೀಮೋಹನನು ಬಂದನು. ಅವನ ಎಡಗೈಯಲ್ಲೊಂದು ಕಂಚಿನತಟ್ಟೆಯ ತುಂಬ ಅಕ್ಕಿ-ಬಲಗೈಯಲ್ಲೊಂದು ರೂಪಾಯಿ-ರಮಣೀಮೋಹನನು ಭಿಕ್ಷದವಳಿಗೆ ಭಿಕ್ಷವನೀಡಲು ಅವಳೆದುರಿಗೆ ಬಂದು ನಿಂತನು. ಹುಡುಗಿಯು ಸೆರಗನ್ನು ತೋರಲಿಲ್ಲ-ಭಿಕ್ಷವನ್ನೂ ತೆಗೆದುಕೊಳ್ಳಲಿಲ್ಲ-ಅವಳು ಮುಖತಗ್ಗಿದವಳಾಗಿ ಮೌನವಾಗಿ ನಿಂತಿದ್ದಳು-ಕಮಲವನ್ನು ಧಿಕ್ಕರಿಸುತ್ತಿದ್ದವಳ ಮುಖವು ಲಜ್ಜೆಯಿಂದ ಆರಕ್ತಿಮವಾಯಿತು-ಕಾದಂಬಿನೀ ಸದೃಶವಾದವಳ ನಿಬಿಡಕೇಶದಾಮವು ಮುಖದಮೇಲೂ ಬೆನ್ನಿನಮೇಲೂ ವಕ್ಷದಮೇಲೂ ಬಿದ್ದು ಚಂಚಲವಾಗುತ್ತಿದ್ದಿತು-ಹರಕು ಬಟ್ಟೆಯ ಮಧ್ಯದಿಂದ ಅವಳ ಅಂಗಗಳ ಕಾಂತಿಯು ಹೊರಗ ಹೊರಟು ಕಣ್ಣುಗಳನ್ನು ಚುಚ್ಚುತಿದ್ದಿತು-ಭಾದ್ರಪದ ಮಾಸದ ಕಡೆಯ ಭಾಗದಲ್ಲಿ ಸೆಫಾಲಿಕಾವೃಕ್ಷದಲ್ಲಿ ಅಲ್ಲಲ್ಲೊಂದು ಹೂವು ಅರಳಿದ್ದಂತೆ ಕಣ್ಗೊಳಿಸುವುದು.

ರಮಣೀಮೋಹನನು "ಭಿಕ್ಷವನ್ನು ತೆಗೆದುಕೊ" ಎಂದನು.

ಹುಡುಗಿಯು ಕದಲಲಿಲ್ಲ—ಲಜ್ಜೆಯಿಂದ ಭೂಮಿಗಿಳಿದು ಹೋದಳು-ಭಿಕಾರಿಣಿಗೆ ಲಜ್ಜೆಯೆ! ಎಷ್ಟೋ ಸ್ಥಳಗಳಲ್ಲಿ ಅವಮಾನಿತೆಯಾಗಿದ್ದರೂ ಲಜ್ಜೆಯಿಲ್ಲ-ಎಷ್ಟೊಂದು ಧನಾಢ್ಯರ ಮನೆಯ ಬಾಗಿಲಲ್ಲಿಯೂ ಗೃಹಸ್ಥರ ಮನೆಯ ಬಾಗಿಲಲ್ಲಿಯೂ ನಿಂತು ಭಿಕ್ಷವನ್ನು ಬೇಡಲು ಸಂಕೋಚವಿಲ್ಲ-ಅಂತಹವಳಿಂದು ಭಿಕ್ಷವನ್ನು ಬೇಡಿ ಭಿಕ್ಷವನೀಡಿದವರೂ ತೆಗೆದುಕೊಳ್ಳಲು ಕುಂಠಿತೆಯಾದಳೇಕೆ ?

ವಾಮೆಯು, "ಭಿಕ್ಷವನ್ನು ತೆಗೆದುಕೊ" ಎಂದು ಹೇಳಿ ರಮಣೀಮೋಹನನನ್ನು ಕುರಿತು, "ಆವದರಲ್ಲಿ ತೆಗೆದುಕೊಳ್ಳಲೆಂದು ಯೋಚಿಸು

ವಂತಿದೆ-ಬಟ್ಟೆಯಾದರೋ ಕತಛಿದ್ರ-ನೀನಾ ಕಂಚಿನ ತಟ್ಟೆಯನ್ನು ಕೊಟ್ಟುಬಿಡು, ನಾನು ಯಜಮಾನಿಗೆ ಹೇಳುವೆನು" ಎಂದಳು.

ರಮಣೀ—ಮಾಮಾಜಿ! ಒಂದು ಬಟ್ಟೆಯನ್ನು ತಂದುಕೊಡಲೆ?

"ಕೊಡು."

ರಮಣೀಮೋಹನನು ಓಡಿ ಹೋಗಿ ತನ್ನದೊಂದು ಹೊಸಪಂಚೆಯನ್ನು ತೆಗೆದುಕೊಂಡು ಬಂದು ಅದನ್ನು ಕಂಚಿನತಟ್ಟೆಯ ಮೇಲಿಟ್ಟು, ಕೋಮಲಕಂಠದಿಂದ, "ತೆಗೆದುಕೊ" ಎಂದನು.

ಹುಡುಗಿಯು ಅದನ್ನು ತೆಗೆದುಕೊಳ್ಳಲಿಲ್ಲ-ತೆಗೆದುಕೊಳ್ಳುವುದಕ್ಕೆ ಬದಲಾಗಿ ಬಹಳವಾಗಿ ಅತ್ತಳು-ಅಳುವನ್ನು ಮುಚ್ಚಿಕೊಳ್ಳುವುದಕ್ಕೆ ಸಲವಾಗಿ ಮುಖವನ್ನು ತಿರಿಗಿಸಿಕೊಂಡು ನಿಂತಳು, ಮೆಲ್ಲಮೆಲ್ಲನೆ ಬಾಗಿಲ ಬಳಿ ಹೋಗಿ ನಿಂತಳು. ಬಾಗಿಲಬಿಟ್ಟು ಹೋದರೆ, ಹೊರಗೆ ಬೀದಿ-ಹುಡುಗಿಯು ಬಾಗಿಲನ್ನು ತೆರೆದುಕೊಂಡು ಬೀದಿಯಲ್ಲಿ ಹೋಗಿ ನಿಂತಳು. ಆದರೆ ಮಾಮೆಯು ಅವಳನ್ನು ಬಿಡಲಿಲ್ಲ. ಅವಳು ಓಡಿಹೋಗಿ ಹುಡುಗಿಯನ್ನು ಹಿಡಿದುಕೊಂಡಳು-ಬಹಳ ಬಲವಂತ ಮಾಡಿದ ಬಳಿಕ ಹುಡುಗಿಯು ಅಕ್ಕಿಯನ್ನು ತೆಗೆದುಕೊಂಡಳು-ಬಟ್ಟೆಯನ್ನಾಗಲೀ ಕಂಚನ್ನಾಗಲೀ ರೂಪಾಯಿಯನ್ನಾಗಲೀ ತೆಗೆದುಕೊಳ್ಳದೆ ಹೋದಳು.

ನಾಲ್ಕನೆಯ ಪರಿಚ್ಛೇದ.

ಕೃಷ್ಣಪುರವು ಬಹಳದೂರ—ಎರಡು ಹರಿದಾರಿಯಿರಬಹುದು. ಹುಡುಗಿಯು ಹೋಗುವುದಕ್ಕೆ ಸಂಜೆಯಾಗುತ ಬಂದಿತು_ಹುಡುಗಿಯು ಕಾಳಿಯ ಮನೆಯ ಬಾಗಿಲಿಗೆ ಹೋಗಿ ನೋಡಿದಳು-ಬಾಗಿಲು ಮುಚ್ಚಿ ಒಳಗಡೆ ಅಗಣಿಯು ಹಾಕಿದ್ದಿತು. ಹುಡುಗಿಯು ಕೂಗಿದಳು-ಒಳಗಿನಿಂದ ಮುದುಕಿಯು ಕೋಪಗೊಂಡು, "ನಿನ್ನನ್ನಿಂದು ಮನೆಯೊಳಗೆ ಕಾಲಿಡಿಸಗೊಡಿಸುವುದಿಲ್ಲ-ಬೆಳಗ್ಗೆ ಮುಂಜಾನೆ ಹೊರಗೆ ಹೋದವಳು ಈಗ ಬಂದಿದ್ದಾಳೆ! ಮನೆಯ

ಕೆಲಸಕಾರ್ಯಗಳನ್ನು ಮಾಡುವವರಾರು? ಹೋಗು-ದೂರ ಹೋಗು-ನಿನಗೆನ್ನ ಮನೆಯಲ್ಲಿನ್ನು ಸ್ಥಳವು ಸಿಗದು" ಎಂದು ಹೇಳಿದಳು.

ಹುಡುಗಿಯು ಹೊರಗಿನಿಂದ, "ಇನ್ನು ಮುಂದೆ ಹೊತ್ತುಮಾಡುವುದಿಲ್ಲ, ಅಜ್ಜಿ! ನಿತ್ಯನಿತ್ಯವೂ ಒಂದೊಂದು ಮನೆಯಲ್ಲಿ ಭಿಕ್ಷವ ಬೇಡಿದ್ದೆನು; ಆದುದರಿಂದ ಊರನ್ನು ಬಿಟ್ಟು ಬೇರೆ ಊರಿಗೆ ಹೋಗಿದ್ದೆನು. ನಾಳೆಯಿಂದ ಹೋಗುವುದಿಲ್ಲ-ಇಂದು ಮನೆಯಲ್ಲಿರಲು ಅಪ್ಪಣೆಯನ್ನು ಕೊಡು" ಎಂದಳು.

ಮುದುಕಿ—ನೀನೇನನ್ನು ಮಾಡಿದರೂ ನಿನ್ನನು ಮನೆಯೊಳಗೆ ಬರಗೊಡಸೆನು.

ಹುಡುಗಿ-ನೀನು ಆಶ್ರಯವನ್ನು ಕೊಡದಿದ್ದರೆ ಮತ್ತೆಲ್ಲಿಗೆ ಹೋಗಲಿ?

ಮುದುಕಿ-ನಿನಗಿಷ್ಟಬಂದೆಡೆ ಹೋಗು-ನಿನಗೆ ಕ್ಷೇಮಚಿಂತಕರನೇಕರಿರುವರು, ಅವರ ಬಳಿ ಹೋಗು.

ಹುಡುಗಿ ನಿನ್ನನ್ನು ಬಿಟ್ಟರೆನನಗೆ ಮತ್ತಾರೂ ಇಲ್ಲ.

ಮುದುಕಿ—ಜಕ್ಕಜವ್ವನಿ ಚೇಡಿಗಿಯಿಂದ ಪ್ರಯೋಜನವಿಲ್ಲ-ಆರೂ ಇಲ್ಲದಿದ್ದರೆ ಮರದ ಕೆಳಗೆ ಮಲಗಿರು.

ಹುಡುಗಿಯು ಬಾಗಿಲಲ್ಲಿ ಕುಳಿತಿದ್ದಳು--ಮುದುಕಿಯು ಬಾಗಿಲ ತೆಗೆಯಲಿಲ್ಲ-ಹೊತ್ತು ಮುಳುಗಿತು-ನಾಲ್ಕುಕಡೆ ಕತ್ತಲು ಕವಿತು ಮರಗಳನೆಲ್ಲಾ ಮುಚ್ಚಿಕೊಂಡಿತು-ಹುಡುಗಿಯನ್ನೂ ಮುಚ್ಚಿಕೊಂಡಿತು. ಆಕಾಶದಲ್ಲಿ ನಕ್ಷತ್ರಗಳು ಒಂದೊಂದಾಗಿ ತಲೆದೋರಿದುವು-ಹುಡುಗಿಯು ಮುಖವೆತ್ತಿ ಅವುಗಳನ್ನು ನೋಡತೊಡಗಿದಳು-ಅಂಧಕಾರಮಯವಾದ ಭೂಮಿಯಮೇಲೆ ನೋಡುವುದಕ್ಕಾವುದೂ ಇರಲಿಲ್ಲವಾಗಿ ಆಕಾಶದ ಉಜ್ವಲ ನಕ್ಷತ್ರಗಳನ್ನು ನೋಡುತ್ತಿದ್ದಳು. ನಕ್ಷತ್ರಗಳು ಅನೇಕ ಅವುಗಳನ್ನೆಲ್ಲಾ ಒಂದೊಂದಾಗಿ ನೋಡುತ್ತಿದ್ದಳು-ಹುಡುಗಿಯು ಎವೆ ಇಕ್ಕದೆ ಒಂದೇ ನಕ್ಷತ್ರವನ್ನು ನೋಡುವ ರೀತಿಯನ್ನಿನ್ನೂ ಕಲಿತಿರಲಿಲ್ಲ-ಜೀವನದ ಕಡೆಯ ಭಾಗದಲ್ಲಿ ನಾವದನ್ನು ಕಲಿಯುವೆವು-ಪ್ರಪಂಚವೆ ನಮಗದನ್ನು ಕಲಿಸುವುದು-ದುಃಖದಲ್ಲಿ ಮುಳುಗಿದ್ದರೂ ನೀರದಯು ಹುಡುಗಿ.

ರಾತ್ರಿ ಒಂಭತ್ತು ಘಳಿಗೆಯಾಯಿತು-ಎರಡು ನರಿಗಳು ಮುಖವೆತ್ತಿ ಅವಳನ್ನು ನೋಡಿತಿದ್ದುದನ್ನು ಕಂಡು ಹುಡುಗಿಯು ಭಯಗೊಂಡಳು. ಆಗವಳು ಕಾತರಕಂಠೆಯಾಗಿ, "ಅಜ್ಜಿ ! ಬಾಗಿಲ ತೆಗೆ, ನಾನಿನ್ನು ಇಂತಹ ಕೆಲಸವನ್ನು ಮಾಡೆನು" ಎಂದು ಕೂಗಿದಳು.

ಹುಡುಗಿಯ ಕೂಗು ಗ್ರಾಮದ ಗಸ್ತಿನವನ ಕಿವಿಗೆ ಬಿದ್ದಿತು-ಗಸ್ತಿನವನು ಬಂದು ಅವಳ ಕೈಯನ್ನು ಹಿಡಿದೆಳೆದು ಭೈರವಕಂಠದಲ್ಲಿ, "ಸೀನಾರು?" ಎಂದನು.

ಹುಡುಗಿಯು ಭೀತಿಗೊಂಡು ಅಳುವುದಕ್ಕೆ ತೊಡಗಿದಳು-ಅವಳು ಕಳವು ಮಾಡತಕ್ಕವಳಲ್ಲವೆಂದು ತಿಳಿದರೂ ಗಸ್ತಿನವನು, ಹುಡುಗಿಯನ್ನು ಕೆಟ್ಟನಡತೆಯುವಳೆಂದು ಹಿಡಿದುಕೊಂಡೊಯ್ದರೆ ತನಗೆ ಅತುಲ ಕೀರ್ತಿಯುಂಟಾಗುವುದೆಂಬಾಶೆಯುಳ್ಳವನಾಗಿದ್ದನು-ಮುಖವ ನೋಡಿದ ಬಳಿಕ ಹುಡುಗಿಯೆಂದು ಕಂಡು, ನಿರಾಶನಾಗಿ, "ಸೀನಾರು ?" ಎಂದು ಕೇಳಿದನು.

ಹುಡುಗಿಯು ಭಯದಿಂದ ನಡುಗುತ್ತ ಅಳುತ್ತ, "ನಾನು, ಸೀರಿ!" ಎಂದಳು.

ಹುಡುಗಿಯ ಹೆಸರು ಸೀರಪೆ—ಜನರವಳನ್ನು "ಸೀರಿ" ಎಂದು ಕರೆಯುವರು-ಅವಳ ಹೆಸರನ್ನು ಕೇಳಿದ ಬಳಿಕ ಗಸ್ತಿನವನಿಗೆ ಗುರುತಾಗಿ, "ಇಲ್ಲಿ ಕುಳಿತಿರುವುದೇಕೆ ?" ಎಂದು ವಿಚಾರಿಸಿದನು.

"ಅಜ್ಜಿಯು ಮನೆಯೊಳಗೆ ಹೋಗಗೊಡನಳು."

"ಏಕೆ ?"

"ತಿರುಪೆ ಎತ್ತಲು ತಿರಿಯುವುದಕ್ಕೆ ಹೋಗಿದ್ದವಳು ಹಿಂದಿರುಗಿ ಬರಲು ಹೊತ್ತಾಯಿತೆಂದು."

ಅದನ್ನು ಕೇಳಿ ಗಸ್ತಿನವನು ಗರ್ದಭನಿಂದಿತಕಂಠದಿಂದ ಮುದುಕಿಯನ್ನು ಕೂಗಿ ಕರೆದನು. ಅವನಾ ಚೀತ್ಕಾರದ ಧ್ವನಿಯು ಪ್ರತಿಧ್ವನಿಗೊಂಡು ನೆರೆಹೊರೆಯವರೆಲ್ಲರೂ ಎಚ್ಚರಗೊಂಡರು-ಮುದುಕಿಯು ಮನೆಯೊಳಗಿನಿಂದ, "ಅದಾರು ?" ಎಂದಳು.

ಗಸ್ತಿನವನು – (ಘಟ್ಟಿಯಾಗಿ)-ಬಾಗಿಲ ತೆಗಿ-ನಿನ್ನ ಮೊಮ್ಮಗಳನ್ನು ಒಳಗೆ ಕರೆದುಕೊ.

ಮುದುಕಿ--ನಾನವಳಿಗೆ ಮನೆಯಲ್ಲಿರಗೊಡಿಸೆನು.

ಗಸ್ತಿನವ -ಮನೆಯಲ್ಲಿಟ್ಟುಕೊಳ್ಳಬೇಕು-ತೀರವ ಚಿಕ್ಕ ಹುಡುಗಿಯು ಹೊರಗೆ ಬಿದ್ದಿದ್ದು ನೀನು ಮುದಿಗೊಡ್ಡು ಮನೆಯೊಳಗೆ ಮಲಗಿರುವಿಯೊ ?

ಮುದುಕಿಯು ಕೋಲೂರಿಕೊಂಡು ಗೊಣಗುಟ್ಟುತ್ತ ಬಂದು ಬಾಗಿಲ ತೆರೆದಳು. ಹುಡುಗಿಯು ಸಂಕುಚಿತಭಾವದಿಂದ ಮನಯೊಳಗೆ ಬಂದಳು-ಗಸ್ತಿನವನು ಹೊರಟು ಹೋದನು.

ಮುದುಕಿಯು ಮನೆಯೊಳಗೆ ಬಂದು, ಸ್ವಲ್ಪ ಹೊತ್ತು ಕಿವಿಗೊಟ್ಟು ಆಲೈಸಿ ಹೊರಗೆ ಆರೂ ಇಲ್ಲವೆಂದು ತಿಳಿದು ಬಳಿಕ ದೀಪವನ್ನು ಹಚ್ಚಿಸಿ, ಪುನಃ ಸ್ವಲ್ಪ ಹೊತ್ತು ಉತ್ಕರ್ಣೆಯಾಗಿ ಆಲೈಸಿ ಬೀದಿಯಲ್ಲಾರೂ ಇಲ್ಲವೆಂದು ಸ್ಥಿರಪಡಿಸಿಕೊಂಡು, ಬಂದು ಸರ್ಪದಂತೆ ಬುಸುಗುಟ್ಟುತ್ತ, ಹುಡುಗಿಯನ್ನು ಕುರಿತು, “ನಿನಗಿಂದು ಪುಷ್ಟಿದ ಹಬ್ಬ ಮಾಡುತ್ತೇನೆ” ಎಂದಳು.

ಹುಡುಗಿಯು ಬಾಗಿಲ ಪಾರ್ಶ್ವದಲ್ಲಿ ಸಾಪರಾಧಿಯಂತೆಯಾಗಿ ನಿಂತಿದ್ದವಳು, ಕಾತರಕಂಠದಿಂದ, “ಅಜ್ಜಿ! ಇನ್ನು ಮುಂದೆ ಹೀಗೆ ಮಾಡುವುದಿಲ್ಲ!” ಎಂದು ಮೊರೆಯಿಟ್ಟಳು.

ಮುದುಕಿಯ ಕೋಪವು ಮತ್ತಷ್ಟು ಹೆಚ್ಚಿ, “ನಿನಗೆ ಸುಮ್ಮನಾಗಿ ಇಂದೆನಗೆ ಉಪಮಾನ! ಅದನ್ನು ಬಲ್ಲೆಯಾ? ನಿನಗಿಂದು ನಿಸ್ತಾರವಿಲ್ಲ-ತೋರುವೆನು, ನೋಡು” ಎಂದಳು.

ಹುಡುಗಿ -ಈಗಲೇ ಅಡಿಗೆಯನ್ನು ಮಾಡಿ ನಿನಗೆ ಬಡಿಸುತ್ತೇನೆ.

ಮುದುಕಿಯು ಅದನ್ನು ಕಿವಿಗೆ ಹಾಕಿಕೊಳ್ಳದೆ, ಕೈಲಿದ್ದ ಕೋಲಿಂದ ಕೋಮಲವಾದವಳ ಭುಜದ ಮೇಲೆ ಬಲವಾಗಿ ಹೊಡೆದಳು-ಹಾಗೆ ಪೆಟ್ಟನ್ನು ತಿನ್ನುವುದು, ಸಕಾರಣವಾಗಲಿ ಅಕಾರಣವಾಗಲಿ, ನಿತ್ಯವು ಹುಡುಗಿಯ ಹಣೆಯಲ್ಲಿ ಬರೆದಿದ್ದಿತು. ಆದರೆ ಇಂದಿನ ಪೆಟ್ಟು ಬಹಳ ಬಲವಾದುದು-ಪೆಟ್ಟಿನ ಮೇಲೆ ಪೆಟ್ಟು ಬಿದ್ದು ಹುಡುಗಿಯು ತಡೆಯಲಾರದೆ ನಡುಗುತ್ತ ಕುಳಿತುಬಿಟ್ಟಳು ಆದರೂ ಮುದುಕಿಯು ಬಿಡಲಿಲ್ಲ-ಹುಡುಗಿಯು ಸೆರಗಿನಲ್ಲಿ-ಕಟ್ಟಿಕೊಂಡಿದ್ದ, ಅಕ್ಕಿಯು ನೆಲದ ಮೇಲೆ ಚೆಲ್ಲಿ ಎರಚಾಡಿ ಹೋಯಿತು-ಅದನ್ನು

ಕಂಡು ಮುದುಕಿಯು ಮತ್ತೂ ರೇಗಿ ಮುಖ ಮೋರೆಯನ್ನು ನೋಡದೆ ಹುಡುಗಿಯನ್ನು ಹೊಡಿದಳು-ಹುಡುಗಿಯು ಮಾತಾಡದೆ ಎಲ್ಲವನ್ನು ಸಹಿಸಿ ಕೊಂಡವಳು, ಪೆಟ್ಟನ್ನು ತಡಿಯಲಾರದೆ ಕಟ್ಟಕಡೆಗೆ ಅವಸನ್ನೆಯಾಗಿ ಜ್ಞಾನವು ತಪ್ಪಿ ನೆಲದ ಮೇಲೆ ಬಿದ್ದು ಬಿಟ್ಟಳು.

ಐದನೆಯ ಪರಿಚ್ಛೇದ.

ಮರುದಿನ ಬೆಳಿಗ್ಗೆ ಗದ್ದಲವೋಗದ್ದಲ-ಮುದುಕಿಯ ಮನೆಯ ಹೊರಗಡೆ, ಒಳಗಡೆ, ಎಲ್ಲೆಲ್ಲಿಯೂ ಕೆಂಪು ಸೀಲ ರುಮಾಲುಗಳನ್ನುಳ್ಳ ಪೋಲಿಸಿನವರು ತುಂಬಿದ್ದರು. ಗ್ರಾಮದ ಯುವಕರು ಕುತೂಹಲರಾಗಿ ಕನಸ್ಟೆಬಲರ ಹಿಂದೆ ಸ್ವಲ್ಪ ದೂರದಲ್ಲಿ ಗುಂಪುಗುಂಪಾಗಿ ಬಂದು ನಿಂತಿದ್ದರು. ಕುಲವಧುಗಳು ತಲೆಯ ಮೇಲೆ ಕೊಡಗಳನ್ನು ಹೊತ್ತುಕೊಂಡು ವೃಕ್ಷಾಂತರಾದೊಳು ನಿಂತು ಪೋಲಿಸಿನವರನ್ನು ನೋಡುತ್ತಿದ್ದರು-ಊರಿನವರಲ್ಲರೂ ಬಂದು ಸೇರಿದ್ದರು-ಅಂದು ಊರೊಳಗೆ ಆರ ಮನೆಯಲ್ಲಿಯೂ ಒಲೆ ಹಚ್ಚಿರಲಿಲ್ಲ.

ಘಟನೆಯು ಬಹಳ ಹೆಚ್ಚಿನದು-ಭಿಕಾರಿಣಿಯಾಗಿದ್ದ ಮುದುಕಿಯನ್ನು ರಾತ್ರಿ ಆರೋ ಖೂನು ಮಾಡಿದ್ದಾರೆ-ಅವಳ ಮೈಮೇಲೆ ಘಾಯದ ಗುರುತಾಗಲಿ ಪೆಟ್ಟಿನ ಗುರುತಾಗಲಿ ಏನದೂ ಕಂಡು ಬರಲಿಲ್ಲ-ಆದರೂ ಅವಳು ಖೂನಾದಳೆಂದು ಸುದ್ದಿಯು ಎಲ್ಲೆಲ್ಲಿಯೂ ಹರಡಿದ್ದಿತು-ಮುದುಕಿಯ ಬಾಯಿನ ಬಳಿ ಮತ್ತು ಅವಳ ಬಳಿಯಲ್ಲಿದ್ದೊಂದು ಮಣೆಯ ಮೇಲೆ ಸ್ವಲ್ಪ ರಕ್ತದ ಕಲೆಗಳಿದ್ದುವು-ಮುದುಕಿಗೆ ಸ್ವಜನರಾರೂ ಇಲ್ಲ-ಜೀರ್ಣ ಕುಟೀರದಲ್ಲೊಬ್ಬಳೇ ವಾಸವಾಗಿದ್ದಳು-ಈಗ್ಗೆ ಒಂದು ವರ್ಷದಿಂದ ಹುಡುಗಿಯೊಬ್ಬಳು ಅವಳೊಂದಿಗೆ ವಾಸಮಾಡುತಿದ್ದಳು-ಈಗಾ ಹುಡುಗಿಯು ಪೋಲಿಸ ದರೋಗನೆದುರಿಗೆ ಸಂಕುಚಿತಭಾವದಿಂದ ನಿಂತಿದ್ದಾಳೆ!

ದರೋಗನು ಹುಡುಗಿಯನ್ನು ಕುರಿತು, "ನೀನಾರು?" ಎಂದು ಕೇಳಿದನು.

ಹುಡುಗಿ—ನಾನು ನೀರದೆ.

ದರೋಗ—ನೀನಿಲ್ಲಿ ಎಷ್ಟು ದಿನಗಳಿಂದ ಇರುತ್ತಿ?

ಹುಡುಗಿ—ಒಂದು ವರ್ಷದಿಂದ.

ದರೋಗ—ಅದಕ್ಕೆ ಮೊದಲು ಎಲ್ಲಿದ್ದೆ?

ಹುಡುಗಿಯು ಉತ್ತರವನ್ನು ಕೊಡಲಿಲ್ಲ—ಸುಮ್ಮನಿದ್ದಳು-ದರೋಗನು ಪೀಡಿಸಿ ಬಲಾತ್ಕಾರಮಾಡಿ ಕೇಳಿದನು-ಆದರೂ ಹುಡುಗಿಯು ಸುಮ್ಮನಿದ್ದಳು-ದರೋಗನು ಕೈಲಿದ್ದ ಬೆತ್ತದಿಂದ ಹುಡುಗಿಯನ್ನು ಹೊಡಿದನು-ಆದರೂ ಹುಡುಗಿಯು ಉತ್ತರವನ್ನು ಕೊಡಲಿಲ್ಲ-ಉಪಾಯಾಂತರ ತೋರದೆ ದರೋಗನಾ ಪ್ರಶ್ನೆಯನ್ನು ಬಿಟ್ಟು, "ನಿನ್ನ ಮನೆಯಿರುವುದೆಲ್ಲಿ?" ಎಂದು ಕೇಳಿದನು.

ಹುಡುಗಿ—ನನಗೆ ಮನೆಯಿಲ್ಲ.

ದರೋಗ—ನಿನ್ನ ತಂದೆಯ ಹೆಸರೇನು?

ಹುಡುಗಿ—ನಾನರಿಯೆ.

ದರೋಗ—ನೀನೆಲ್ಲವನ್ನೂ ಮರೆಮಾಚುತ್ತಿ-ನೀನೊಬ್ಬ "ಪಕ್ಕಾ ಬದಮಾಯಿಷಿ!"

ಹುಡುಗಿ—ನನಗೆ ತಿಳಿದಿರುವ ಮಟ್ಟಿಗ ನಿಜವನ್ನು ಹೇಳುವೆನು-ನಮ್ಮ ಮನೆಯಿರುವುದೆಲ್ಲಿಯೋ ಅದನಗೆ ತಿಳಿಯದು-ನನಗೆ ತಂದೆ ತಾಯಿಗಳು ಇದ್ದಾರೋ ಇಲ್ಲವೋ ಅದೂ ನನಗೆ ಗೊತ್ತಿಲ್ಲ.

ದರೋಗ—ಆ ಮಾತು ಹೋಗಲಿ-ಈ ವಿಷ್ಯಮಾನದಲ್ಲಿ ನೀನೇನನ್ನು ಬಲ್ಲೆ?

ಹುಡುಗಿ—ಮುದುಕಿಯ ಹೊಡೆತದಿಂದ ಜ್ಞಾನವು ತಪ್ಪಿ ಮೂರ್ಛೆಗೊಂಡಿದ್ದೆನು-ಬೆಳಗ್ಗೆ ಮೂರ್ಛೆ ತಿಳಿದು ಎದ್ದು ನೋಡಿದಾಗ ಮುದುಕಿಯು ಸತ್ತಿದ್ದಳು.

ದರೋಗ—ನೀನು ಹೇಳುವುದು ಸುಳ್ಳು-ನೀನೇ ಮುದುಕಿಯನ್ನು ಹೊಡಿಯುತ್ತಿದ್ದೆ.

ರಾತ್ರಿಯ ಗಸ್ತಿನವನು ಅಪ್ಪಣೆಯ ಪ್ರಕಾರ ಬಂದು ನಿಂತು, ರಾತ್ರಿ ತಾನು ಹುಡುಗಿಯನ್ನು ಕಂಡ ಸ್ಥಿತಿಯನ್ನು ಕುರಿತು ವಾಜ್ಮೂಲವನ್ನು ಕೊಟ್ಟನು-ಹುಡುಗಿಯು ಮುದುಕಿಯನ್ನು ಹೊಡಿಯಲು ಬೇರೆ ಜನರನ್ನು ಕರೆತರುವುದಕ್ಕೆ ಸಲವಾಗಿ ಹೊರಗೆ ಪೋಗಿದ್ದಳೆಂದು ದರೋಗನು ಖಂಡಿತ ಮಾಡಿಕೊಂಡು, ಬಳಿಕ ನಾಲ್ಕಾರು ಮಂದಿ ನೆರೆಯವರನ್ನು ಕರೆಯಿಸಿದನು. ಅವರು ಬಂದು, ಸಮರಾತ್ರಿಯಲ್ಲಿ ಹೊಡಿಯುತ್ತಿದ್ದ ಶಬ್ದವನ್ನು ಕೇಳಿದೆವೆಂದು ಹೇಳಿದರು-ದರೋಗನು ಅವರನ್ನು ಕುರಿತು, "ಮಧ್ಯೆಮಧ್ಯೆ ಹುಡುಗಿಯು ಮುದುಕಿಯನ್ನು ಹೊಡಿಯುತ್ತಿದ್ದಳಲ್ಲವೆ?" ಎಂದು ಪ್ರಶ್ನೆಯನ್ನು ಮಾಡಿದನು.

ಸಾಕ್ಷಿಗಳು ಹಾಗೆಂದು ಹೇಳಲು ಹಿಂದು ಮುಂದು ನೋಡುತ್ತಿದ್ದರು-ಏಕೆಂದರೆ, ಹುಡುಗಿಯು ಮುದುಕಿಯನ್ನು ಹೊಡೆದುದನ್ನು ಅವರಾವಾಗಲೂ ನೋಡಿರಲಿಲ್ಲ-ಮುದುಕಿಯೇ ಹುಡುಗಿಯನ್ನು ಹೊಡೆಯುತ್ತಿದ್ದುದನ್ನು ಕಂಡಿದ್ದರು-ಆದರೆ ದರೋಗನ ಹೊಡೆತದಿಂದ ಅವರು ಬೇರೆ ವಿಧವಾಗಿ ಹೇಳಿದರು-ದರೋಗನು ಖೂನಿಯು ಪತ್ತೆಯಾಯಿತೆಂದು ತಿಳಿದು ಪ್ರಸನ್ನವದನನಾಗಿ ಜರಬಿನಿಂದ ಕುಳಿತು ನೇತ್ರಪಸ್ತನಾಗಿ ಆಸ್ಫಾಲವಾಡುತ್ತ ಹುಡುಗಿಯನ್ನು ಕುರಿತು, "ಮಾಲನ್ನು ಎಲ್ಲಿಟ್ಟಿರುವೆ? ಹೇಳು" ಎಂದು ರುದ್ರಕಂಠದಿಂದ ಪ್ರಶ್ನೆಯಂ ಮಾಡಿದನು.

ಹುಡುಗಿ—ಮಾಲೆಂದರೇನು ?

ದರೋಗ- ನಿನ್ನ ನವ ತೋರಬೇಡ-ಹಣವನ್ನು ಎಲ್ಲಿಟ್ಟಿರುವೆ? ತೋರು.

ಹುಡುಗಿ-- ಹಣಕಾಸಾವದೂ ನನ್ನಲ್ಲಿಲ್ಲ.

ದರೋಗ-- ಮತ್ತೂ ಪ್ರೋಕರಿತನವೆ! ನೋಡಿಕೊ.

ಹೀಗೆಂದು ಹೇಳಿ ಹುಡಗಿಯ ಬೆನ್ನಿನಮೇಲೂ ತೋಳುಗಳಮೇಲೂ ಬೆತ್ತದಿಂದ ಪುನಃ ಪುನಃ ಹೊಡಿದನು. ಹುಡುಗಿಯ ಕೋಮಲಾಂಗಗಳಿಂದ ರಕ್ತಧಾರೆಯು ಹೊರಟಿತು. ಹುಡುಗಿಯು ಮಾತಾಡದೆ ನಿಂತಿದ್ದವಳು ನಿಲ್ಲಲಾರದೆ ಕುಳಿತುಬಿಟ್ಟಳು; ಕ್ರಮವಾಗಿ ಮೂರ್ಛೆಗೊಂಡು ನೆಲದ ಮೇಲೆ ಬಿದ್ದಳು. ಆದರೂ ದರೋಗನ ಕೈಗೆ ವಿರಾಮವಿಲ್ಲ-ಕಡೆಗೆ

ದರೋಗನ ಕ್ಷೇಮಚಿಂತಕನಾಗಿದ್ದ ಜಮಾದಾರನೊಬ್ಬನು ಓಡಿಬಂದು ಅವನ ಕಿವಿಯಲ್ಲೇನೋ ಹೇಳಿದನು. ಬಳಿಕ ದರೋಗನು ನಿರಸ್ತನಾದನು.

ಹುಡುಗಿಗೆ ಮೂರ್ಛೆಯು ತಿಳಿಯಲಿಲ್ಲ. ದರೋಗನು ಮೊದಲು, ಅವಳು ವೇಷಹಾಕಿಕೊಂಡಿದ್ದಳೆಂದು ತಿಳಿದನು. ಜಮಾದಾರನು, ಅದು ವೇಷವಲ್ಲ ಹುಡುಗಿಗೆ ಪ್ರಾಣವುಳಿಯುವುದೇ ಸಂಶಯವೆಂದು ಹೇಳಿದ ಬಳಿಕ ದರೋಗನು ಭಯಗೊಂಡು ಡಾಕ್ಟರನನ್ನು ಕರೆತರಲು ಕನಸ್ಟೇಬಿಲನನ್ನು ಕಳುಹಿದನು. ಡಾಕ್ಟರನು ಬಂದು ಅನೇಕ ಪ್ರಯತ್ನಗಳಿಂದ ಹುಡುಗಿಯನ್ನು ಬದುಕಿಸಿದನು.

ಹುಡುಗಿಯೇನೋ ಬದುಕಿಕೊಂಡಳು. ಆದರೆ ದರೋಗನು ಅವಳನ್ನಲ್ಲಿಗೆ ಬಿಡಲಿಲ್ಲ. ಅವಳನ್ನು ಡೋಲಿಯಲ್ಲಿ ಹಾಕಿಸಿ ಠಾಣೆಗೆ ಕಳುಹಿದನು. ಠಾಣೆಗೆ ಕಳುಹುವುದಕ್ಕೆ ಮೊದಲು ಡಾಕ್ಟರನು ಹುಡುಗಿಯನ್ನು ತನ್ನ ಮನೆಗೆ ಕೊಂತೊಯ್ದು ಅವಳಿಗೆ ಹಾಲು ಮುಂತಾದ ಆಹಾರವನ್ನು ಕೊಟ್ಟುಪಚರಿಸಿ ಕಳುಹಿದನು.

ಮಧ್ಯಾಹ್ನಕ್ಕೆ ಮೊದಲು, ಖೂನಿಯ ಸುದ್ದಿಯು ನಾಲ್ಕುಕಡೆಗಳಲ್ಲಿ ಹರಡಿಕೊಂಡಿತು. ಹತ್ಯಾಕಾರಿಯು ಹಿಡಿಯಲ್ಪಟ್ಟದ್ದಂತೆಯೂ ಸಮಾಚಾರವು ಹೊರಟು, ಆ ವಿಚಾರದಲ್ಲಿ ಜನರು ನಾನಾವಿಧವಾಗಿ ಆಡಿಕೊಂಡರು. ಆದರೆ ಹುಡುಗಿಗೆ ಸಹಾಯವನ್ನು ಮಾಡಲಾರೂ ಮುಂದಾಗಿ ಬರಲಿಲ್ಲ—ಹುಡುಗಿಯು ಸೆರೆಯಲ್ಲಿಡಲ್ಪಟ್ಟಳು.

ಆರನೆಯ ಪರಿಚ್ಛೇದ.

ರಮಣೀಮೋಹನನು ವಾಸವಾಗಿದ್ದುದು ಗೋಪಾಲಪುರದಲ್ಲಿ—ಅಲ್ಲಿಗೂ ಸುದ್ದಿಯು ಮುಟ್ಟಿತು. ಮೊದಲು ವಾಮೆಯು ಸುದ್ದಿಯನ್ನು ಕೇಳಿದವಳು—ಅವಳು ಸುದ್ದಿಯನ್ನು ಕೇಳಿ ಯಜಮಾನಿಗದನ್ನು ತಿಳಿಸದೆ

ರಮಣೀಮೋಹನನಿಗೆ ಏಕಾಂತವಾಗಿ ವೃತ್ತಾಂತವನ್ನೆಲ್ಲಾ ವಿವರಿಸಿ ಹೇಳಿದಳು. ರಮಣೀಮೋಹನನು ಕೇಳಿ ಸ್ತಂಭಿತನಾದನು. ಪ್ರಾಮೆಯು, "ಈಗ ಸುಮ್ಮನಿರಲು ಸಮಯವಲ್ಲ" ವೆಂದಳು.

ರಮಣೀಮೋಹನ--ಈಗೇನನ್ನು ಮಾಡಲಿ ? ಪ್ರಾಮಾತಾಯಿ !

ಪ್ರಾಮೆ—ಹುಡುಗಿಯನ್ನು ಬದುಕಿಸು. ಅಯ್ಯೋ ! ಅವಳಿಗಾರೂ ಇಲ್ಲ.

ರಮಣೀ—ಆರೂ ಇಲ್ಲದವರಿಗೆ ದೇವರಿದ್ದಾನೆ. ಮನುಷ್ಯಯತ್ನದಲ್ಲಿ ಸಾಗುವಷ್ಟು ಹುಡುಗಿಗೆಸಲವಾಗಿ ಪ್ರಯತ್ನಪಡುವೆನು.

ಹೀಗೆಂದು ಹೇಳಿ ರಮಣೀಮೋಹನನು ಕುದುರೆಯನ್ನು ಹತ್ತಿಕೊಂಡು ಠಾಣಾಭಿಮುಖವಾಗಿ ಓಡಿಸಿಕೊಂಡು ಹೋದನು. ಆಗ ಮೂರು ಘಂಟೆ—ಬಿಸಿಲ ತಾಪವು ಅತಿಯಾಗಿದ್ದಿತು. ಅವನದನ್ನು ಗ್ರಾಹ್ಯಮಾಡಲಿಲ್ಲ. ಠಾಣೆಯು ಹತ್ತಿರದಲ್ಲಿದ್ದಿತು--ಒಂದು ಹರಿದಾರಿಯ ದೂರ. ಅತಿಸ್ವಲ್ಪ ಸಮಯದಲ್ಲಿ ಹೋಗಿ ಠಾಣೆಯಲ್ಲಿ ದರೋಗನನ್ನು ನೋಡಿದನು.

ದರೋಗನು ರಮಣೀಮೋಹನನನ್ನು ಬಲ್ಲನು. ಗೋಪಾಲಪುರದ ಜಮೀನುದಾರನನ್ನು ಅರಿಯದವರಾರು ? ದರೋಗನು ರಮಣೀಮೋಹನನನ್ನು ಕಂಡು ಸಂಭ್ರಮದಿಂದೆದ್ದು ಕುಳಿತುಕೊಳ್ಳಲು ಅವನಿಗೊಂದು ಆಸನವನ್ನು ತಂದುಕೊಟ್ಟನು. ಅವನು ಕುಳಿತ ಬಳಿಕ ತಾನೂ ಅವನ ಬಳಿ ಕುಳಿತುಕೊಂಡನು. ರಮಣೀಮೋಹನನು, "ನಿಮ್ಮ ಬಳಿ ಒಂದು ಕೆಲಸದ ನಿಮಿತ್ತವಾಗಿ ಬಂದೆನು" ಎಂದನು.

ದರೋಗ--ಅಪ್ಪಣೆಯಾಗಲಿ.

ರಮ—ಖೂನಿಯನ್ನು ಮಾಡಿದವಳೆಂದು ಒಬ್ಬ ಹುಡುಗಿಯನ್ನು ಹಿಡಿದಿಟ್ಟಿರುವುದಾಗಿ ಕೇಳಿದೆನು.

ದರೋಗ—ತಮಗೆ ಸರಿಯಾದ ಸುದ್ದಿಯು ಮುಟ್ಟಿದೆ-

ರಮ—ಹುಡುಗಿಯು ಸಂಪೂರ್ಣ ನಿರ್ದೋಷಿ-

ದರೋಗ-ತಮಗದು ಗೊತ್ತಾದಬಗೆ ಹೇಗೆ ?

ರಮ—ಹುಡುಗಿಯು ಮಧ್ಯಾಹ್ನದಲ್ಲಿ ನಮ್ಮ ಮನೆಗೆ ಭಿಕ್ಷಕ್ಕೆಸಲವಾಗಿ ಬಂದಿದ್ದಳು. ಕೃಷ್ಣಪುರಕ್ಕೆ ಹಿಂದಿರಿಗಿ ಹೋಗಲು ಸಾಯಂಕಾಲವಾಗಿರಬಹುದು. ಅದಕ್ಕೆಸಲವಾಗಿ ಮುದುಕಿಯು ಅವಳನ್ನು ಮನೆಯೊಳಗೆ

ಹೋಗಗೊಡಿಸಲಿಲ್ಲ-ಹುಡುಗಿಯು ಬಾಗಿಲಲ್ಲಿ ಕಾದು ಕುಳಿತಿದ್ದಳು-ರಾತ್ರಿಯಾಗಿ ಗಸ್ತಿನವನು ಬಂದಾಗ ಅವಳದೇ ಸ್ಥಿತಿಯಲ್ಲಿ ಕುಳಿತಿದ್ದವಳನ್ನು ನೋಡಿದ್ದಾನೆ-ಬಳಿಕ ನಡೆದುದನ್ನೆಲ್ಲಾ ಆರೂ ಕಾಣರು.

ದರೋಗ—ಆರೂ ಕಾಣದಿದ್ದರೂ ನಾವದನ್ನು ಅನುಮಾನದಮೇಲೆ ಊಹಿಸಿ ತಿಳಿಯಬೇಕು.

ರಮು—ಏನೆಂದು ಅನುಮಾನಿಸಿ ತಿಳಿದಿರಿ ?

ದರೋಗ—ಹುಡುಗಿಯು ಕೋಲಿನಿಂದ ಹೊಡೆದು ಮುದುಕಿಯನ್ನು ಖೂನುಮಾಡಿದಳೆಂದು.

ರಮು—ಮುದುಕಿಯ ಮೈಯಲ್ಲಿ ಹೊಡೆದ ಗುರುತಗಳಿದ್ದುವೆ ?

ಮುದುಕಿಯ ಮೈಮೇಲೆ ಹೊಡೆತದ ಗುರುತಿರಲಿಲ್ಲವೆಂದು ದರೋಗನಿಗಾಗ ಸ್ಮರಣೆಗೆ ಬಂದು, ಉತ್ತರವನ್ನು ಕೊಡಲು ತೋಚದೆ ಸುಮ್ಮನಿದ್ದನು. ರಮಣೀಮೋಹನನು, " ಹುಡುಗಿಯು ಎಲ್ಲಿದ್ದಾಳೆ ? ನಾನವಳನ್ನೊಂಮೆ ನೋಡಬಹುದೆ ? " ಎಂದು ಕೇಳಿದನು.

ಹುಡುಗಿಯು ರಮಣೀಮೋಹನನ ಬಳಿ ಅಪರಾಧವನ್ನೊಪ್ಪಿಕೊಳ್ಳುವಳೆಂದು ಭಾವಿಸಿ ದರೋಗನು ಆಕ್ಷೇಪವಿಲ್ಲದೆ, ನೋಡಬಹುದೆಂದು ಹೇಳಿ, " ಬರೋಣಾಗಲಿ, ಹುಡುಗಿಯ ಬಳಿ ಕರೆದುಕೊಂಡುಹೋಗುವೆನು" ಎಂದು ಹೇಳಿದನು.

ಇಬ್ಬರೂ ಎದ್ದು ಸೆರೆಮನೆಯೊಳಗೆ ಹೋದರು. ಹುಡುಗಿಯುಛಿನ್ನಕುಸುಮಿತ ಲತಿಕೆಯಂತೆ ದೂಳಿನಲ್ಲಿ ಬಿದ್ದಿದ್ದಳು-ರಮಣಿಮೋಹನನನ್ನು ಕಂಡು ಲಜ್ಜೆಯಿಂದ ಸಂಕುಚಿತೆಯಾಗಿ ಮೆಲ್ಲಮೆಲ್ಲನೆ ಎದ್ದು ಕುಳಿತಳು.

ದರೋಗನು ರಮಣೀಮೋಹನನನ್ನು ಕುರಿತು, " ತಾವು ಹುಡುಗಿಯನ್ನು ಕೇಳೋಣಾಗಲಿ, ಅವಳು ಮುದುಕಿಯನ್ನು ಹೇಗೆ ಖೂನುಮಾಡಿದಳೋ ಅದನ್ನು ಹೇಳಲಿ-ಹುಡುಗಿಯು ತಮ್ಮನ್ನು ಸಮ್ಮಾನಿಸುತ್ತಾಳೆ-ತಾವು ಕೇಳಿದರೆ ಅವಳು ಹೇಳದಿರಳು " ಎಂದು ಹೇಳಿದನು.

ರಮಣೀಮೋಹನನು ಸ್ವಲ್ಪ ಉತ್ತೇಜಿತ ಕಂಠದಿಂದ, " ಹುಡುಗಿಯನ್ನು ಕೇಳುವುದೇನು ? ಅವಳು ಖೂನು ಮಾಡಿದಳೆ ಇಲ್ಲವೆ ಎಂದು

ಕೇಳುವುದರಿಂದ ಪ್ರಯೋಜನವಿಲ್ಲ-ಬೇಕಾದರೆ ನಾನದಕ್ಕೆ ಉತ್ತರವನ್ನು ಕೊಡಬಲ್ಲೆನು " ಎಂದನು,

ದರೋಗ--ತಾವು ಬಲ್ಲಿರಾ ? ತಮಗೆ ತಿಳಿದಿರುವುದೇನು ? ಹೇಳೋಣಾಗಲಿ.

ರಮ—ಮುದುಕಿಯನ್ನು ಖೂನು ಮಾಡಿದವರಾರೋ ನಾನವರನ್ನು ಅರಿಯೆನು. ಈ ಖೂನಿಯ ವಿಚಾರದಲ್ಲಿ ಹುಡುಗಿಯು ಸಂಪೂರ್ಣ ನಿರ್ದೋಷಿ ಎಂದು ನಾನು ಮುಕ್ತಕಂಠನಾಗಿ ಹೇಳಬಲ್ಲೆನು. ನಾನಾದರೂ ಖೂನುಮಾಡಬಲ್ಲೆನೇ ಹೊರ್ತು ಹುಡುಗಿಯು ಎಂದೂ ಖೂನುಮಾಡಳು.

ಅದನ್ನು ಕೇಳಿ ಹುಡುಗಿಯ ಕಣ್ಣುಗಳಲ್ಲಿ ಛಲಛಲ ನೀರು ತುಂಬಿತು. ಅವಳು ಮುದುಕಿಯು ಹೊಡೆತಕ್ಕೂ ದರೋಗನ ಹೊಡೆತಕ್ಕೂ ಬಿಂದುಮಾತ್ರ ಕಣ್ಣೀರನ್ನು ಬಿಡದವಳು, ಈಗ ಅತ್ತು ಆಕುಲೆಯಾದಳು.

ದರೋಗನು ಸ್ವಲ್ಪ ನಕ್ಕು, "ನಂಬುಗೆಯಮೇಲೆ ಕೆಲಸವನ್ನು ಮಾಡಿದರೆ ಸಾಗದು, ಪ್ರಮಾಣಗಳು ಬೇಕು" ಎಂದನು.

ರಮ—ಹುಡುಗಿಯು ನಿರ್ದೋಷಿಯೆಂದು ನಾನು ಪ್ರಮಾಣವನ್ನು ಮಾಡಬಲ್ಲೆನು. ನನ್ನ ಸರ್ವಸ್ವವು ಹೋದರೂ ನಿಮ್ಮ ಒಳಸಂಚುಗಳನ್ನು ಹೊರಗೆ ಹಾಕದಿರೆನು.

ದರೋಗನು ಪ್ರಮಾದಕ್ಕಿಟ್ಟತೆಂದು ಗುಣಿಸಿಕೊಂಡನು. ರಮಣೀಮೋಹನನನ್ನು ಕಂಡರೆ ಎಲ್ಲಾ ಗ್ರಾಮಸ್ಥರೂ ಮರ್ಯಾದೆಯಿಂದ ಕಾಣುವರೆಂದೂ ಎಲ್ಲರೂ ಅವನ ಅನುಗತರೆಂದೂ ಅವನಿಗೆ ಬಾಧ್ಯಪಟ್ಟವರೆಂದೂ ಮೊಕದ್ದಮೆಯನ್ನು ನಡಿಸಲು ಹೋದರೆ ಹುಡುಗಿಯು ಪರವಾಗಿ ಬಾರಿಷ್ಟರು ಮುಂತಾದ ವಕೀಲರು ಸಾಲಿಟ್ಟು ನಿಲ್ಲುವರೆಂದೂ ತಿಳಿದವನಾಗಿ, ದರೋಗನು ಏನನ್ನು ಮಾಡುವುದಕ್ಕೂ ತೋಚದೆ, "ನಾನು ಒಳಸಂಚಾವದನ್ನೂ ಮಾಡಿಲ್ಲ—ನಿಜವಾದ ಹತ್ಯಾಕಾರಿಯನ್ನು ಹಿಡಿದಿದ್ದೇನೆ" ಎಂದು ಹೇಳಿದನು.

ರಮಣೀ—ನಿಜವಾದ ಹತ್ಯಾಕಾರಿಯು ಸಿಗದೆ ಒಬ್ಬ ಚಿಕ್ಕ ಹುಡುಗಿಯನ್ನು ಹಿಡಿದು ಅಪರಾಧಿಯನ್ನಾಗಿ ಮಾಡಿರುತ್ತಿ-ನಿಮ್ಮ ಕೆಲಸ ಕಾರ್ಯ

ಗಳನ್ನು ಬಲ್ಲೆನು-ನಿಮ್ಮ ಕಾನೂನನ್ನೂ ಬಲ್ಲೆನು-ಆದರೆ ಇದೇನು! ಹುಡುಗಿಯ ಬಟ್ಟೆಯೆಲ್ಲಾ ರಕ್ತಮಯವಾಗಿದೆ!

ದರೋಗ—ಅಹುದು-ಒಪ್ಪಿಕೊಳ್ಳಲಿಲ್ಲವೆಂದು ಒಂದೆರಡು ಪೆಟ್ಟುಗಳು ಬಿದ್ದಿವೆ.

ರಮಣೀಮೋಹನನು ಠಾಣೆಯ ಮನೆಯೆಲ್ಲಾ ಅದುರುವಂತೆ ಚೀತ್ಕಾರವನ್ನು ಮಾಡಿ, "ನೀವು ಹುಡುಗಿಯನ್ನು ಹೊಡೆದಿರಾ?" ಎಂದು ಘಟ್ಟಿಯಾಗಿ ಕೇಳಿದನು.

ದರೋಗನು ರುಕ್ಷಸ್ವರದಿಂದ, "ಹೊಡೆದುದು ಒಳ್ಳೆಯಕೆಲಸವೇ ಆಯಿತು. ಅದಕ್ಕೆಸಲವಾಗಿ ನಾನಾರಿಗೂ ಉತ್ತರವನ್ನು ಕೊಡಲು ಬಾಧ್ಯನಲ್ಲ" ಎಂದನು.

ರಮ—ಬಾಧ್ಯನು ಅಹುದೋ ಅಲ್ಲವೋ, ಅದು ಕೂಡಲೆ ತಿಳಿಯುವೆ-ನಾನು ಸಾಹೆಬನ ಬಳಿ ಹೋಗುತ್ತೇನೆ.

ರಮಣೀಮೋಹನನು ಸಾಹೆಬನ ಬಳಿ ಹೋಗಬೇಕಾದ ಆವಶ್ಯಕವು ಬೀಳಲಿಲ್ಲ. ರಮಣೀಮೋಹನನು ಠಾಣೆಯಿಂದ ಹೊರಡುವುದಕ್ಕೆ ಮೊದಲೇ ಪೋಲಿಸಸಾಹೆಬನೂ ಇನಸ್ಪೆಕ್ಟರನೂ ಬರುತಿದ್ದುದನ್ನು ಕಂಡನು. ಅವರಿಬ್ಬರೂ ಖೂನಾದ ಸಮಾಚಾರವನ್ನು ಕೇಳಿ ಎತ್ತಿನಗಾಡಿಯಲ್ಲಿ ಬಂದಿದ್ದರು. ಇನಸ್ಪೆಕ್ಟರನು ವಯಸ್ಸಾದವನು, ತಿಳಿದವನು, ಹಾಗೂ ಧರ್ಮನಿಷ್ಠನೂ ಅಹುದು. ಧರ್ಮನಿಷ್ಠನೆಂತಲೇ ಅವನು ಹೆಚ್ಚಿನ ಪದವಿಗೆ ಬರಲಿಲ್ಲ. ಅವನು ರಮಣೀಮೋಹನನ ತಂದೆಯನ್ನು ಬಲ್ಲನು. ಅವನಲ್ಲಿ ಗೌರವ ಮರ್ಯಾದೆಯುಳ್ಳವನಾಗಿದ್ದನು. ಆಗ ರಮಣೀಮೋಹನನು ಮಗುವಾಗಿದ್ದನು.

ಇನಸ್ಪೆಕ್ಟರನು ಬಂಡಿಯಿಂದಿಳಿದು ರಮಣೀಮೋಹನನನ್ನು ಕಂಡು ಆದರದಿಂದವನ ಸಂಗಡ ಮಾತಾಡತೊಡಗಿದನು-ಸಾಹೆಬನಿಗೆ ಅತ್ತಕಡೆ ದೃಷ್ಟಿಯಿರಲಿಲ್ಲ. ಅವನು ರಮಣೀಮೋಹನನ ಕುದುರೆಯನ್ನು ಕುತೂಹಲದಿಂದ ನೋಡುತ್ತಿದ್ದನು. ನೋಡಿದ ಬಳಿಕ ರಮಣೀಮೋಹನನನ್ನು ಕುರಿತು, "ಬಾಬು! ಕುದುರೆಯು ನಿಮ್ಮದೆ?" ಎಂದು ವಿಚಾರಿಸಿದನು.

" ಅಹುದು "

' O, she is an excellent animal.' (ಅದೊಂದು ಉತ್ತಮವಾದ ಕುದುರೆ.)

" ಕುದುರೆಯು ಬ್ಯಾರೊಸಾಹೆಬನಿಂದ ಕೊಂಡುಕೊಂಡೆನು. "

" ನಾನದನ್ನು ಕೊಂಡುಕೊಳ್ಳಬೇಕೆಂದಿದ್ದೆನು—ಆದರೆ ಬೆಲೆಯು ಹೆಚ್ಚು-ತಾವದನ್ನು ಎಷ್ಟಕ್ಕೆ ಕೊಂಡುಕೊಳ್ಳೋಣಾಯಿತು ? "

" ಎಂಟುನೂರು. "

" ಬ್ಯಾರೊಸಾಹೆಬನು ನನಗೆ ಏಳುನೂರು ರೂಪಾಯಿಗೆ ಕೊಡುವುದಾಗಿದ್ದನು."

" ನನಗೀಗ ಕುದುರೆಯಿಂದ ಪ್ರಯೋಜನವಿಲ್ಲ—ನಾನು ಕಲಿಕತ್ತೆಗೆ ಹೋಗಬೇಕು-ಹೋದಷ್ಟು ಬೆಲೆಗೆ ಕೊಟ್ಟುಬಿಡುವೆನು."

" ಎಷ್ಟಕ್ಕೆ ಕೊಡಬೇಕೆಂದಿರುವಿರಿ ? "

" ಕಡೆಗೆ ಇನ್ನೂರುರೂಪಾಯಿಗಾದರೂ ಕೊಟ್ಟುಬಿಡುವೆನು. "

" ಇನ್ನೂರುರೂಪಾಯಿಯೆ ? ನನಗೆ ಕೊಡುವಿರಾ ? "

" ಸಂತೋಷವಾಗಿ. "

ಬಳಿಕ ಸಾಹೆಬನು ಮುಂದುವರಿದು ಬಂದು ರಮಣೀಮೋಹನನ ಕೈಯನ್ನು ಕುಲುಕಿ, ಅವನ ಪರಿಚಯುವನ್ನು ತಿಳಿದುಕೊಂಡನು. ಬಳಿಕ ಇಬ್ಬರೂ ಹೋಗಿ ಇನಸ್ಪೆಕ್ಷನ್ (Inspection) ಕೊಠಡಿಯಲ್ಲಿ ಕುಳಿತುಕೊಂಡರು.

ಈ ಮಧ್ಯೆ ಇನಸ್ಪೆಕ್ಟರನು ಠಾಣೆಯ ಮನೆಯಲ್ಲಿ ಕುಳಿತು ಮೊಕದ್ದಮೆಯ ವಿದ್ಯಮಾನಗಳನ್ನು ಕುರಿತು ದರೋಗನಿಂದ ತಿಳಿದುಕೊಳ್ಳುತ್ತಿದ್ದನು. ದರೋಗನು ಹುಡುಗಿಗೆ ವಿರೋಧವಾಗಿ ಒದಗಿಸಿಕೊಂಡಿದ್ದ ಸಾಕ್ಷ್ಯವನ್ನು ಕುರಿತು ಹೇಳುತ್ತಿದ್ದನು. ಇನಸ್ಪೆಕ್ಟರನು ಕಾಗದಪತ್ರಗಳನ್ನೋದಿ ಸಾಕ್ಷ್ಯದ ಸ್ಥಿತಿಯನ್ನು ತಿಳಿದವನಾಗಿ ಮುಖವನ್ನು ಸುರುಗಿಸಿಕೊಂಡನು. ದರೋಗನು ಭೀತಿಗೊಂಡು ಜಮಾದಾರನ ಮುಖವನ್ನು ನೋಡಿದನು. ಜಮಾದಾರನು ಮೂಗನ್ನು ಕುಂಚಿತಮಾಡಿಕೊಂಡು ಮೇಲಧಿಕಾರಿಗೆಸಲವಾಗಿ ಹುಕ್ಕೆಯನ್ನು ತರಲೆದ್ದು ಹೊರಟುಹೋದನು.

ಇನಸ್ಪೆಕ್ಟರು—ಆ ಸಾಮಿಯೆಲ್ಲಿ ?

ದರೋಗ—ಸೆರೆಮನೆಯಲ್ಲಿ.

ಇನಸ್ಪೆಕ್ಟರು—ಕರೆದುಕೊಂಡು ಬಾ-ನೋಡೋಣ.

ಹುಡುಗಿಯು ಕರೆತರಲ್ಪಟ್ಟಳು. ಸಂಗತಿಗಳನ್ನು ಅವಳಿಂದ ತಿಳಿದು ಇನಸ್ಪೆಕ್ಟರನು "ಶವವನ್ನು ಕಳುಹಿಸಿದುದಾಯಿತೆ?" ಎಂದು ಕೇಳಿದನು.

ದರೋಗ-ಇನ್ನೂ ಕಳುಹಿಸಿಲ್ಲ-ಬಂಡಿಯಲ್ಲಿ ಹಾಕಿಸಿದ-ರಿಪೋರ್ಟನ್ನು ಬರೆಯುತಿದ್ದೆನು-ಅಷ್ಟರೊಳಗೆ ಅಸಭ್ಯಬರ್ಬರನೊಬ್ಬನು ಬಂದು ನನ್ನ ಸಮಯವನ್ನು ನಷ್ಟಮಾಡಿದನು.

ಇನಸ್ಪೆಕ್ಟರ-ನಡಿ-ಶವವನ್ನು ನೋಡೋಣ.

ಅಲ್ಲಿಂದಿಬ್ಬರೂ ಎದ್ದು ಗಾಡಿಯ ಬಳಿ ಹೋಗಿ, ಶವವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿ, ಇನಸ್ಪೆಕ್ಟರನು, "ನಿಲಿಸಿಲ್ಲಿರು, ಸಾಹೆಬನನ್ನು ಕರತರುವೆನು" ಎಂದು ಹೇಳಿ ಇನಸ್ಪೆಕ್ಟರನು ಹೋದನು.

ಇನಸ್ಪೆಕ್ಟರನು ಸ್ವಲ್ಪದರಲ್ಲಿಯೇ ಸಾಹೆಬನಸಂಗಡ ಹಿಂದಿರಿಗಿ ಬಂದು ಸಾಹೆಬನಿಗೆ ಶವದ ಮೈಯಲ್ಲಾವ ಅಸ್ತ್ರಘಾತವಾಗಲಿ ಇತರ ಆಘಾತದ ಗುರುತಾಗಲಿ ಇಲ್ಲದಿರುವುದನ್ನು ತೋರಿ, "ನನ್ನ ಬುದ್ಧಿಗೆ ಹೆಂಗಸು ಯಕೃತ್ತು (Liver) ಒಡಿದುಹೋದುದರಿಂದಲೋ ಅಥವಾ ರಕ್ತನಾಡಿಯು ಒಡದಿರುವುದರಿಂದಲೋ ಸತ್ತಿದ್ದಾಳೆಂದು ತೋರುತ್ತದೆ" ಎಂದನು.

ಸಾಹೆಬನು, "ನಾನೂ ಅದೇ ಅಭಿಪ್ರಾಯವುಳ್ಳವನಾಗಿದ್ದೇನೆ" ಎಂದನು.

ಇನಸ್ಪೆಕ್ಟರನು ಸಾಹೆಬನನ್ನು ಠಾಣೆಗೆ ಕರತಂದು ಅಲ್ಲಿದ್ದ ಹುಡುಗಿಯನ್ನು ಅವನಿಗೆ ತೋರಿ, "ದುರ್ಬಲವಾದಾ ಹುಡುಗಿಯಿಂದ ಖೂನಾಯಿತೆಂದು ಹೇಳುವುದು ಅಸಂಭವ" ವೆಂದು ಹೇಳಿದನು.

ಸಾಹೆಬ—ಎಂದಿಗೂ ಹೇಳಲಾಗದು_ಹುಡುಗಿಯು ಖೂನು ಮಾಡಿದಳೆಂದು ಹೇಳಿದವರಾರು ?

ಇನ—ದರೋಗನು ಹೇಳುತ್ತಾನೆ.

ಸಾಹೆಬ -(Idiot he is) ಅವನೊಬ್ಬ ಹುಟ್ಟುಮೂರ್ಖ-(ದರೋಗನನ್ನು ಕುರಿತು) ಅವಳು ಖೂನುಮಾಡಿದುದನ್ನು ನೀನು ನೋಡಿದಿಯಾ ?

ದರೋಗನು ಕೈಮುಗಿದುಕೊಂಡು, "ಹುಜೂರ್ ! ಸಾಕ್ಷಿಗಳು ನೋಡಿದ್ದಾರೆ" ಎಂದನು.

ಸಾಹೆಬ -ನಿನ್ನ ಸಾಕ್ಷಿಗಳನ್ನು ಬರಹೇಳು.

ಸಾಕ್ಷಿಗಳು ಠಾಣೆಯಲ್ಲಿದ್ದರು. ದರೋಗನು ಹೋಗಿ ಏನನ್ನೋ ಬೋಧಿಸಲು ಹೋದವನು, ರಮಣೀಮೋಹನನು ಅಲ್ಲಿ ನೋಡಿಕೊಂಡಿದ್ದುದರಿಂದ ಕೃತಕಾರ್ಯನಾಗಲಿಲ್ಲ. ಸಾಕ್ಷಿಗಳು ಸಾಹೆಬನ ರುದ್ರಮೂರ್ತಿಯನ್ನು ನೋಡಿ ತಾವು ತಿಳಿದಿದ್ದುದನ್ನು ಮರೆತುಬಿಟ್ಟರು. ಸಾಹೆಬನ ಪ್ರಶ್ನೆಗೆ ಪ್ರತಿಸಾಕ್ಷಿಯೂ ಖೂನಾದುದನ್ನು ತಾವು ಕಂಡವರಲ್ಲವೆಂದು ಹೇಳಿದರಲ್ಲದೆ ಹುಡುಗಿಯು ಖೂನುಮಾಡಿದವಳೆಂದು ತಾವೆಂದೂ ನಂಬಲಾರೆವೆಂತಲೂ ಹೇಳಿದರು.

ಸಾಹೆಬನು ಆರಕ್ತಲೋಚನನಾಗಿ ದರೋಗನನ್ನು ನೋಡಿ, You are a liar too (ನೀನೊಬ್ಬ ಸುಳ್ಳುಗಾರನೂ ಅಹುದು) ಎಂದನು.

ಬಳಿಕ ಸಾಹೆಬನು ಶವವನ್ನು ಆಸ್ಪತ್ರೆಗೆ ಕಳುಹಲು ಹೇಳಿ ಹುಡುಗಿಯನ್ನು ಸೆರೆಯಿಂದ ಬಿಟ್ಟುಬಿಡುವಂತೆ ಅಪ್ಪಣೆ ಮಾಡಿದನು. ಆಗ ರಮಣೀಮೋಹನನು ಮುಂದುವರಿದುಕೊಂಡು ಬಂದು ತನ್ನದೊಂದು ಅರಿಕೆಯಿದೆ ಎಂದನು.

ಸಾಹೆಬ- What can I do for you, Babu ? (ಬಾಬುಗಳೆ ! ನನ್ನಿಂದೇನಾಗಬೇಕು ?).

ರಮಣಿ--ತಪ್ಪನ್ನೊಪ್ಪಿಕೊಳ್ಳಲು ದರೋಗನು ಹುಡುಗಿಯನ್ನು ಅನ್ಯಾಯವಾಗಿ ಹೊಡೆದು ಹಿಂಸಿಸಿದ್ದಾನೆ. ಹುಡುಗಿಯ ಮೈಮೇಲಿರುವ ಘಾಯಗಳನ್ನು ನೋಡಿದರೆ ವೇದ್ಯವಾಗಬಹುದು.

ಸಾಹೆಬನೂ ಇನಸ್ಪೆಕ್ಟರನೂ ಹುಡುಗಿಯನ್ನು ಪರೀಕ್ಷಿಸಿ ನೋಡಿದರು. ಮೈಯೆಲ್ಲಾ ಘಾಯ-ಕೆಲವು ಘಾಯಗಳಿಂದ ಈಗಲೂ ರಕ್ತವು ಸುರಿಯುತ್ತಿದ್ದಿತು.

ಸಾಹೆಬನು ಮರುಗಿ, ಕರುಣಕಂಠದಿಂದ, "ನಿನ್ನನ್ನು ಹೊಡೆದವರಾರು ?" ಎಂದು ವಿಚಾರಿಸಿದನು.

ಹುಡುಗಿಯು ಅಧೋವದನೆಯಾಗಿ ಉತ್ತರವನ್ನು ಕೊಡತಿಲ್ಲ. ಪುನಃಪುನಃ ಒತ್ತಾಯಮಾಡಿದುದರಮೇಲೆ, "ಮುದುಕಿಯು ಹೊಡಿದಿದ್ದಳು" ಎಂದಳು.

" ದರೋಗನು ಹೊಡೆಯಲಿಲ್ಲವೆ ? "

ಅವಳ ಉತ್ತರದಮೇಲೆ ದರೋಗನ ಜೀವನಮರಣಗಳು ನಿರ್ಭರವಾಗಿದ್ದುವು. ದರೋಗನು ಮನಸ್ಸಿನಲ್ಲಿ, " ಅಯ್ಯೋ ! ಹೊಡಿದೆನೇಕೆ ?—ತಾಯಿ, ದುರ್ಗೆ ! ಈತಡವೆ ರಕ್ಷಿಸು-ಮುಂದೆಂದೂ ಆರ ಮೇಲೂ ಕೈಯೆತ್ತುವುದಿಲ್ಲ " ವೆಂದಂದುಕೊಂಡನು.

ಆದರೆ ದುರ್ಗೆಯು ರಕ್ಷಿಸಲಿಲ್ಲ-ಹುಡುಗಿಯು ಅಸ್ಫುಟಸ್ವರದಿಂದ, " ಅಹುದು, ಹೊಡಿದನು-ಆದರೆ ನಾನದಕ್ಕೆ ಸಲವಾಗಿ ದುಃಖಿತೆಯಾಗಿಲ್ಲ " ವೆಂದಳು.

ಸಾಹೆಬ—ನೀನು ದುಃಖಿತೆಯಾಗದಿದ್ದರೂ ಕಾನೂನು ದುಃಖಿತವಾಗಿದೆ.

ಹೀಗೆಂದು ಹೇಳಿ ಬಳಿಕ ಸಾಹೆಬನು ಸಾಕ್ಷಿಗಳನ್ನು ಕುರಿತು, " ದರೋಗನು ಹೊಡಿದುದನ್ನು ನೀವು ನೋಡಿದಿರಾ ? " ಎಂದು ವಿಚಾರಮಾಡಿದನು.

ಸಾಕ್ಷಿಗಳು ಹಿಂದುಮುಂದು ನೋಡುತಿದ್ದರು-ಸಾಹೆಬನು, " ನಿಮಗೆ ಭಯವಿಲ್ಲ-ದರೋಗನನ್ನು ದಸ್ತಗಿರಿಮಾಡಿದೆ " ಎಂದನು.

ಬಳಿಕ ಸಾಕ್ಷಿಗಳೆಲ್ಲರೂ ಏಕವಾಕ್ಯವಾಗಿ, ಹುಡುಗಿಯನ್ನು ದರೋಗನು ಹೊಡೆದುದನ್ನು ಕಂಡೆವೆಂದು ಹೇಳಿದರು.

ರಮಣೀಮೋಹನನು ಹಿಂದಿದ್ದವನು ಮುಂದುವರಿದು ಬಂದು, " ಸಾಹೆಬ ! ದರೋಗನಿಗೆ ಬೇರೆ ಸ್ಥಳಕ್ಕೆ ಬದಲಾಯಿಸಿದರೆ ಸಾಕು. ಅವನಿಗೆ ಬೇರೆವಿಧವಾಗಿ ದಂಡಿಸಿದರೆ, ಫಿರ್ಯಾದಿಯು ನಿಮಗೆ ಸಿಕ್ಕಳು " ಎಂದು ಹೇಳಿದನು.

ಹೀಗೆಂದು ಹೇಳಿ ಹುಡುಗಿಯ ಕೈಯನ್ನು ಹಿಡಿದುಕೊಂಡು ಠಾಣೆಯಿಂದ ಹೊರಟುಹೋದನು.

ಏಳನೆಯ ಪರಿಚ್ಛೇದ.

"ಪಾಪಾ, ತಾಯಿ!"

"ಏನೋ ಮಗು!"

"ಹುಡುಗಿಯನ್ನು ಕರತಂದಿದ್ದೇನೆ."

"ಒಳ್ಳೆಯ ಕೆಲಸವನ್ನು ಮಾಡಿದೆ-ನೀನು ಚಿರಜೀವಿಯಾಗಿರು!"

ಹುಡುಗಿಯು ಸಂಕುಚಿತಭಾವದಿಂದ ಒತ್ತಟ್ಟು ನಿಂತಿದ್ದಳು. ಪಾಪೆಯು ಅವಳನ್ನು ನೋಡಿ. "ಅಹಾ! ಇಂತಹ ಹೆಣ್ಣು ಖೂನನ್ನು ಮಾಡು ವಳೆ? ಪರೋಗನಿಗೆ ದಯೆ, ಧರ್ಮ ಆವುದೂ ಇಲ್ಲವೆ?" ಎಂದಳು.

ಹುಡುಗಿಯನ್ನು ಪಾಪಾ ತಾಯಿಯ ವಶದಲ್ಲಿ ಬಿಟ್ಟು ರಮಣೀಮೋಹನನು ತಾಯಿಯ ಬಳಿ ಹೋದನು-ಪಾಪೆಯು ಹುಡುಗಿಯನ್ನು ಕೊಳಕ್ಕೆ ಕರೆದುಕೊಂಡು ಹೋಗಿ ಸ್ನಾನವನ್ನು ಮಾಡಿಸಿ, ಉಟ್ಟುಕೊಳ್ಳಲು ತನ ದೊಂದು ಸೀರೆಯನ್ನು ಕೊಟ್ಟಳು.

ಇತ್ತ ರಮಣೀಮೋಹನನು ತಾಯಿಯಬಳಿ ಹೋಗಿ, ಇಂದು ನಿನ್ನ ಅನುಮತಿಯನ್ನು ಪಡೆಯದೆ ಒಂದು ಕೆಲಸವನ್ನು ಮಾಡಿದೆನು" ಎಂದನು.

ತಾಯಿ—ಏನನ್ನು ಮಾಡಿದೆಯೋ, ಮಗು?

ರಮಣೀ—ಪೋಲಿಸದರೋಗನು ಒಬ್ಬ ಚಿಕ್ಕ ಹುಡುಗಿಯಮೇಲೆ ಬಹಳ ಅತ್ಯಾಚಾರಗಳನ್ನು ನಡೆಯಿಸಿದ್ದನು. ಅವಳನ್ನು ಪೋಲಿಸ ಗ್ರಾಸ ದಿಂದ ತಪ್ಪಿಸಿ ಕರಕೊಂಡು ಬಂದೆನು.

ತಾಯಿ—ಪೋಲಿಸರ ಗೋಜಿಗೆ ಹೋಗದಿರುವುದು ಒಳ್ಳೆಯದು.

ರಮಣೀ—ಪೋಲಿಸರು ಅತ್ಯಾಚಾರಗಳನ್ನು ಮಾಡುತ್ತಿರುವಾಗ ನಾನು ಕುಳಿತು ನೋಡುತ್ತಿರುವುದೆ?

ತಾಯಿ—ದೇಶದಲ್ಲಿ ಎಷ್ಟೋ ಅತ್ಯಾಚಾರಗಳು ನಡಿಯುತ್ತಿವೆ-ಅದ ನೆಲ್ಲಾ ಕುರಿತು ಪೋಲಿಸರೊಂದಿಗೆ ಕಾದಾಡಿ ತೀರುವುದೆ?

ರಮಣೀ—ನಾವು ಹೋರಾಡದಿದ್ದರೆ, ಬಡವರನ್ನು ಕಾಪಾಡದಿದ್ದರೆ, ಮತ್ತಾರು ಅವರಗೆ ಸಹಾಯವನ್ನು ಮಾಡುವರು?

ತಾಯಿ—ಪ್ರಪಂಚದಲ್ಲಾರನ್ನು ನೋಡಿಕೊಳ್ಳಲಾದೀತು? ತಾನು ಬದುಕಿಕೊಂಡರೆ ಸಾಕು.

ರಮಣೀಮೋಹನನಿಗೆ ಮನಸ್ಸಿನಲ್ಲಿ ಸ್ವಲ್ಪ ವ್ಯಥೆಯಾದಂತೆ ತೋರುತ್ತದೆ. ಅದುಕಾರಣ ಅವನಾವ ಉತ್ತರವನ್ನೂ ಕೊಡಲಿಲ್ಲ. ಸ್ವಲ್ಪ ಹೊತ್ತಾದ ಬಳಿಕ, "ಅಮ್ಮಾ! ಹುಡುಗಿಗಾರೂ ದಿಕ್ಕಿಲ್ಲ" ಎಂದನು.

ತಾಯಿ—ಬಡವರಾದ ದುಃಖಿಗಳಿಗೆ ದಿಕ್ಕಾರು ಇರುವರು?

ರಮಣೀ—ಅಮ್ಮಾ! ಹುಡುಗಿಯನ್ನು ಮನೆಗೆ ಕರತಂದಿದ್ದೇನೆ.

ತಾಯಿ—ಇಲ್ಲಿಗೆ? ನಮ್ಮ ಮನೆಗೆ?

ರಮಣೀ—ಅಹುದು.

ತಾಯಿ—ದೂರಕಳುಹು-ಪೊಲಿಸ ಆಸಾಮಿಗಳಿಗೆಲ್ಲಾ ಮನೆಯಲ್ಲಿ ಸ್ಥಳವು ಸಿಗದು.

ರಮಣೀ—ಈಗವಳು ಪೊಲಿಸ ಆಸಾಮಿಯಲ್ಲ.

ತಾಯಿ—ಆಸಾಮಿಯಾಗದಿದ್ದರೂ ಆ ಅಲ್ಪಜನರಿಗೆ ಮನೆಯಲ್ಲಿ ಸ್ಥಳವಿಲ್ಲ.

ರಮಣೀ—ಹುಡುಗಿಗೆ ನಿಲ್ಲುವುದಕ್ಕೆ ನೆರಳಿಲ್ಲ-ಎಲ್ಲಿರುವಳು?

ತಾಯಿ—ಅದೇಕೆ? ಮರದ ಬುಡದಲ್ಲಿರಲಿ.

ರಮಣೀಮೋಹನನು ಆಕಾಶವನ್ನು ನೋಡಿದನು. ಸಾಯಂಕಾಲವಾಗುತ ಬಂದಿತು. ಆಕಾಶವು ನೀಲಿಯಬಣ್ಣವು ಹೋಗಿ ಕೃಷ್ಣವಸನದಿಂದಾವೃತವಾಗುತ ಬರುತಿದ್ದಿತು. ರಮಣೀಮೋಹನನು ಮಾತಾಡದೆ ತಾಯಿಯ ಬಳಿ ಕುಳಿತಿದ್ದನು.

ಗೃಹಿಣಿಯು ಹರಿನಾಮದ ಮಾಲೆಯನ್ನು ಟಕಟಕೆಂದು ತಿರುಗಿಸುತ್ತ, "ಮೋಹನ! ಇಂದೇಕೆ ಅಷ್ಟೊಂದು ಅನ್ಯಮನಸ್ಕನಾಗಿರುವೆ?" ಎಂದಳು.

ತಾಯಿಯು ರಮಣೀಮೋಹನನ್ನು ಬರಿ "ಮೋಹನ" ಎಂದು ಕರೆಯುವಳು. ಮೋಹನನು, "ನಾಳೆ ಕಲಿಕತ್ತೆಗೆ ಹೋಗೋಣವೆಂದು ಯೋಚಿಸುತ್ತಿದ್ದೆನು" ಎಂದನು.

ತಾಯಿ—ಅದೇಕೆ? ಕಾಲೇಜು ತೆರೆಯುವುದಕ್ಕಿನ್ನೂ ಹೆಚ್ಚು ವಿಳಂಬವಿದೆ?

ಹುಡುಗನು ಅಭಿಮಾನಗೊಂಡಿದ್ದನೆಂದು ತಾಯಿಯು ತಿಳಿದವಳು, ಒಬ್ಬ ದಾಸಿಯನ್ನು ಕರೆದು, "ಎಲ್ಲಿಂದಲೋ, ಒಬ್ಬ ಹುಡುಗಿಯು ಬಂದಿದ್ದಾಳೆ; ಅವಳಿಗೆ ಎರಡುತುತ್ತು ಅನ್ನವನ್ನು ಕೊಡುವಂತೆ ಹೇಳು. ಈಗ ರಾತ್ರಿ ಮತ್ತೆಲ್ಲಿಗೆ ಹೋಗುವಳು? ಇಲ್ಲಿಯೇ ಇರಲಿ—ನಾಳೆ ಬೆಳಗ್ಗೆ ಅವಳನ್ನು ಮನೆಯಿಂದ ಹೊರಗೆ ಕಳುಹಿಸಿ ಬಿಡಲಿ" ಎಂದು ಹೇಳಿದವಳು.

ದಾಸಿ—ವಾಮೆಯು ಅವಳಿಗೆ ಊಟವನ್ನು ಮಾಡಿಸಿದಳು.

ಎಂಟನೆಯ ಪರಿಚ್ಛೇದ.

ಮರುದಿನ ಬೆಳಗ್ಗೆ ಯಜಮಾನಿಯೆದ್ದು ನೋಡಿದಳು. ಹುಡುಗಿಯೊಬ್ಬಳು ಹಜಾರದಿಂದ ಅಂಗಳಕ್ಕೆ ಹೋಗುವ ದಾರಿಯನ್ನು ಗುಡಿಸುತ್ತಿದ್ದಳು. ಅಚ್ಚರಿಗೊಂಡು, "ನೀನಾರೆ?" ಎಂದು ವಿಚಾರಿಸಿದಳು.

ವಾಮೆಯು ಹತ್ತಿರ ಇದ್ದವಳು ಓಡಿಬಂದು, "ಮತ್ತಾರು? ಅವಳೊಬ್ಬ ಮನುಷ್ಯಳು" ಎಂದಳು.

ಯಜಮಾನಿ-ಮನುಷ್ಯಳೇನೋ ಅಹುದು-ಮನುಷ್ಯರಿಗೆ ಹೆಸರಿಲ್ಲವೆ?

ವಾಮೆ—ಹೆಸರಿಂದ ಪರಿಚಯವಾದಂತಾಗುವುದೆ? ಹುಡುಗಿಯ ಹೆಸರು, ನೀರದೆ—

ಯಜಮಾನಿ—ಮೊನ್ನೆದಿನ ಭಿಕ್ಷಕ್ಕೆ ಬಂದ ಹುಡುಗಿಯಲ್ಲವೆ?

ವಾಮೆ—ಅಹುದು.

ಯಜಮಾನಿ—ಇಂದು ಪುನಃ ಭಿಕ್ಷಕ್ಕೆ ಬಂದಳೆ?

ವಾಮೆ—ಅಂದು ಬಹಳ ಭಿಕ್ಷವನ್ನು ಕೊಟ್ಟೆ-ಅದೇ ಆಶೆಗೆ ಬಂದಳು.

ಯಜಮಾನಿ-ನಿನ್ನ ಮಾತಿಗೆ ಮಾತನ್ನು ಹವಣಿಸುವುದು ಕಷ್ಟ. ಸಮಾಚಾರವೇನು? ವಿವರವಾಗಿ ಹೇಳು.

ವಾಮೆ—ಮೋಹನನು ನಿನ್ನೆ ಠಾಣೆಯಿಂದ ಕರೆತಂದಿರುವ ಹುಡುಗಿ, ತಾಯಿ!

ಯಜಮಾನಿಯ ಮುಖವು ಗಂಭೀರವಾಯಿತು. ಅವಳು ಸ್ವಲ್ಪ ರುದ್ಧಕಂಠೆಯಾಗಿ, "ಅವಳನ್ನೂ ಇಲ್ಲಿರುವಳೆ ? ಇಂದೂ ಇರುವಳೇನು ?" ಎಂದಳು.

ವಾಮೆ—ಇಲ್ಲ-ನಿಮ್ಮ ಮನೆಯಲ್ಲೊಂದು ದಿನವಾದರೂ ಇರಳು—ಇಂದು ನನ್ನೊಡನೆ ಹೊರಟುಹೋಗುವಳು.

ಯಜಮಾನಿ—ನಿನ್ನ ಸಂಗಡಲೆ ?

ವಾಮೆ—ಅಹುದು-ನನ್ನ ಸಂಗಡ.

ಯಜಮಾನಿ—ನೀನೆಲ್ಲಿಗೆ ಹೋಗುವೆ ?

ವಾಮೆ—ನನ್ನ ಮನೆಗೆ.

ಯಜಮಾನಿ—ನಿನ್ನ ಮನೆಯಲ್ಲಿರುವವರಾರು ? ಇಷ್ಟುಕಾಲದ ಮೇಲೆ ನಿನ್ನ ನಾಡಿಯು ಬಿಗಡಾಯಿಸಿದಂತಿದೆ.

ವಾಮೆ—ಆರಿಲ್ಲದಿದ್ದರೂ ಮನೆಬಾಗಿಲು ಇದೆ.

ಯಜಮಾನಿ—ನಿನಗೆ ಮನೆ ಬಾಗಿಲು ಇಲ್ಲವೆಂದು ತೋರುತ್ತದೆ.

ವಾಮೆ—ಇಲ್ಲದಿದ್ದರೆ ಹೊಸದಾಗಿ ಕಟ್ಟಿಸುವೆನು.

ಯಜಮಾನಿ—ಹಾಗಾದರೆ ಹೋಗಲೇ ಬೇಕೆ ?

ವಾಮೆ—ಅಹುದು-ಹೋಗಬೇಕು.

ಯಜಮಾನಿ—ಹೋಗಲೇಕೆ ? ಹೇಳಬಾರದೆ ?

ವಾಮೆ—ಹೋಗದಿದ್ದರೆ, ಹುಡುಗಿಯಿರುವುದಕ್ಕೆ ಸ್ಥಳವನ್ನೆಲ್ಲಿ ಕೊಡಲಿ ?

ಯಜಮಾನಿ—ಹುಡುಗಿಯು ನಿನಗೇನಾಗಬೇಕು ? ಅವಳಿಗೆಸಲವಾಗಿ ಅಷ್ಟೊಂದು ಕಡ್ಡಾಟವೇಕೆ ?

ವಾಮೆ—ಹುಡುಗಿಗೆ ಮತ್ತಾರೂ ದಿಕ್ಕಿಲ್ಲ—ಇಂದಿನಿಂದ ನಾನವಳ ಪೋಷಣೆಯ ಭಾರವನ್ನು ವಹಿಸಿದ್ದೇನೆ. ನನ್ನ ಮರಣಕಾಲದಲ್ಲಿ ನನಗಿರುವುದನ್ನೆಲ್ಲಾ ಅವಳಿಗೆ ಕೊಟ್ಟು ಸಾಯುವೆನು.

ಯಜಮಾನಿಯು ಸಂಗತಿಯನೆಲ್ಲಾ ತಿಳಿದವಳಾದಳು. ತಿಳಿದು ಸ್ವಲ್ಪ ಚಿಂತಿತೆಯಾದಳು. ವಾಮೆಯನ್ನು ಬಿಡುವುದಕ್ಕೆ ಅವಳಿಗಿಷ್ಟವಿಲ್ಲ. ಮೂವತ್ತು ವರ್ಷಗಳಿಂದ ಸಹಚರಿಯಾಗಿದ್ದವಳನ್ನು ಬಿಡುವುದು ಸುಲಭವಲ್ಲ.

ವಾಮೆಯಂತೆ ನಂಬುಗೆಯಾದವಳು ಮತ್ತಾರೂ ಇಲ್ಲ—ಅವಳಂತೆ ಮನೆಯ ಕೆಲಸಕಾರ್ಯಗಳನ್ನು ಮಮತೆಯಿಂದ ನೋಡಿಕೊಳ್ಳುವವರು ಮತ್ತಾರೂ ಇಲ್ಲ—ಆದರೆ ಪೊಲಿಸ ಆಸಾಮಿಯಾಗಿದ್ದ ಭಿಕ್ಷದ ಹುಡುಗಿಗೆ ಮನೆಯಲ್ಲಿರಲು ಸ್ಥಳವನ್ನು ಕೊಡುವುದುಚಿತವಲ್ಲ, ಅವಳಿಗೆ ಸ್ಥಳವನ್ನು ಕೊಡದಿದ್ದರೆ ವಾಮೆಯು ಹೊರಟುಹೋಗುವಳು. ಯಜಮಾನಿಗೆ ಬಹಳ ಅನುಸಂಕಟಕ್ಕಿಟ್ಟಿತು. ಅವಳು ಬಹಳ ಯೋಚಿಸಿ ಬಳಿಕ, "ಒಳ್ಳೆಯದು, ಹುಡುಗಿಯು ಇಲ್ಲಿರಲಿ ; ಆದರೆ ಅವಳು ಮನೆಯೊಳಗೆ ಬಾರದಿರಬೇಕು" ಎಂದು ಹೇಳಿದಳು.

ಒಂಬತ್ತನೆಯ ಪರಿಚ್ಛೇದ.

ರಮಣೀಮೋಹನನು ಕಲಿಕತ್ತೆಗೆ ಹೋಗಲಿಲ್ಲ--ವಾಮೆಯೂಮನೆಯನ್ನು ಬಿಟ್ಟು ಹೋಗಲಿಲ್ಲ. ಅವರಿಬ್ಬರ ಇಷ್ಟಾರ್ಥವೂ ಕೈಗೂಡಿತು. ಅನಾಥೆಯಾದಾ ಹುಡುಗಿಯು ಆಶ್ರಯವನ್ನು ಹೊಂದಲಿ, ಅಥವಾ ಹೊಂದದೆ ಪೋಗಲಿ, ಅವರಿಗೇಕೆ ಅಷ್ಟೊಂದು ಮನೋವ್ಯಥೆ? ಹುಡುಗಿಯಲ್ಲಿ ಅವರಿಗೇಕೆ ಅಷ್ಟೊಂದು ಮೋಹ ಅಥವಾ ಮಮತೆ? ಆ ಮೋಹ ಮಮತೆಗಳೇಕೋ, ನಾವದನ್ನು ಹೇಳಲಾರೆವು. ನಾವು ಒತ್ತಡವೆ ಒಂದು ಕಪೋತದ ಪಕ್ಷಿಯನ್ನು ನೋಡಿದ್ದೆವು--ಅದು ಒಂಟಿಯಾಗಿದ್ದಿತು. ಅದರೊಂದಿಗೆ ಬೇರೆ ಕಪೋತವಾಗಲಿ, ಕಪೋತಿಯಾಗಲಿ ಇರಲಿಲ್ಲ. ಅದು ಎಲ್ಲಿಂದಲೋ ಹಾರಿ ಬಂದು ನಮ್ಮ ಮನೆಯ ಮಾಳಿಗೆಯ ಮೇಲೆ ಕುಳಿತುಕೊಂಡಿತು. ಅದಕ್ಕೆಸಲವಾಗಿ ನಮ್ಮ ಮನಸ್ಸು ಮರುಗಿತು. ನಾವು ಅಂತರಿಕ್ಷವನ್ನೆಲ್ಲಾ ನೋಡಿದೆವು. ಹತ್ತಿರದಲ್ಲಾಗಲಿ ದೂರದಲ್ಲಾಗಲಿ ಒಂದಾದರೂ ಪಾರಿವಾಳದಪಕ್ಕಿಯು ಕಣ್ಣಿಗೆ ಬೀಳಲಿಲ್ಲ. ನಾವಾಗ ಸ್ವಂವ ನಹೃದಯದಿಂದ ಮನೆಯೊಳಗೆ ಹೋಗಿ ಪಕ್ಕಿಗೋಸ್ಕರ ಸ್ವಲ್ಪ ಧಾನ್ಯವನ್ನು ತಂದುಹಾಕಿದೆವು. ಪಕ್ಕಿಯು ಅದನ್ನು ತಿನ್ನಲಿಲ್ಲ—ಎದ್ದು ಹಾರಿ ಹೋಯಿತು. ನಾವದನ್ನು ಬಹಳವಾಗಿ ಕರೆದೆವು. ಅದು ಬರಲಿಲ್ಲ. ನಾವು

ಹಗಲೆಲ್ಲಾ ಹೋಗಿ ನಮ್ಮ ಮಾಳಿಗೆಯಮೇಲೆ ಕಪೋತವು ಬರುವುದೆಂಬಾ ಶೆಯಿಂದ ಆಕಾಶವನ್ನು ನೋಡುತ ಕುಳಿತಿದ್ದೆವು ಹಕ್ಕಿಯು ಬರಲಿಲ್ಲ. ಸಂಧ್ಯೆಯು ಬಂದು ಆಕಾಶವನ್ನು ಕವಿತುಕೊಂಡಿತು. ಆಗ ನಾವು ನಿರಸ್ತರಾ ದೆವು–ಮರುದಿನದಿಂದ ಪ್ರತಿದಿನವೂ ಮಾಳಿಗೆಯ ಮೇಲೆ ಹೋಗಿ ಕಪೋತ ವನ್ನು ಎದುರುನೋಡುತ್ತಿದ್ದೆವು ಅದರದು ಬರುತಿರಲಿಲ್ಲ; ಸಾಯಂಕಾಲ ವಾಗುತಲೆ ವ್ಯಥೆಗೊಂಡು ಮಾಳಿಗೆಯಿಂದಿಳಿದು ಬಂದುಬಿಡುವೆವು. ಆ ಕಪೋತಕ್ಕೆಸಲವಾಗಿ ನಮಗೇಕೆ ಅಷ್ಟೊಂದು ಮಮತೆ ?

ಆಶ್ರಯವಿಲ್ಲದೆ ಅನಾಥೆಯಾದಾ ಹುಡುಗಿಯಮೇಲೆ ರಮಣೀಮೋ ಹನನಿಗೆ ಅದೇಪ್ರಕಾರವಾದ ಮಮತೆಯೆಂದು ತೋರುತ್ತದೆ. ಹುಡು ಗಿಯು ಸುಖವಾಗಿ ಸ್ವಸ್ಥವಾಗಿರಲು ಅವನು ಬಹಳ ಪ್ರಯತ್ನಪಡುವನು. ಹುಡುಗಿಯು ಏನನ್ನು ಮಾಡುವಳೋ ಅದನ್ನು ನೋಡಲು ಅನೇಕತಡವೆ ಎದ್ದು ಹೋಗುವನು. ಅವಳಿಗೆ ಊಟವಾಯಿತೆ, ಇಲ್ಲವೆ ಎಂಬ ಸಂಗತಿ ಯನ್ನು ದಾಸಿಯಿಂದ ಕೇಳಿ ತಿಳಿದುಕೊಳ್ಳುವನು. ಅವನ ಯತ್ನಾದರ ಗಳನ್ನು ಕಂಡು ಹುಡುಗಿಯು ಲಜ್ಜೆಯಿಂದ ಭೂಮಿಗಿಳಿದುಹೋಗುವಳು- ಆದರೂ ರಮಣೀಮೋಹನನು ನಿರಸ್ತನಾಗಲಿಲ್ಲ.

ಕ್ರಮವಾಗಿ ಬಿಸಿಲಕಾಲವು ಪೂರೈಸುತ ಬಂದಿತು-ರಮಣೀಮೋಹ ನನು ಕಲಿಕತ್ತೆಗೆ ಹೋಗಲು ಹವಣಿಸಿಕೊಳ್ಳುತಿದ್ದನು. ಅಷ್ಟರೊಳಗೆ ಪೋಲಿಸಸಾಹೆಬನಿಂದ ಅವನ ಹೆಸರಿಗೊಂದು ಕಾಗದವು ಬಂದಿತು. ಕಾಗದ ದಲ್ಲಿ, "ಡಾಕ್ಟರನು ಶವದೇಹವನ್ನು ಪರೀಕ್ಷೆ ಮಾಡಿದುದರಲ್ಲಿ ಮುದು ಕಿಯು ಖೂನಾಗಲಿಲ್ಲವೆಂತಲೂ, ರಕ್ತಕೋಶವು ಒಡೆದು ಸತ್ತಳೆಂತಲೂ ಒಮ್ಮಿಂದೊಮ್ಮೆ ಅತ್ಯಧಿಕ ಕೋಪವುಂಟಾದರೂ ಅತ್ಯಧಿಕ ದುಃಖವುಂಟಾ ದರೂ ಹಾಗೆ ಮರಣವು ಸಂಭವಿಸುವುದೆಂತಲೂ ಬರೆದಿದ್ದಿತಲ್ಲದೆ, ದರೋಗ ನಿಗೆ ಬೇರೆ ಶಿಕ್ಷೆಯನ್ನು ಮಾಡದೆ ಜಮಾದಾರಿ ಕೆಲಸಕ್ಕೆ ಕಂಪರಾಮಾಡಿ ರುವುದಾಗಿಯೂ ಬರೆದಿದ್ದಿತು.

ಆ ವಿಚಾರವು ಹೇಗಾದರೂ ಆಗಲಿ-ಅದಕ್ಕೆಸಲವಾಗಿ ರಮಣೀಮೋ ಹನನು ಚಿಂತಿತನಾಗಲಿಲ್ಲ. ಅವನ ಚಿಂತೆಯೆಲ್ಲಾ ನೀರದೆಗೆಸಲವಾಗಿ-ಇಂದ ವನು ನೀರದೆಯನ್ನು ಬಿಟ್ಟು ಕಲಿಕತ್ತೆಗೆ ಹೊರಡುಬೇಕು. ಬೀಳ್ಕೊಳ್ಳುವ

ಸಮಯವು ಬಂದಿತು. ತಾಯಿಂದಲೂ ವಾಮೆಯಿಂದಲೂ ಬೀಳ್ಗೊಂಡನು. ಹಜಾರಕ್ಕೆ ಹೋಗಿ ವ್ಯಾಕುಲನಯನನಾಗಿ ನಾಲ್ಕು ಕಡೆ ನೋಡಿದನು. ಎಲ್ಲಿ ನೋಡಿದರೂ ನೀರದೆಯು ಕಣ್ಣಿಗೆ ಬೀಳಲಿಲ್ಲ. ಅಡಿಗೆಮನೆಗೊಮ್ಮೆ ಹೋಗಿ ನೋಡೋಣವೆಂದು ಇಷ್ಟವಾಯಿತು. ಆದರೆ ಸ್ವಲ್ಪ ಲಜ್ಜೆಯುಂಟಾಯಿತು. ನೀರದೆಯಿಂದ ಬೀಳ್ಗೊಳ್ಳಲಿಲ್ಲ, ರಮಣೀಮೋಹನನು ಕಲಿಕತ್ತೆಗೆ ಹೊರಟುಹೋದನು.

ಹತ್ತನೆಯ ಪರಿಚ್ಛೇದ.

ಕಲಿಕತ್ತೆಗೆ ಹೋದರೂ ರಮಣೀಮೋಹನನಿಗೆ ಶಾಂತಿಯಿಲ್ಲ—ನೀರದೆಯ ವಿಷಯವೇ ಎಲ್ಲಾ ಸಮಯದಲ್ಲಿಯೂ ಮನಸ್ಸಿಗೆ ಹೊಳೆಯುವುದು. ನೀರದೆಯು ತಾಯಿತಂದೆ ಇಲ್ಲದ ದಾರಿದ್ರ್ಯಪಾಲಿತೆಯಾದ ಅನಾಥೆ. ತನ್ನವರೆಂದೀ ಪ್ರಪಂಚದಲ್ಲವಳಿಗಾರೂ ಇಲ್ಲ-ಸಂಸಾರಸಮುದ್ರದ ತರಂಗದ ಶಿಖರದಲ್ಲಿ ತೇಲುತ್ತಿದ್ದಳು. ರಮಣೀಮೋಹನನು ಅವಳನ್ನು ತಂದು ದಡಕ್ಕೆ ಹಾಕಿದನು-ಬೆಂಬಲವಿಲ್ಲದ ಅನಾಥೆ ನೀರದೆಗೆ ರಮಣೀಮೋಹನನು ಏಕಮಾತ್ರ ಸಂಬಲವಾಗಿದ್ದನು. ರಮಣೀಮೋಹನನನ್ನು ಬಿಟ್ಟರೆ ಅವಳಿಗೆ ಮತ್ತಾರೂ ಇಲ್ಲ. ರಮಣೀಮೋಹನನಿಗೆ ಅವಳ ಜ್ಞಾಪಕವು ಬಂದರೆ ಸ್ವಲ್ಪ ಗರ್ವಿತನಾಗಿ ಹರ್ಷಾನುಭವವನ್ನು ಮಾಡುವನು.

ದಿನದಮೇಲೆ ದಿನವು ಉರುಳಿತು. ರಮಣೀಮೋಹನನು ಬಿ. ಎ. ಪರೀಕ್ಷೆಗೆ ಹೋಗಿ ಬಂದು ವರ್ಷದ ಬಳಿಕ ಮನೆಗೆ ಬಂದನು. ಮನೆಗೆ ಬಂದು ತಾಯಿಯನ್ನು ನೋಡಿದನು--ವಾಮೆಯನ್ನು ನೋಡಿದನು. ಆದರೆ ನೀರದೆಯನ್ನು ಕಾಣಲಿಲ್ಲ. ವ್ಯಾಕುಲನಯನನಾಗಿ ನಾಲ್ಕು ಕಡೆ ಹುಡುಕಿದನು. ಅವಳೆಲ್ಲಿಯೂ ಕಾಣಲಿಲ್ಲ. ಕಡೆಗೆ ಹತಾಶನಾಗಿ ಉಡುಪನ್ನು ಬದಲಾಯಿಸಲು ಮಲಗುವ ಕೊಠಡಿಗೆ ಹೋದನು-ಆಗ ಮಧ್ಯಾಹ್ನವು ತಿರಿಗಿದ್ದಿತು.

ಮಲಗುವ ಕೊಠಡಿಗೆ ಬಂದು ನೋಡಲಾಗಿ ಅಲ್ಲಿ ನವಯೌವನೋತ್ಫುಲ್ಲ ಅನುಪಮೆಯಾದ ಸೌಂದರ್ಯಮಯಿ ಕಿಶೋರಿಯೊಬ್ಬಳು ಅವನ ಹಾಸಿಗೆಯನ್ನು ಸರಿಯಾಗಿ ಹಾಸುತ್ತಿದ್ದಳು. ಹುಡುಗಿಯ ರೂಪವನ್ನು ನೋಡಿ ರಮಣೀಮೋಹನನು ಅಚ್ಚರಿಗೊಂಡು ಸ್ತಂಭಿತನಾದನು-ನೀರದೆಗೆ ಅಷ್ಟೊಂದು ರೂಪವಿದ್ದಿತೆಂದು ಅವನು ಮನಸ್ಸಿನಲ್ಲಿ ಊಹಿಸಿರಲಿಲ್ಲ-ಅವನದುವರೆಗೂ ನೀರದೆಯ ರೂಪವನ್ನು ನೋಡಿರಲಿಲ್ಲ ಅವಳ ದಾರಿದ್ರ್ಯ ಸಂಕಷ್ಟಗಳನ್ನು ಮಾತ್ರ ನೋಡಿದ್ದನು-ಇಂದು ಒಮ್ಮಿಂದೊಮ್ಮೆ ಆ ರೂಪರಾಶಿಯನ್ನು ಕಂಡು ಸ್ವಪ್ನದೃಷ್ಟೆಯಾದ ದೇವಿಯ ಪ್ರತಿಮೆಯು ಕಣ್ಣೆದುರಿಗೆ ನಿಂತಿದ್ದಂತೆ ತೋರಿತು.

ಮರುದಿನ ರಮಣೀಮೋಹನನು ಹುಡುಗಿಯನ್ನು ಹುಡುಕಲು ಹೋಗುತ್ತಿರಲಿಲ್ಲ-ಅವಳೊಂದಿಗೆ ಮಾತಾಡುತಲೂ ಇರಲಿಲ್ಲ. ಹುಡುಗಿಯು ದಾಸಿಯ ವೃತ್ತಿಯನ್ನು ಮಾಡುತ್ತ ಮನೆ, ಮಹಡಿ, ಎಲ್ಲೆಲ್ಲಿಯೂ ತಿರುಗುತ್ತಿದ್ದುದನ್ನು ನೋಡುವನು. ನಿಶೀಥದಲ್ಲಿ ಶುಕ್ಲಾಷ್ಟಮಿಯ ಚಂದ್ರನು ನೀಲಾಕಾಶದ ಒಡಲಲ್ಲಿ ನೀರವವಾಗಿ ತಿರುಗುವಂತೆ ಚಂದ್ರಾಧಿಕ ಸೌಂದರ್ಯಮಯಿಯಾದಾ ಹುಡುಗಿಯು ಪ್ರಫುಲ್ಲವದನೆಯಾಗಿ ಅಕ್ಲಾಂತ ದೇಹದಿಂದ ಹಗಲು ರಾತ್ರಿ ಮನೆಯಲ್ಲಿ ತಿರುಗಾಡುತ್ತಿರುವಳು. ಜ್ಯೋತ್ಸ್ನಾಮಯವಾದ ರಾತ್ರಿಯಲ್ಲಿ ಗೃಹಾಬದ್ಧನಾದ ರೋಗಿಯು ಹಾಸಿಗೆಯಮೇಲೆ ಮಲಗಿಕೊಂಡು ಮನಸ್ಸಿನಲ್ಲಿ ಜ್ಯೋತ್ಸ್ನಾಪೂರಿತ ಕುಸುಮಿತ ಉದ್ಯಾನವನ್ನು ಕಲ್ಪಿಸಿಕೊಳ್ಳುವಂತೆ, ರಮಣೀಮೋಹನನು ನಿಸ್ತಬ್ಧನದಿಯ ಸೈಕತದಲ್ಲಿ ಕುಳಿತು ನೀರದೆಯ ಸೌಂದರ್ಯದಿಂದ ಉದ್ಭಾಸಿತವಾಗಬಹುದಾದ ಗೃಹವನ್ನು ಕಲ್ಪಿಸಿಕೊಳ್ಳುತ್ತಿರುವನು. ಹುಡುಗಿಯು ದೂರದಲ್ಲಿದ್ದರೂ ಹತ್ತಿರದಲ್ಲಿದ್ದರೂ ರಮಣೀಮೋಹನನ ಹೃದಯವು ಕಲ್ಪನಾಮಯಲೋಕದಲ್ಲಿ ಸಂಚರಿಸುತ್ತ ಉದ್ಭಾಸಿತವಾಗುತ್ತಿರುವುದು.

ಹನ್ನೊಂದನೆಯ ಪರಿಚ್ಛೇದ.

ಎರಡುತಿಂಗಳಾದಬಳಿಕ ಬಿ. ಎ. ಪರಿಕ್ಷೆಯ ಫಲವು ಹೊರಪಟ್ಟಿತು. ರಮಣೀಮೋಹನನು ಪರೀಕ್ಷೋತ್ತೀರ್ಣನಾಗಿದ್ದನು. ಮನೆಯ ಯಜಮಾನಿಯು ಮಗನ ಮದುವೆಗೆ ಸಲವಾಗಿ ಹವಣಿಸಿ ಸಿದ್ಧಪಡಿಸುತ್ತಿವಳು.

ಅನೇಕ ದಿನಗಳಿಗೆ ಮೊದಲೇ ಹೆಣ್ಣು ಗೊತ್ತಾಗಿದ್ದಿತು. ಆದುಕಾರಣ ಮದುವೆಗೆ ಸಲವಾಗಿ ಬೇಕಾದುದನ್ನೆಲ್ಲಾ ಸಿದ್ಧಪಡಿಸಿಕೊಳ್ಳಲು ವಿಳಂಬವಾಗದು. ಆಷಾಢಮಾಸದಲ್ಲಿ ಮದುವೆಯು ಗೊತ್ತಾಯಿತು.

ಒಂದಾನೊಂದು ದಿನ ಸಾಯಂಕಾಲವಾದ ಬಳಿಕ ತಾಯಿಯು ಇದ್ದ ಕೊಠಡಿಗೆ ಹೋಗಿ ರಮಣೀಮೋಹನನು "ಅಮ್ಮಾ! ಎಂ. ಏ. ಪರೀಕ್ಷೆಗೆ ಓದುಬೇಕೆಂದು ಸಂಕಲ್ಪಮಾಡಿಕೊಂಡಿದ್ದೇನೆ" ಎಂದನು.

ತಾಯಿ—ಪುನಃ ಓದಲವಶ್ಯವೇನು? ಈಗ ಓದಿರುವುದೇ ಯಥೇಷ್ಟವಾಯಿತು.

ಮೋಹನ—ಅಮ್ಮಾ! ಓದುವುದಕ್ಕೆ ತುದಿ ಮೊದಲು ಉಂಟೆ?

ತಾಯಿ—ಬಡವರಾದವರು ಚಿರಕಾಲ ಓದಲಿ, ದೊಡ್ಡವರ ಮಕ್ಕಳು ಒಂದೆರಡು ಬುಕ್ಕುಗಳನ್ನೋದಿದರೆ ಸಾಕು.

ಮೋಹನ—ಅದು ಅವರವರ ಇಷ್ಟ; ನನಗೆ ಮತ್ತೊಂದು ವರ್ಷ ಓದುಬೇಕೆಂಬ ಆಸೆ.

ತಾಯಿ—ಒಳ್ಳೆಯದು—ಇಷ್ಟವಿದ್ದರೆ ಓದು.

ಮೋಹನ—ಅಮ್ಮಾ!—

ತಾಯಿ—ಏನು? ಮಗು!

ಮೋಹನ—ಮದುವೆಯು ಈಗ್ಗೆ ನಿಂತಿರಲಿ.

ತಾಯಿ—ಅದೇಕೆ?

ಮೋಹನ-ಓದಿ ಪೂರೈಸುವತನಕ ಮದುವೆಯನ್ನುಮಾಡಿಕೊಳ್ಳೆನು.

ತಾಯಿ—ಅದಾಗುವುದಿಲ್ಲ.

ಮೋಹನ—ಏಕೆ? ಅಮ್ಮಾ!

ತಾಯಿ—ಮದುವೆಗೆ ಲಗ್ನವು ಗೊತ್ತಾಗಿದೆ.

ಮೋಹನ–ಒಂದುವರ್ಷ ಮುಂದಾದರೆ ನಷ್ಟವೇನು ?

ತಾಯಿ –ನಮಗೇನೂ ನಷ್ಟವಿಲ್ಲ-ಹೆಣ್ಣಿನವರಿಗೆ ಕಷ್ಟ.

ಮೋಹನ–ಕಷ್ಟವೇನು ?

ತಾಯಿ –ಕನ್ಯೆಯು ಅರಕ್ಷಣೀಯೆ-ಹೇಗಾದರೂ ಈವರ್ಷವೇ ಮದುವೆಯಾಗಬೇಕು. ಆಷಾಢದೊಳಗೆ ಆಗಬೇಕು. ಮೋಹನನು ಎದ್ದು ನಿಂತು, "ಹಾಗಾದರೆ, ಹೆಣ್ಣಿನ ತಂದೆಯು ಮತ್ತೆಲ್ಲಾದರೂ ವರವನ್ನು ನೋಡಿಕೊಳ್ಳಲಿ"ಎಂದನು. ಯಜಮಾನಿಯ ಮುಖವು ಭಾರವಾಯಿತು. ಅವಳೇನನ್ನೂ ಹೇಳಲಿಲ್ಲ. ರಮಣೀಮೋಹನನು ಹೊರಡಲುದ್ಯುಕ್ತನಾದನು. ಹೋಗುವ ಸಮಯದಲ್ಲಿ, "ನೀನು ಅಪ್ಪಣೆಮಾಡಿದರೆ, ಮದುವೆಯಾಗಲೇ ಬೇಕಾಗುವದು" ಎಂದನು.

ರಮಣೀಮೋಹನನಿಗೆ ತಿಳಿಯಹೇಳಿ ಮದುವೆಗೊಪ್ಪಿಸುವ ಭಾರವು ಮಾಮಿಯ ಮೇಲೆ ಬಿದ್ದಿತು. ಮಾಮಿಯು ಬಹಳ ಹೇಳಿದಳು, ಆದರೆ ರಮಣೀಮೋಹನನು ಒಪ್ಪಲಿಲ್ಲ. ಎಲ್ಲಾವಿಧವಾದ ಚರ್ಚೆಯಾದ ಬಳಿಕ ಮೋಹನನು, "ಹೆಚ್ಚು ವಯಸ್ಸಾದಬಳಿಕ ಮದುವೆಯಾದರೆ ಚೆನ್ನಾಗಿದೆ-ಈಗ ಮದುವೆಯನ್ನು ಮಾಡಿಕೊಂಡರೆ ಓದುವುದಕ್ಕೆ ವಿಘ್ನವುಂಟಾಗುವದು" ಎಂದನು.

ಮಾಮಿಗೂ ಅದೇ ಒಪ್ಪಿತವಾಯಿತು. ಅವಳಿಗೊಂದು ದೋಷ-ಮೋಹನನು ಸರಿಯೆಂದು ಹೇಳಿದುದಕ್ಕೆ ಒಪ್ಪುವಳು. ಮೋಹನನು ಹೇಳಿದುದನ್ನೆಲ್ಲಾ ಕೇಳಿ, "ನೀನು ಹೇಳುವುದು ಸರಿ, ಚಿಕ್ಕ ಹುಡುಗನಲ್ಲದೆ ನಿನಗೇನು ವಯಸ್ಸಾಗಿದೆ? ಈಗಿಲ್ಲದಿದ್ದರೆ ಇನ್ನೆರಡು ವರ್ಷಕ್ಕೆ ಮದುವೆಯಾಗಲಿ-ಮದುವೆಯೇನೂ ಓಡಿಹೋಗುವುದಿಲ್ಲ- ಯಜಮಾನಿಗೆ ಎಲ್ಲದರಲ್ಲಿಯೂ ಆತುರ-ಅವಸರ ಅವಸರ" ಎಂದು ಹೇಳಿದಳು.

ಅತಏವ ಯಜಮಾನಿಯ ಮಾತು ಎದ್ದುಹೋಯಿತು-ಮದುವೆಯು ನಿಂತಿತು.

ಹನ್ನೆರಡನೆಯ ಪರಿಚ್ಛೇದ.

ಕೆಲವು ದಿನಗಳಾದಬಳಿಕ ರಮಣೀಮೋಹನನು ಕಲಿಕತ್ತೆಗೆ ಹೊರಟು ಹೋದನು. ಕಲಿಕತ್ತೆಯಲ್ಲಿ ಈತನಿನ್ನೂ ಇದ್ದಾಗ ರಮಣೀಮೋಹನನಿಗೆ ಬಹಳ ಅಲಸ್ಯವೆಂದು ವರ್ತಮಾನವು ಬಂದಿತು. ತಾಯಿಯ ಪ್ರಾಣವು ತುಡುಯಿತು. ಅವಳು ನಿಮಿಷದಲ್ಲಿ ಹೊರಡಲು ಸಾಮಾನುಗಳನ್ನು ಕಟ್ಟುವುದಕ್ಕೆ ತೊಡಗಿದಳು-ವಾಮೆಯೂ ಸಿದ್ಧವಾದಳು- ಯಜಮಾನಿಯು, "ವಾಮೆ! ನೀನು ಹೊರಟರೆ ಇಲ್ಲಿ ಮನೆಯ ಸಂಸಾರವನ್ನು ನೋಡಿಕೊಳ್ಳುವರಾರು?" ಎಂದಳು.

ವಾಮೆ--ಸಂಸಾರವು ಎಲ್ಲಾದರೂ ಹೋಗಲಿ_ಅವನಿದ್ದರೆ ಸಂಸಾರವೋ ಅವನೇ ಅಲಸ್ಯದಲ್ಲಿ ಬಿದ್ದಿರುವಾಗ ನಾನಿಲ್ಲಿದ್ದು ಮಾಡುವುದೇನು? ನಾನಿರುವುದಿಲ್ಲ.

ಯಜಮಾನಿಗೆ ಮಾತಿಲ್ಲವಾಯಿತು. ರಾಮಿಯು, "ನಾನೂ ಬರುವೆನು" ಎಂದಳು. ಅವಳಿಗೆ ಕಾಳೀಘಾಟನ್ನೂ ಕಲಿಕತ್ತೆಯನ್ನೂ ನೋಡಬೇಕೆಂಬಾಸೆ ಅಲ್ಲಿ ದೊಡ್ಡ ಸಂತೆಯಾಗುವುದೆಂದೂ ಸಂತೆಯಲ್ಲಿ ಅಪಾರ ಹಣ್ಣುಗಳೂ, ವಿಧವಿಧವಾದ ಬಳೆಗಳೂ ಕೂದಲಿಗೆ ಹಚ್ಚುವ ಕಪ್ಪುರಂಗೂ ಮಾರುವುವೆಂದೂ ಕೇಳಿದ್ದಳಾದುದರಿಂದ ಈ ವಯಸ್ಸಿನಲ್ಲಿಯೂ (ನಾಲ್ವತ್ತಾರುವರ್ಷ) ಆ ದೊಡ್ಡ ಸಂತೆಯಲ್ಲಿ ವ್ಯಾಪಾರವನ್ನು ಮಾಡಬೇಕೆಂಬಾಸೆಯಿಂದ ಹೊರಡಲು ಉತ್ಸುಕೆಯಾಗಿ ಕಣ್ಣೀರನ್ನು ಬಿಟ್ಟಳು. ಯಜಮಾನಿಯು ಬೇಡವೆಂದಳು-ರಾಮಿಯು ಅಳುವುದಕ್ಕೆ ತೊಡಗಿ ಬಾಬುವನ್ನು ನೋಡಬೇಕೆಂದು ಮುಸ್ಕರ ಹಿಡಿದಳು-ಬಾಬುವಿನ ಮೇಲೆ ಅವಳ ಮಮತೆಯನ್ನು ಕಂಡು ಯಜಮಾನಿಯು ರಾಮಿಯೂ ಹೊರಡುವುದಕ್ಕೊಪ್ಪಿದಳು,

ವಾಮೆಯು ನೀರದೆಯ ಸ್ಮರಣೆಯು ಬಂದು ಓಡಿಹೋಗಿ ಯಜಮಾನಿಗೆ "ನೀರದೆಯೂ ನನ್ನೊಂದಿಗೆ ಬರುವಳು" ಎಂದು ಹೇಳಿದಳು.

ಯಜಮಾನಿ -ಏತಕ್ಕೆ?

ವಾಮಾ--ನೀರದೆಯು ಮೋಹನನ ಕೆಲಸಗಳನ್ನು ಮಾಡುವಂತೆ ಮತ್ತಾರೂ ಮಾಡರು. ಅವಳು ಮೋಹನನ ಚಿಕ್ಕಮನೆಯನ್ನು ಗುಡಿಸಿ,

ಅಚ್ಚುಕಟ್ಟು ಮಾಡಿ, ಹಾಸಿಗೆಯನ್ನು ಹಾಸಿ, ಅವನ ಪದಾರ್ಥಗಳನ್ನೆಲ್ಲಾ ಒಪ್ಪಮಾಡುವುದನ್ನು ನೋಡಿದರೆ ಮೋಹನನು ಎಷ್ಟೋ ಸಂತೋಷಿಸುವನು. ಮೋಹನನ ಕೆಲಸವನ್ನು ಮತ್ತಾರೂ ಸರಿಯಾಗಿ ಮಾಡರು.

ಯಜಮಾನಿಯು ಈಚೀಚೆಗ ನೀರಜೆಯ ಕಾರ್ಯತತ್ಪರತೆಯನ್ನೂ ಅವಳ ಸ್ವಭಾವವನ್ನೂ ಅವಳ ಚರಿತ್ರೆಯನ್ನೂ ಕಂಡು ಅವಳಮೇಲೆ ಪ್ರಸನ್ನಳಾಗಿದ್ದಳು. ಅವಳು ಮನೆಯಲ್ಲಿ ಎಲ್ಲಿ ಬೇಕಾದರೂ ಹೋಗಿ ಬರಬಹುದು-ಆದರೆ ಆಹಾರ್ಯಪಾನೀಯ ಪದಾರ್ಥಗಳನ್ನು ಮುಟ್ಟುಗೊಡಿಸುತ್ತಿರಲಿಲ್ಲ; ಏಕೆಂದರೆ, ಅವಳ ಜಾತಿಯು ಗೊತ್ತಿರಲಿಲ್ಲ-ಹಾಗೆಯ ಪ್ರಸ್ತಾಪಕ್ಕೆ ಯಜಮಾನಿಯು ಆಕ್ಷೇಪಿಸಲಿಲ್ಲ.

ಆದುದರಿಂದ ನೀರಜೆಯೂ ಸಂಗಡ ಹೊರಟಳು. ನಾಯಬ ನೌಕರರು ಮುಂತಾದವರು ಸೇರಿ ದೊಡ್ಡದೊಂದು ದಳವಾಯಿತು. ದೊಡ್ಡದಾದಾ ದಳವನ್ನು ಕಟ್ಟಿಕೊಂಡು ಯಜಮಾನಿಯು ಮರುದಿನ ಮಧ್ಯಾಹ್ನ ಮಗನ ಮನೆಗೆ ಬಂದು ಮುಟ್ಟಿದಳು.

ಯಜಮಾನಿಯು ದೊಡ್ಡ ದಳದೊಂದಿಗೆ ಬಂದುದು ಸರಿಯಲ್ಲವೆಂದು ತಿಳಿದಳು. ಮನೆಯಲ್ಲಿ ಸ್ಥಳವು ಸಾಲದು. ಅದಲ್ಲದೆ ಡಾಕ್ಟರನು ಅಸಂತುಷ್ಟನಾಗಿ ಮನೆಯಲ್ಲಿ ಅಷ್ಟೊಂದು ಗುಂಪು ಸೇರಕೂಡದೆಂದು ಹೇಳಿದನು-ಬಳಿಕ ನೆರಮನೆಯನ್ನು ಬಾಡಿಗೆಗೆ ತೆಗೆದುಕೊಂಡು. ಸಂತೆಯ ವ್ಯಾಪಾರ ಮುಂತಾದ ಕೆಲಸಕ್ಕೆ ಬಂದವರೆಲ್ಲರೂ ಆ ಮನೆಗೆ ಹೋದರು.

ರೋಗವು ಅಷ್ಟು ಕಠಿಣವಾದುದಲ್ಲವಾದರೂ ದೊಡ್ಡ ಮನುಷ್ಯನಿಗೆ ಬಂದ ಜ್ವರವಾದುದರಿಂದ ದೊಡ್ಡ ರೋಗವಾಗಿ ಪರಿಣಮಿಸಿತು. ಡಾಕ್ಟರೂ ವೈದ್ಯರೂ ಪದೇಪದೆ ಬಂದು ಹೋಗುವರು-ಪಥ್ಯಾದಿಗಳೆಲ್ಲಾ ಡಾಕ್ಟರನ ಮನೆಯಲ್ಲಿಯೇ ಸಿದ್ಧವಾಗುವುವು-ಹಣವು ಅಜಸ್ರವಾಗಿ ವೆಚ್ಚವಾಗುತಿದ್ದಿತು-ಅದುಕಾರಣ ರೋಗವು ಕಠಿಣವಾದುದೆಂದು ಹೇಳದಿದ್ದರ ಸಾಗದು-ರೋಗವು ಕಠಿಣವಾದುದೆಂದು ಯಜಮಾನಿಯೂ ತಿಳಿದಳು.

ಯಜಮಾನಿಯು ಆಹಾರ ನಿದ್ರೆಗಳನ್ನು ಬಿಟ್ಟು ಮಗನ ಹಾಸಿಗೆಯ ಬಳಿ ಕುಳಿತಳು-ಆದರೆ ಅವಳು ಮಗನ ಕೆಲಸವಾವುದನ್ನೂ ಮಾಡಳು. ಡಾಕ್ಟರನು ಹೇಳಿ ಹೋದಂತ ಆವ ಕೆಲಸವನ್ನೂ ಮಾಡಲಾರಳು ಡಾಕ್ಟ

ರನು ಹೇಳಿದುದನ್ನು ತಿಳಿದುಕೊಳ್ಳುವುದಕ್ಕೂ ಅವಳಿಗೆ ಸಾಮರ್ಥ್ಯವಿರಲಿಲ್ಲ-ವಾಮೆಯು ಹತ್ತಿರ ಸೇರಳು-ಔಷಧಾದಿಗಳನ್ನು ಸೇವನೆ ಮಾಡಿಸುವ ಭಾರವು ಸೀರಡೆಯಮೇಲೆ ಬಿದ್ದಿತು.

ಆಗ ಸೀರಡೆಗೆ ಓದುಬರಹವೂ ಬರುತಿದ್ದಿತೆಂದು ಎಲ್ಲರಿಗೂ ಗೊತ್ತಾಯಿತು. ಡಾಕ್ಟರನು ಹೇಳಿ ಬರೆದಿಟ್ಟಂತೆ ಅಕ್ಷರಶಃ ಎಲ್ಲಾ ಕೆಲಸಗಳನ್ನೂ ಮಾಡಿರುವಳು-ಅಷ್ಟೇ ಅಲ್ಲ-ಮಾಡಿದುದನೆಲ್ಲಾ ಬರೆದಿಟ್ಟಿರುವಳು. ಥರ್ಮಾಮಿಟರನ್ನು ವ್ಯವಹರಿಸುವುದನ್ನೂ ಬಲ್ಲವಳಾಗಿದ್ದಳು-ಆವಹೊತ್ತಿನಲ್ಲಿ ಎಷ್ಟೆಷ್ಟು ಜ್ವರವಿದ್ದಿತೆಂಬುದನ್ನು ನೋಡಿ ಬರೆದಿಡುವಳು-ಕಾಲಕಾಲಕ್ಕೆ ಸರಿಯಾಗಿ ಆಯಾ ಔಷಧವನ್ನು ಸೇವನೆ ಮಾಡಿಸಿ ಅದನ್ನೂ ಬರೆದಿಡುವಳು. ಡಾಕ್ಟರನು ಬಂದರೆ ಆವ ಮಾತನ್ನೂ ಆಡದೆ ಬರೆದಿಟ್ಟಿದ್ದುದನ್ನು ಅವನ ಮುಂದಿಟ್ಟು ದೂರ ಹೋಗಿ ನಿಂತಿರುವಳು.

ಹುಡುಗಿಯ ಬುದ್ಧಿಯನ್ನೂ, ಅವಳು ಉಪಚರಿಸುವ ರೀತಿಯನ್ನೂ ನೋಡಿ ಯಜಮಾನಿಯೂ ಮುಗ್ಧೆಯಾದಳು. ವಾಮೆಯು ಅದನ್ನು ತಿಳಿದು ಗರ್ವದಿಂದುಬ್ಬಿ ಸ್ವಲ್ಪ ನಗುವಳು. ಆದರೆ ಹುಡುಗಿಗೆ ಬಹಳ ತೊಂದರೆ ಗಿಟ್ಟಿತು. ಅದಕ್ಕೆ ಮೊದಲು ವಾಮೆಯು ಚಿಕ್ಕಮನೆಯಲ್ಲಿರುತ್ತಿದ್ದಾಗ ಔಷಧದ ಪಾತ್ರದಲ್ಲಿ ಔಷಧವನ್ನು ಹಾಕಿ ವಾಮೆಯ ಕೈಗದನ್ನು ಕೊಟ್ಟು ನಿಶ್ಚಿಂತೆಯಾಗಿರುವಳು-ವಾಮೆಯು ಹೇಗೋ ಹಾಗೆ ಪ್ರಯತ್ನಪುರಸ್ಸರವಾಗಿ ಔಷಧವನ್ನು ಸೇವನೆ ಮಾಡಿಸುವಳು. ಜ್ವರದ ಉತ್ತಾಪವನ್ನು ನೋಡಬೇಕಾದರೆ ಗಾಜಿನ ಯಂತ್ರವನ್ನು ತಗೆದು ಯಜಮಾನಿಯ ಕೈಯಲ್ಲಿ ಕೊಟ್ಟು ಗಡಿಯಾರವನ್ನು ನೋಡುತ್ತ ಹೊತ್ತನ್ನು ತಿಳಿಸುವಳು-ಈಗಲಾದರೋ, ಅವಳು ಕಾರ್ಯತತ್ಪರತೆಯನ್ನು ತೋರಿದಹಾಗೆಲ್ಲಾ ಅವಳಮೇಲೆ ಯಜಮಾನಿಯ ಪ್ರಸನ್ನತೆಯು ಹೆಚ್ಚಾಗಿ ಎಲ್ಲಾ ಕಾರ್ಯಗಳ ಭಾರವೂ ಅವಳಮೇಲೆ ಬೀಳುತ್ತ ಬಂದಿತು-ವಾಮೆಯು ಔಷಧವನ್ನು ಸೇವನೆ ಮಾಡಿಸುವ ಕಾರ್ಯವನ್ನು ಬಿಟ್ಟಳು-ಯಜಮಾನಿಯು ಗಾಜಿನ ಯಂತ್ರವನ್ನು ಹಿಡಿದು ಅನನ್ಯಕರ್ಮಳಾಗಿ ಐದು ಮಿನಿಟುತನಕ ಕುಳಿತಿರಲು ಇಷ್ಟವುಳ್ಳವಳಾಗಲಿಲ್ಲ. ಆದುದರಿಂದ ಅವೆಲ್ಲಾ-ಕೆಲಸಗಳ ಭಾರವೂ ಹುಡುಗಿಯ ಮೇಲೆ ಬಿದ್ದಿತು.

ಕಾರ್ಯಭಾರವನ್ನೆಲ್ಲಾ ವಹಿಸಿ ಹುಡುಗಿಗೆ ಬಹಳ ತೊಂದರೆಗಿಟ್ಟಿತು-ಔಷಧದ ಪಾತ್ರವನ್ನು ಕೈಲಿ ಹಿಡಿದು ರಮಣೀಮೋಹನನ ಪಾರ್ಶ್ವದಲ್ಲಿ ನಿಂತು ಔಷಧವನ್ನು ಸೇವನೆ ಮಾಡಿಸುವುದಕ್ಕೆ ನೀರದೆಗೆ ಬಹಳ ಲಜ್ಜೆಯಾಗುವುದು. ಥರ್ಮಾಮಿಟರನ್ನು ರಮಣೀಮೋಹನನ ಕೊಂಕುಳಲ್ಲಿಟ್ಟು ಐದು ಮಿನಿಟಿನತನಕ ಅವನ ಬಾಹುವನ್ನು ಅದುಮಿ ಹಿಡಿದಿರಲು ನೀರದೆಗೆ ಬಹಳ ಸಂಕೋಚವಾಗುವುದು-ಆ ಕಾರ್ಯಗಳು ಸಂಕೋಚಕ್ಕೂ ಲಜ್ಜೆಗೂ ಕಾರಣವೇನೋ ಅಹುದು. ನೀರದೆಯು ಚಿಕ್ಕ ಹುಡುಗಿಯಲ್ಲ-ಆಗವಳು ಹದಿಮೂರು ವರ್ಷದ ಉನ್ಮೇಷೋನ್ಮುಖಿ ಕಿಶೋರಿಯಾಗಿದ್ದಳು-ಲಾವಣ್ಯದ ಭಾರದಿಂದಲೂ, ಲಜ್ಜೆಯ ಭಾರದಿಂದಲೂ ಅವಳ ಚಿಕ್ಕ ದೇಹಲತೆಯು ಬಗ್ಗಿಹೋಗುತ್ತಿರುವುದು-ಕೋಮಲತೆಯೂ ಮಾಧುರ್ಯವೂ ಅವಳ ಅಂಗಾಂಗಳಿಂದ ಹೊರಟೊಗಿಯುತ್ತಿರುವುದು.

ಹದಿಮೂರನೆಯ ಪರಿಚ್ಛೇದ.

ಕ್ರಮವಾಗಿ ರೋಗವು ವೃದ್ಧಿಗೊಂಡಿತು. ಮೊದಲು ಜ್ವರವು ನಿಂತು ನಿಂತು ಬರುತಿದ್ದಿತು-ಈಗ ಜ್ವರವು ಸಂತತವಾಗಿ ಬರುತಿದೆ-ಮೊದಲು ಎದೆಯಲ್ಲಿ ಸಾಮಾನ್ಯವಾದ ಶ್ಲೇಷ್ಮವು ಕಟ್ಟುತಿದ್ದಿತು-ಈಗದು ನ್ಯೂಮೋನಿಯಾಕ್ಕೆ (pneumonia ಶ್ವಾಸಕೋಶವೆಲ್ಲಾ ಶ್ಲೇಷ್ಮಾವೃತವಾಗುವುದು) ಪರಿಣಮಿಸಿತು-ಯಜಮಾನಿಯು ಬಹಳ ಚಿಂತಿತೆಯಾಗಿ ದೊಡ್ಡ ದೊಡ್ಡ ಡಾಕ್ಟರಗಳನ್ನು ಕರೆಯಿಸಿದಳು.

ಯಜಮಾನಿಯು ಮದ್ದನ್ನು ವೆಚ್ಚಮಾಡುವುದು ಹೊರ್ತು ಮತ್ತಾವದನ್ನೂ ಅರಿಯಳು. ಏನನ್ನು ಮಾಡಬೇಕೋ ಅದವಳಿಗೆ ಗೊತ್ತಿಲ್ಲ-ಆದರೆ ಎಲ್ಲಾ ಕೆಲಸಗಳನ್ನೂ ತಾನೇ ಸ್ವಂತವಾಗಿ ಮಾಡಬೇಕೆಂಬ ಆಶೆಯೇನೋ ಅತಿಯಾಗಿರುವುದು-ರೋಗಿಗೆ ಹಾಲನ್ನು ಕುಡಿಸಬೇಕಾದರೆ, ಹಾಲನ್ನೆಲ್ಲಾ ಬಾಯಿಗೆ ಹೊಯಿದು ಅರ್ಧವನ್ನೆಲ್ಲಾ ಹಾಸಿಗೆಯ ಮೇಲೆ

ಚೆಲ್ಲಿಬಿಡುವಳು-ಎದೆಗೆ ಮುಲಾಮನ್ನು ಹಚ್ಚಿ ಮರ್ದಿಸಬೇಕಾದರೆ ಹಾಸಿಗೆಯನ್ನೆಲ್ಲಾ ಮುಲಾಮು ಮಾಡುವಳು_ಕೆಲಸಗಳೆಲ್ಲಾವದನ್ನೂ ಸರಿಯಾಗಿ ಮಾಡದವಳಾಗಿ ಕಡೆಗೆ ಎಲ್ಲಾ ಕೆಲಸಗಳನ್ನೂ ನೀರದೆಗೊಪ್ಪಿಸಿದಳು.

ನೀರದೆಯು ಸಮಯಕ್ಕೆ ಹಾಲು ಮುಂತಾದ ಆಹಾರಗಳನ್ನು ಕೊಡುವಳು. ಆಹಾರವನ್ನು ಸೇವಿಸುತ್ತಿರುವಾಗ ಮೋಹನನು ನೀರದೆಯ ಕಣ್ಣುಗಳನ್ನು ಸ್ಥಿರವಾಗಿ ನೋಡುತ್ತಿರುವನು-ನೀರದೆಯು ಹಾಸಿಗೆಯ ಮೇಲೆ ಕುಳಿತು ಎದೆಗೆ ಮುಲಾಮನ್ನು ತಿಕ್ಕುತ್ತಿರುವಾಗ ಮೋಹನನು ಉತ್ಫುಲ್ಲನಯನನಾಗಿ ನೀರದೆಯ ಮುಖವನ್ನು ನೋಡುತ್ತಿರುವನು. ನೀರದೆಯು ರೋಗಿಯ ಬಾಹುಮೂಲದಲ್ಲಿ ತಾಪಯಂತ್ರವನ್ನಿಟ್ಟು ಪಾರ್ಶ್ವದಲ್ಲಿ ಕುಳಿತಿರುವಾಗ, ರಮಣೀಮೋಹನನು ನಿಮೀಲಿತನಯನನಾಗಿ ಅವಳ ಹಸ್ತಸ್ಪರ್ಶವನ್ನು ಅನುಭವ ಮಾಡುವನು_ಹೀಗೆ ದಿವಸಮೇಲೆ ದಿವಸಗಳೂ ಕಳೆಯುತ್ತ ಬಂದುವು ಹೆಚ್ಚು ದಿನಗಳು ಕಳೆದಹಾಗೆಲ್ಲ ಮೋಹನನಿಗೆ ನೀರದೆಯ ಆವಶ್ಯಕತೆಯು ಹೆಚ್ಚಾಗುತ್ತ ಬಂದಿತು. ನೀರದೆಯು ಅವನ ಶಯ್ಯೆಯನ್ನು ರಚನೆಯುಂಗೆಯ್ಯುವಂತೆ, ನೀರದೆಯು ಅವನಿಗೆ ಔಷಧವನ್ನು ಸೇವನೆ ಮಾಡಿಸುವಂತೆ, ಅವನಿಗೆ ಮುಲಾಮನ್ನು ಹಚ್ಚುವಂತೆ, ನೀರದೆಯು ರೋಗಿಗೆ ಶುಶ್ರೂಷೆಮಾಡುವಂತೆ, ಬೇಕಾದುದನ್ನೆಲ್ಲಾ ಇಚ್ಛಾಮಾತ್ರದಿಂದ ಅವನಿಗೆ ಒದಗಿಸಿಕೊಡುವಂತೆ ಮತ್ತಾರೂ ಮಾಡುತ್ತಿರಲಿಲ್ಲ. ನೀರದೆಯು ಒಂದು ಮುಹೂರ್ತವಿಲ್ಲದಿದ್ದರೂ ಎಲ್ಲಾವದೂ ನಡೆಯದು-ಅವಳೊಂದುಮುಹೂರ್ತ ಹೊರಗೆ ಹೋದರೂ ರಮಣೀಮೋಹನನು ವ್ಯಾಕುಲನಯನದಿಂದವಳನ್ನು ನಾಲ್ಕುಕಡೆ ನೋಡುವನು.

ಹಗಲೂ ನೀರದೆ-ರಾತ್ರಿಯೂ ನೀರದೆ-ನೀರದೆಯು ಮೊದಲು, ರಾತ್ರಿಯಾಗುತಲೆ ಪಾರ್ಶ್ವದ ಕೊಠಡಿಗೆ ಹೋಗಿ ಅಲ್ಲಿ ಮಲಗುವಳು. ಈಗ ಯಜಮಾನಿಯು ಅವಳನ್ನು ಒಂದು ಮುಹೂರ್ತಮಾತ್ರವೂ ಬಿಟ್ಟಿರಳು_ಹಗಲು ರಾತ್ರಿ ಅವಳು ರೋಗಿಯ ಪಾರ್ಶ್ವದಲ್ಲಿದ್ದಿರಬೇಕು. ರೋಗಿಯ ಆಲಸ್ಯವು ಹೆಚ್ಚಿದ ಹಾಗೆಲ್ಲಾ ನೀರದೆಗೆ ಲಜ್ಜೆಯೂ ಸಂಕೋಚವೂ ಕಡಿಮೆಯಾಗುತ ಬಂದುವು-ಬಳಿಕ ನೀರದೆಯು ರೋಗಿಯ ಪಾರ್ಶ್ವದಲ್ಲಿದ್ದು ರಾತ್ರಿಯನ್ನು ಕಳೆಯುತ್ತಿದ್ದಳು.

ಯಜಮಾನಿಯೂ ದಾದಿಯೂ ನೆಲದಮೇಲೆ ಹಾಸಿಗೆಯನ್ನು ಹಾಸಿಕೊಂಡು ಮಲಗುವರು. ಅವರು ನಿದ್ರೆಕೆಟ್ಟು ಇರರು-ಎಷ್ಟೆಂದು ರಾತ್ರಿ ನಿದ್ರೆಯಿಲ್ಲದೆ ಇರಲಾದೀತು? ನೀರದೆಯಾದರೋ ರಾತ್ರಿ ಹಗಲು ನಿರಂತರವಾಗಿ ನಿದ್ರೆಯಿಲ್ಲದೆ ಜಾಗರಿತವಾಗಿರುವಳು-ಒಂದುದಿನ ನಡುರಾತ್ರಿಯಲ್ಲಿ ಯಜಮಾನಿಯೂ ದಾದಿಯೂ ಮಲಗಿದ್ದಾಗ ರಮಣೀಮೋಹನನು ಕ್ಷೀಣಿಸಿದ ಕಂಠದಿಂದ "ನೀರದೆ!" ಎಂದು ಕರೆದನು-ನೀರದೆಯು ಪಾರ್ಶ್ವದಲ್ಲಿ ಕುಳಿತಿದ್ದವಳು ಆವ ಉತ್ತರವನ್ನೂ ಹೇಳದೆ ಗಂಟಲಶಬ್ದವನ್ನು ಮಾಡಿದಳು.

"ನೀರದೆ! ತಾಯಿಯು ಎಲ್ಲಿ?"

"ಮಲಗಿದ್ದಾರೆ."

"ದಾದಿತಾಯಿಯೆಲ್ಲಿ?"

"ಮಲಗಿದ್ದಾರೆ."

"ನೀರದೆ! ನೀನೇಕೆ ಮಲಗಲಿಲ್ಲ?"

ನೀರದೆಯು ಉತ್ತರವನ್ನು ಕೊಡಲಿಲ್ಲ-ಸ್ವಲ್ಪ ಹೊತ್ತಾದ ಬಳಿಕ ಮೋಹನನು, "ನೀರದೆ! ನಾನು ಸತ್ತುಹೋದರೆ—"

ನೀರದೆಯು ಚಂಚಲೆಯಾದಳು. ಮೋಹನನು, "ನೀರದೆ! ನಾನು ಸತ್ತುಹೋದರೆ ನನಗೆ ಸಲುವಾಗಿ ನೀನು ಅಳುವೆಯಲ್ಲವೆ?" ಎಂದನು.

ನೀರದೆಯ ಹೃದಯವೆಲ್ಲವೂ ಪ್ರಚಂಡಕಂಪವಾಗುತ್ತ ಎದ್ದಂತಾಗಿ ನಡುಗಿದಳು. ಮೋಹನನು. "ಅಳುದಿರುವೆಯೊ? ನನ್ನನ್ನು ಬಿಟ್ಟರೆ ಬೇರೆ ನಿನಗಾರೂ ಇಲ್ಲ" ಎಂದನು.

ನೀರದೆಯು ಹೊರಟು ಹೋಗಲೆದ್ದಳು-ಮೋಹನನು, "ಹೋಗಬೇಡ, ನೀರದೆ!-ನಾನು ಬದುಕಿರುವತನಕ ನಿನ್ನನ್ನು ನೋಡುತ್ತಿರುವೆನು-ನಿನ್ನನ್ನು ನೋಡುತ್ತಿದ್ದರೆ, ನನಗೆಷ್ಟೆಂದು ತೃಪ್ತಿಯೂ ಸುಖವೂ ಆಗುವುದೋ ಅದನ್ನು ಹೇಳಲಾರೆನು. ನಿನ್ನನ್ನು ನೋಡುತಿದ್ದರೆ ರೋಗದ ಯಾತನೆಯೂ ಮರೆತುಹೋಗುವುದು-ನೀನೆನಗೆ ಉಪಚರಿಸಿದರೂ ಉಪಚರಿಸದಿದ್ದರೂ ಅದನ್ನು ನಾನು ಲಕ್ಷ್ಯಮಾಡುವುದಿಲ್ಲ-ನಿನ್ನನ್ನು ನೋಡುತ್ತಿರುವೆನು" ಎಂದು ಹೇಳಿ ಬಳಿಕ ಸ್ವಲ್ಪಹೊತ್ತು ವಿಶ್ರಮಿಸಿಕೊಂಡು, "ನಿನ್ನನ್ನು ನೋಡುವ ಆಶೆಯು ಕಡಿಮೆಯಾಗುವುದಿಲ್ಲ, ನಿನ್ನನ್ನು ನೋಡು

ತ್ತಿರಬೇಕೆಂತಲೇ ನನಗೆ ರೋಗವುಂಟಾಗಿರಬೇಕೆಂದು ತೋರುತ್ತದೆ. ರೋಗಿಯಾಗದಿದ್ದರೆ ನಾನು ನಿನ್ನನ್ನು ಹೀಗೆ ನೋಡುತ್ತಿರಲಿಲ್ಲ-ನೀರದೆ! ರೋಗವು ಕೆಟ್ಟದೆಂದು ಹೇಳುವವರಾರು"? ಎಂದನು.

ನೀರದೆಯು ಹೆಚ್ಚು ಹೊತ್ತು ಕುಳಿತಿರಲಾರದೆ ಹೋದಳು—ಎದ್ದು ಪಾರ್ಶ್ವದ ಕೊಠಡಿಗೆ ಹೊರಟು ಹೋದಳು.

ಮತ್ತೊಂದು ದಿನ ರಮಣೀಮೋಹನನು ಹಾಸಿಗೆಯಲ್ಲಿ ಮಲಗಿ ಪಾರ್ಶ್ವದಲ್ಲಿ ಕುಳಿತಿದ್ದ ನೀರದೆಯನ್ನು ಕುರಿತು, "ನೀರದೆ! ನನಗೆ ನೋವಿನ ನೋವರಿಯುರಿಲ್ಲ; ನೋವರಿಯನ್ನು ಆದರಿಸಿ ಪ್ರೀತಿಸುವವನ್ನು ನಾನು ಏನು-ನೀನು ಬಹಳ ಮಿತ್ರರನ್ನು ಬಿಟ್ಟು ನಿರಂತರವೂ ನನ್ನಬಳಿ ಕುಳಿತುಕೊಂಡಿರುವುದು ನಿನಗೆಷ್ಟು ಕಷ್ಟವಾಗುವುದೋ ಅದನ್ನು ನಾನು ತಿಳಿಯಲಾರೆನು. ನಾನೇನನ್ನು ಮಾಡಲಿ? ನಿನ್ನನ್ನು ಒಂದು ನಿಮಿಷವೂ ನೋಡದಿರಲಾರೆನು" ಎಂದನು.

ನೀರದೆಯು ಆವದೋ ಒಂದು ಕೆಲಸದ ನೆವದಿಂದ ಅಲ್ಲಿಂದೆದ್ದು ಹೊರಟುಹೋದಳು.

ಒಂದುದಿನ ರಾತ್ರಿ ರಮಣೀಮೋಹನನು ಎಚ್ಚರಗೊಂಡು ಕಣ್ಣನ್ನು ಬಿಟ್ಟು ನೋಡಿದನು. ಪಾರ್ಶ್ವದಲ್ಲಿ ನೀರದೆಯಿರಲಿಲ್ಲ-ಚಿಕ್ಕ ಮನೆಯಲ್ಲಿ ಎಲ್ಲಿ ನೋಡಿದರೂ ಅವಳಿರಲಿಲ್ಲ-ನೆಲದಮೇಲೆ ಯಜಮಾನಿಯೂ ಮಾಮಿಯೂ ಮಲಗಿದ್ದರು. ಮೋಹನನು, "ಮಾಮಾಬಾಯಿ!" ಎಂದು ಕೂಗಿದನು.

ಮೂರು ನಾಲ್ಕು ತಡವೆ ಕೂಗಿದ ಬಳಿಕ, ಮಾಮಿಯು ಎಚ್ಚರಗೊಂಡು, "ಏನು, ಮಗು!" ಎಂದಳು.

"ನೀರದೆಯು ಎಲ್ಲಿ"

"ನೀರದೆಗೆ ಆಲಸ್ಯವಾಗಿದೆ."

ರಮಣೀಮೋಹನನು ಮೆಲ್ಲಗೆ ಎದ್ದು ಹಾಸಿಗೆಯಮೇಲೆ ಕುಳಿತುಕೊಂಡನು. ಮಾಮಿಯು ಅದನ್ನು ಕಾಣದೆ, "ಆಹಾ! ಹುಡುಗಿಯು ಎರಡುತಿಂಗಳಿಂದ ರಾತ್ರಿ ಹಗಲು ಶ್ರಮಪಟ್ಟಿರುವಳು, ಹೊಟ್ಟೆಗೆ ಅನ್ನ

ಯಿಲ್ಲ, ಕಣ್ಣಿಗೆ ನಿದ್ರೆಯಿಲ್ಲ; ಮನುಷ್ಯಶರೀರ, ಎಷ್ಟೆಂದು ಸಹಿಸಲಾ ಪದು ?" ಎಂದು ಹೇಳಿದಳು.

ಅಂದು ರಾತ್ರಿ ರಮಣೀಮೋಹನನಿಗೆ ಪುನಃ ನಿದ್ರೆಯು ಬರಲಿಲ್ಲ-ಆನಿದ್ರೆಯಲ್ಲಿ ರಾತ್ರಿಯನ್ನು ಕಳೆದನು,

ಹದಿನಾಲ್ಕನೆಯ ಪರಿಚ್ಛೇದ.

ರಮಣೀಮೋಹನನಿಗೆ ಬಿಂದುವಿನ ಹಾಡಿನಲ್ಲಿಯೇ [illegible] ವಾಯಿತು. ಅವನ ಮನಸ್ಸಿನಲ್ಲಿ [illegible]-[illegible] ಹೇಳಿದಂತೆ ಹಾಡು ಕಲಿಯಬೇಕೆನ್ನುವ [illegible] ಬಹಳ [illegible] ವಾಯಿತು. ಯೌವನದಲ್ಲಿಯೂ [illegible] ಪ್ರಾರಂಭಿಸಿದನು.

ಸಂಗೀತ ಶಾಸ್ತ್ರದಲ್ಲಿ ಸ್ವರಗಳನ್ನು [illegible]. ಸ್ವರಗಳನ್ನು ಮನೆಗೆ ಹಿಂದಕ್ಕೆ [illegible] [illegible] ಆದರೂ ಬಿಡದೆ [illegible] ಎಲ್ಲ ರಾತ್ರಿಯ [illegible].

[illegible] ಹೊರಗೆ [illegible] [illegible] ಮಾಡಿದನು. ರಮಣೀಮೋಹನನು ನಿತ್ಯವೂ [illegible] ಎದ್ದು [illegible] ಹೋಗು ವನು-ಪ್ರಕೃತಿಯ [illegible] ಸೂರ್ಯನಾರಾಯಣನು [illegible] [illegible] [illegible] ವಿಚಾರಿಸುತ್ತ ಎಂದು ನೋಡುತ್ತಿರುವನು-ಹೀಗೆ [illegible] ಮನೆಗೆ ಹಿಂದಿರುಗಿ ಬರುವನು.

ಒಂದುದಿನ ರಮಣೀಮೋಹನನು [illegible] ಬೆಟ್ಟದಲ್ಲಿ [illegible] [illegible] ಮಾಡಬೇಕೆಂದು ಬಯಸಿದನು. ಅವನ [illegible] ಪ್ರೀತಿಗೋಸ್ಕರ ಬಿಲ್ಲಿಲ್ಲ-ಮೂರು ನಾಲ್ಕು ಮೈಲು ಬಂಡಿಗಳು ಹಿಡಿಯುವುದು ರಮಣೀ ಮೋಹನನು [illegible] ಬೆಟ್ಟಕ್ಕೆ ಹೋದನು. ದಾರಿಯುದ್ದಕ್ಕೂ ಕಲ್ಲು [illegible] ಸ್ಪಷ್ಟವಾಗಿ ಬಿದ್ದಿದ್ದುವು. [illegible] [illegible] ದೊಡ್ಡದೊಡ್ಡ ಮರಗಳು-ಮರಗಳ ಪಾರ್ಶ್ವದಲ್ಲಿ ಪುನಃ [illegible] ಬೆಟ್ಟದ

ತಲೆಯಮೇಲೆ ಮನೋಹರವಾದೊಂದು ಗುಹೆ. ಆ ಗುಹೆಯಲ್ಲಿ ಯೋಗಿವರ ಬಾಲಾನಂದ ಸ್ವಾಮಿಯು ವಾಸಮಾಡುತಿರುವನು-ಗುಹೆಯ ಸ್ವಭಾವಸಿದ್ಧವಾದಾ ಸೌಂದರ್ಯವು ಈಗಿಲ್ಲ-ವಿಲಾಸಿತೆಯಲ್ಲಿ ಎಲ್ಲವೂ ನಷ್ಟವಾಗಿಹೋಗಿರುವುವು.

ಆ ವೃತ್ತಾಂತವೆಲ್ಲಾ ಈಗ ಬೇಡ. ಅರುಣೋದಯಕ್ಕೆ ಸ್ವಲ್ಪ ಮೊದಲು ಎಲ್ಲರೂ ತಪೋವನಕ್ಕೆ ಮುಟ್ಟಿದರು. ರಮಣೀಮೋಹನನು ಅದಕ್ಕೆ ಮೊದಲು ವರ್ಧಮಾನಕ್ಕೆ ಪಶ್ಚಿಮದ ಕಡೆ ಎಂದಾಗಲೂ ಹೋಗಿರಲಿಲ್ಲವಾದಕಾರಣ ಬೆಟ್ಟಗುಡ್ಡಗಳನ್ನು ಹಿಂದೆಂದೂ ನೋಡಿರಲಿಲ್ಲ--ನಂದನದ ಬೆಟ್ಟವನ್ನು ನೋಡಿ ಹಿಮಾಲಯದ ಕಲ್ಪನೆಯನ್ನು ಮಾಡಿಕೊಳ್ಳುವನು. ಧಾರಾಜಲದ ಪ್ರಪಾತವನ್ನು ಕಂಡು ನಯಾಗ್ರಾದ ಪ್ರಚಂಡಜಲಪ್ರಪಾತವನ್ನು ಕಲ್ಪಿಸಿಕೊಳ್ಳುವನು. ತಪೋವನವನ್ನೀಗ ನೋಡಿ ಹಿಮಾಲಯಕ್ಕಿಂತಲೂ ಸುಂದರವಾದುದೆಂದು ತಿಳಿದುಕೊಂಡನು.

ವಾಸವಾಸಿಯಲ್ಲಿ ಬಹಳ ಗದ್ದಲಕ್ಕಿಟ್ಟಿತು. ಅವರು ವೈಷ್ಣವ ಬಾಬಾಜಿಯ ಪ್ರಾಂಗಣದಲ್ಲಿದ್ದ ಗೋವರ್ಧನನೆಂದು ಹೆಸರುಗೊಂಡಿದ್ದದಕ್ಕಿಂತ ದೊಡ್ಡದಾದಾದವನ್ನೂ ನೋಡಿರಲಿಲ್ಲ-ಈಗೊಂದು ಪ್ರಕಾಂಡ ಸಜೀವದ ಬೆಟ್ಟದ ಕಿಬ್ಬಿಯಲ್ಲಿ ನಿಂತು, ಕೈಲಾಸಧಾಮದಲ್ಲಿರುವುದಾಗಿ ತಿಳಿದುಕೊಂಡರೆಂದು ತೋರುತ್ತದೆ. ಬೆಟ್ಟದ ಮಧ್ಯೆ ದೇವಮಂದಿರ-ಶಿಖರದಲ್ಲಿ ಗುಹೆ ಮತ್ತೆ ಬೇಕಾದುದೇನು? ಬೆಟ್ಟದ ಪಾದಮೂಲದಲ್ಲಿ ನಿಂತು ಭಕ್ತಿಪೂತಹೃದಯದಿಂದ ಎಲ್ಲರೂ ಪ್ರಣಾಮವನ್ನು ಮಾಡಿದರು.

ವಾಮಿಯು ಇದ್ದೆಡೆ ಸೀರದೆ—ಕಲಿಕತ್ತೆಯಲ್ಲಿದ್ದಾಗ ಯಜಮಾನಿಯ ಬಳಿ ಇರಳು--ಅವಳನ್ನು ಕಂಡರೆ ಭಯ—ಈಗ ಭಯಪಡುವ ಅವಶ್ಯಕವಿರಲಿಲ್ಲ-ಹುಡುಗಿಯಮೇಲೆ ಯಜಮಾನಿಗೆ ಈಗಾ ಕೋಪವಿಲ್ಲ—ಈಗವಳನ್ನು ಕಂಡರೆ ವಿಶ್ವಾಸ-ಸೀರದೆಯು ಒಂದು ಕ್ಷಣ ಕಣ್ಣುಮರೆಯಾದರೂ ಜನವೂ ಜಗವು-ಸೀರದೆಯು ಮನೆಬಾಗಿಲನ್ನು ಗುಡಿಸಿ ರಂಗವಲ್ಲಿಯಿಂದಲಂಕರಿಸುವಳು-ಸೀರದೆಯು ಲೆಕ್ಕವನ್ನು ಬರೆದಿಡುವಳು— ಕಾಗದಪತ್ರಗಳನ್ನು ಬರೆಯುವಳು ಏನುಪದಾರ್ಥವು ಎಲ್ಲಿರಿಸಬೇಕೋ ಅದನ್ನು ಅಲ್ಲಲ್ಲಿಡುವಳು ಸೀರದೆಯಿಲ್ಲದಿದ್ದರೆ ಸಂಸಾರವೇ ನಡೆಯದು-ಸೀರದೆಯು ಬರು

ವುದಕ್ಕೆ ಮೊದಲು ಸಂಸಾರವು ನಡಿಯುತಿದ್ದುದನ್ನೂ ಯಜಮಾನಿಯು ಭಾವಿಸಿಕೊಳ್ಳುತ್ತಿದ್ದಳು.

ಆಹಾರಾದಿಗಳಾದ ಬಳಿಕ ರಮಣೀಮೋಹನನು ಬಂದು, "ಅಮ್ಮಾ! ಗುಹೆಯನ್ನು ನೋಡುವುದಕ್ಕೆ ಹೊರಡು" ಎಂದನು.

ತಾಯಿ--ಗುಹೆಯಿರುವುದಲ್ಲಿ?

ರಮಣೀ--ಬೆಟ್ಟದ ತಲೆಯಮೇಲೆ.

ತಾಯಿ--ನಾನು ಅಷ್ಟೊಂದು ದೂರ ಹತ್ತಲಾರೆನು.

ರಮಣೀ--ಹತ್ತಲಾರದೆ ಏನು? ಬಳ್ಳಿಯದಾದ ಮೆಟ್ಟಿಲುಗಳಿವೆ--ಸುಲಭವಾಗಿ ಹತ್ತಬಹುದು.

ತಾಯಿ--ಇಲ್ಲ ಮಗು! ಅರ್ಧದಾರಿಯಲ್ಲಿ ನಿಂತುಬಿಡುವೆನು.

ರಮಣೀ--ಹಾಗೆ ನಿಂತರೆ ನಾನು ಭುಜದಮೇಲೆ ಎತ್ತಿಕೊಂಡು ಹೋಗುವೆನು.

ತಾಯಿ--ನನ್ನನು ಎತ್ತಬಲ್ಲೆಯಾ?

ರಮಣೀ--ಎತ್ತದೆ ಏನು? ನೋಡುವೆ.

ತಾಯಿ--ಬೇಡ, ಈಗ ನೋಡುವುದಕ್ಕಿಷ್ಟವಿಲ್ಲ-ಮತ್ತೊಂದುತಡವೆ ನೋಡುವೆನು.

ರಮ--ಅದಾಗದು-ಈಗ ಹೊರಡುವಿಯೊ--ಇಲ್ಲವೊ? ಹೇಳು.

ತಾಯಿ--ಹಾಗಾದರೆ, ಹೊರಡು.

ಯಜಮಾನಿಯು ಹೊರಟೊಡನೆ ವಾಮೆಯೂ ನೀರದೆಯೂ ಹೊರಟರು. ಬಾಲಾನಂದಸ್ವಾಮಿಯು ಕೊಟ್ಟಿದ್ದ ವಿಭೂತಿಯನ್ನು ಧಾರಣೆ ಮಾಡಿಕೊಂಡು ನಾಲ್ಕುಮಂದಿ ಹೊರಟರು. ಸ್ವಲ್ಪದೂರ ಹತ್ತಿ ಮಧ್ಯದಲ್ಲಿ ಯಜಮಾನಿಯು ಹತ್ತಲಾರದೆ ಕುಳಿತಳು. ರಮಣೀಮೋಹನನು ಹತಾಶನಾಗಿ, "ಹಾಗಾದರೆ ಹಿಂದಕ್ಕೆ ಹೋಗೋಣ" ವೆಂದನು.

ತಾಯಿ--ನೀನು ಹೋಗಿ ಗುಹೆಯನ್ನು ನೋಡಿಕೊಂಡು ಬಾ--ನಾನಿಲ್ಲಿ ತಪನಾಥನಮಂದಿರದಲ್ಲಿ ಕುಳಿತಿರುವೆನು.

ಹಾಗೇವೇ ಗೊತ್ತಾಯಿತು. ವಾಮೆಯು ತಾನು ಯಜಮಾನಿಯ

ಬಳಿ ಇರುವುದಾಗಿಯೂ, ಮೋಹನನು ನೀರದೆಯನ್ನು ಕರೆದುಕೊಂಡು ಹೋಗಲೆಂತಲೂ ಹೇಳಿದಳು.

ನೀರದೆಯು ರಮಣೀಮೋಹನನ ಸಂಗಡ ಹೋಗಲು ಸ್ವಲ್ಪ ಲಜ್ಜಿತೆಯಾದಳು-ಯಜಮಾನಿಯು, "ಅದೇಕೆ ಹೋಗಕೂಡದು? ನೀನಾವಾಗಲೂ ನೋಡಿದವಳಲ್ಲ-ಸಂಗಡ ಹೋಗು" ಎಂದಳು.

ನೀರದೆಯು ರಮಣೀಮೋಹನನ ಹಿಂದೆ ಹೊರಟಳು. ಮಾರ್ಗದಲ್ಲಿ ಯಾರಾರೂ ಮಾತಾಡಲಿಲ್ಲ. ತಲೆಯನ್ನು ಬಗ್ಗಿಸಿಕೊಂಡು ಇಬ್ಬರೂ ಹತ್ತಿ ಹೋಗಲಾರಂಭಿಸಿದರು.

ಇಬ್ಬರೂ ಗುಹೆಯ ಬಳಿ ಹೋದರು. ಗುಹೆಯ ಬಾಗಿಲು ಹಾಕಿದ್ದಿತು. ರಮಣೀಮೋಹನನು ಅದರ ಬಳಿ ಇದ್ದ ಬಂಡೆಯಮೇಲೆ ಕುಳಿತುಕೊಂಡನು. ನೀರದೆಯು ಹತ್ತಿರ ನಿಂತುಕೊಂಡಳು.

ರಮ—ನೀರದೆ! ಕುಳಿತುಕೊ.

ನೀರದೆಯು ಕುಳಿತಳು-ಸ್ವಲ್ಪದೂರ ಕುಳಿತಳು.

ಸ್ವಲ್ಪಹೊತ್ತಿನಮೇಲೆ, ಮೋಹನನು, "ನೀರದೆ!" ಎಂದನು.

ನೀರದೆಯು ಸ್ವಲ್ಪ ಸರಿಯಾಗಿ ಕುಳಿತಳು.

ರಮ-ನೀರದೆ! ಕಣ್ಣುಬಿಟ್ಟು ನೋಡು-ಪೃಥ್ವಿಯು ಎಷ್ಟೊಂದು ಸುಂದರವಾಗಿದೆ! ಪೃಥ್ವಿಯು ಹೋಗುವವರೆಗೂ ಸೌಂದರ್ಯವು ಹೆಚ್ಚುತ್ತಿದೆ; ಬೆಟ್ಟವು ಆಕಾಶದಮೇಲೆ ಮಲಗಿದಂತಿದೆ-ದೂರದಲ್ಲಿ ಪೃಥ್ವಿಯು ಆಕಾಶದೊಂದಿಗೆ ಸೇರಿದಂತಿದೆ. ಆಹಾ! ಎಷ್ಟೊಂದು ಸುಂದರವಾಗಿದೆ! ನೀರದೆ ಇದೇ ಭಾವದಲ್ಲಿ ನಾವಿಲ್ಲಿಯೇ ಇರಲಾಪವಾದರೆ!

ನೀರದೆ-ಒಳಗೆ ಹೋಗೋಣ-ಬಂದು ಬಹಳ ಹೊತ್ತಾಯಿತು.

ರಮ-ಬೇಡ, ನೀರದೆ! ಈಗಲೇ ಹೋಗಬೇಡ. ಇಲ್ಲಿಯೇ ನಿನ್ನ ಪಾರ್ಶ್ವದಲ್ಲಿ ಕುಳಿತು ಪೃಥ್ವಿಯನ್ನು ನೋಡುತ್ತಿರುವೆನು. ಕಣ್ಣುಬಿಟ್ಟು ನೋಡು, ನೀರದೆ! ನಮ್ಮ ನಾಲ್ಕುಕಡೆಗಳಲ್ಲಿ ಪೃಥ್ವಿ-ಪೃಥ್ವಿಯ ನಾಲ್ಕು ದಿಕ್ಕುಗಳಲ್ಲಿಯೂ ಪೃಥ್ವಿ—ಮೇಲೆಯೋ ಪೃಥ್ವಿಯನ್ನು ಆಲಿಂಗಿಸಿಕೊಳ್ಳುವ ನೀಲಾಕಾಶ-ಆ ಆಕಾಶಪೃಥ್ವಿಗಳ ಮಧ್ಯೆ ನೀನೂ ನಾನೂ-ನಾವಿಬ್ಬರೇ—

ನೀರದೆಯು ನಡುಗಲಾರಂಭಿಸಿದಳು-ಅದಕ್ಕೆ ಕಾರಣವನ್ನು ನಾವು ಅರಿಯೆವು-ಅವಳೇನೋ ನಡುಗುತ್ತಿದ್ದಳು. ನೀರದೆಯು ಪೃಥ್ವೀ ಆಕಾಶ ಆವುದನ್ನೂ ನೋಡುತ್ತಿರಲಿಲ್ಲ-ರಮಣೀಮೋಹನನನ್ನೂ ನೋಡುತ್ತಿರಲಿಲ್ಲ-ನೀರವವಾಗಿ ಅಧೋಮುಖಿಯಾಗಿ ಕುಳಿತು ಸುಮ್ಮನೆ ನಡುಗುವಳು.

ರಮ—ನೀರದೆ! ಚೆನ್ನಾಗಿ ನೋಡು; ಆಕಾಶ ಪೃಥ್ವಿಗಳ ಮಧ್ಯೆ ನಾವಿಬ್ಬರೇ ಇಬ್ಬರು-ಮೇಲೆ ನೀಲಾಕಾಶ-ಕೆಳಗೆ ಶಾಮಾಂಗಿ ಪೃಥ್ವಿ-ಮಧ್ಯೆ, ನಾನೂ, ನೀನೂ-ನೀರದೆ! ನೀನು ನನ್ನೊಂದಿಗೆ ಚಿರಪಿನವಿರುವಿಯೊ?

ನೀರದೆಯು ನಡುಗುತ್ತ ಎದ್ದು ನಿಂತಳು. ಅವಳು ಹೊರಡಲು ವ್ಯಕ್ತೆಯಾದಳೆಂದು ತಿಳಿದು ರಮಣೀಮೋಹನನು, "ಹೋಗಬೇಡ, ನೀರದೆ! ನನ್ನನ್ನು ಬಿಟ್ಟು ಹೋಗಬೇಡ. ಮತ್ತಾವಾಗಲೂ ನನ್ನ ಮನೋಭಾವವನ್ನು ಹೀಗೆ ನಿನಗೆ ತಿಳಿಯಹೇಳಲಾರೆನು-ನೀರದೆ! ಚಿರದಿನ ನಿನ್ನನ್ನು ಪಾರ್ಶ್ವದಲ್ಲಿಟ್ಟುಕೊಂಡಿದ್ದರೆ ನಾನೆಷ್ಟೋ ಸುಖಿಯಾಗಿರುವೆನು.

ಲಜ್ಜೆಯಿಂದಲೂ ಆನಂದದಿಂದಲೂ ನೀರದೆಯ ದೇಹವು ಅವಸನ್ನವಾಗುತ ಬಂದಿತು-ಎತ್ತರವಾಗಿದ್ದೊಂದು ಬಂಡೆಯನ್ನವಲಂಬಿಸಿಕೊಂಡು ನಿಂತಳು. ತಂಗಾಳಿಯು ನೀರದೆಯ ಅಳಕಗುಚ್ಛವನ್ನೂ ಸೆರಗನ್ನೂ ಅಲುಗಾಡಿಸುತ್ತಿದ್ದಿತು. ಅವಳ ಕೇಶಗುಚ್ಛವೂ ಅವಳ ದೇಹವೂ ಕಂಪಿಸುತ್ತಿದ್ದುದನ್ನು ಮೋಹನನು ನೋಡುತ್ತಿದ್ದನು. "ನೀರದೆ! ಎಂದಿನವರೆಗೂ ಪೃಥ್ವಿಯು ಧ್ವಂಸವಾಗದಿರುವುದೋ ಆಕಾಶವು ಬಿರಿದು ಬೀಳದಿರುವುದೋ ಅಂದಿನವರೆಗೂ ನಿನಗೂ ನನಗೂ ಚಿರಸಂಬಂಧವಿರುವುದು-ನಾನು ಆಕಾಶ, ಕೋಟಿಕಣ್ಣುಗಳಿಂದ ನಿನ್ನನ್ನು ನೋಡುತ್ತಿರುವನು-ಸಂಸಾರದಲ್ಲಿದ್ದು ಸಮಸ್ತ ಕಾರ್ಯಗಳಲ್ಲಿದ್ದರೂ ನಿನ್ನನ್ನು ನೋಡುತಿರುವನು-ನೀನಲ್ಲಿದ್ದರೂ ನಿನ್ನನ್ನು ನಿರಂತರ ನೋಡುತಿರುವೆನು. ನೀರದ! ನೀನೆನಗೆ ಸರ್ವಮಯಿ—ಸರ್ವೇಶ್ವರಿ" ಎಂದು ಹೇಳಿದನು.

ನೀರದೆಯು ಹೆಚ್ಚು ನಿಲ್ಲಲಾರದೆ ಹೋದಳು—ಕುಳಿತುಬಿಟ್ಟಳು. ಭೂಕಂಪದಿಂದ ಭೂಮಿಯು ನಡುಗುವಂತೆ ನೀರದೆಯು ನಡುಗಲಾರಂಭಿಸಿದಳು. ರಮಣೀಮೋಹನನು, "ನೀರದೆ! ನೀನೆನ್ನನ್ನು ಪ್ರೀತಿಸುತ್ತಿ—ಪ್ರೀತಿಸುತ್ತಿಯೆಂತಲೇ ಈ ಮಾತುಗಳನ್ನು ನಿನಗೆ ಹೇಳಿದೆನು. ಇಲ್ಲದಿ

ದ್ದರೆ ಈ ಪ್ರಣಯದ ಮಾತುಗಳು ನನ್ನ ಬಾಯಿಂದೆಂದೂ ಹೊರಡವು—ನಿನ್ನನ್ನು ಬಿಟ್ಟು ನಾನು ಮತ್ತಾರನ್ನೂ ಮದುವೆಯಾಗೆನು—ಖಂಡಿತ ತಿಳಿ ದಿರು " ಎಂದನು.

ನೀರದೆಯು ಮಾತಾಡಲೆತ್ನಿಸಿದಳು. ಆದರೆ ಮಾತು ಹೊರಡಲಿಲ್ಲ. ರಮಣೀಮೋಹನನು, " ಏನನ್ನು ಹೇಳುತಿದ್ದೆ ? ಹೇಳು " ಎಂದನು.

ನಾಲ್ಕಾರುತಡವೆ ಗಂಟಲನ್ನು ಸರಿಮಾಡಿಕೊಂಡು, ಬಹಳ ಪ್ರಯ. ತ್ನಪಟ್ಟು, ಬಳಿಕ ನೀರದೆಯು " ನಾನಾರೆಂದು ತಾವು ಅರಿಯರಿ " ಎಂದಳು.

ರಮ—ನಿನ್ನ ಪರಿಚಯವೆನಗೆ ಬೇಕಿಲ್ಲ—ನಾನು ತಿಳಿದಿರುವುದು, ನೀನು ನೀರದೆಯೆಂದು--ನನಗೆ ಬೇರೆ ಪರಿಚಯದಿಂದ ಪ್ರಯೋಜನವಿಲ್ಲ.

ನೀರದೆ—ನಾನು—

ರಮ—ನೀನಾರು ?

ನೀರದೆ—ನಾನೊಬ್ಬ ವೇಶ್ಯೆಯಿಂದ ಪಾಲಿತೆಯಾದವಳು.

ರಮ—ಹಾಗಿದ್ದರೆ, ನಾನೀಗಿನಿಂದೊಬ್ಬ ವೇಶ್ಯೆಯನ್ನು ಪ್ರೀತಿಸು ವೆನು-ನಿನ್ನನ್ನು ಪಾಲನೆ ಮಾಡಿದವಳನ್ನು ನಾನು ಭಕ್ತಿಯಿಂದ ನೋಡುವೆನು.

ನೀರದೆ—ನನಗೆ ಜಾತಿಯು ಗೊತ್ತಿಲ್ಲ.

ರಮ—ಧರ್ಮವೇ ಜಾತಿ-ಆಚಾರವ್ಯವಹಾರ, ಧರ್ಮ, ನೀತಿ ಇವಿ ದ್ದರೆ, ಜಾತಿ-ಬ್ರಾಹ್ಮಣರಲ್ಲಾಗಲಿ, ದೇವಕುಲದಲ್ಲಾಗಲಿ ನಿನ್ನಂತಿರುವ ವರು ಎಷ್ಟುಮಂದಿ ? ನೀರದೆ !

ಹೀಗೆಂದು ಹೇಳುತ್ತಿರುವ ಸಮಯದಲ್ಲಿ ಭೃತ್ಯನೊಬ್ಬನು ಬಂದು, " ಯಜಮಾನಿಯರು ಕೆಳಗಿಳಿದುಹೋದರು, ತಾವೂ ಬರಬೇಕು—ಅವರು ಕಳವಳಗೊಂಡಿದ್ದಾರೆ " ಎಂದು ಹೇಳಿದನು.

ಹದಿನೈದನೆಯ ಪರಿಚ್ಛೇದ.

ರಮಣೀಮೋಹನನು ನೀರದೆಯೊಂದಿಗೆ ಬೆಟ್ಟದಿಂದಿಳಿದನು. ಅವರಿ ಳಿದು ಬರುವಾಗ ಇಬ್ಬರಲ್ಲೊಬ್ಬರೂ ಮಾತಾಡಲಿಲ್ಲ. ಗಂಭೀರವಾದ

ಮೇಘದ ಹಿಂದೆ ಮಿಂಚಿನಂತೆ ನೀರದೆಯು ರಮಣೀಮೋಹನನ ಹಿಂದೆ ಹಿಂದೆ ಬರುತ್ತಿದ್ದಳು. ಕಡೆಯ ಸೋಪಾನಕ್ಕೆ ಬಂದು ರಮಣೀಮೋಹನನು ಅಲ್ಲಿ ನಿಂತು ಹಿಂದಿರುಗಿ ನೋಡಿದನು. ಜಟಾಜೂಟಧಾರಿಯಾದೊಬ್ಬ ಸನ್ಯಾಸಿಯು ಅವನನ್ನು ಹಿಂದಟ್ಟಿ ಬರುತ್ತಿದ್ದನು. ಸನ್ಯಾಸಿಯ ದೃಷ್ಟಿಯು ನೀರದೆಯ ಮೇಲಿರುವುದು. ಅವಳನ್ನು ಬಿಟ್ಟು ಮತ್ತಾವುದನ್ನೂ ನೋಡನು.

ಸನ್ಯಾಸಿಗೆ ಹೆಚ್ಚು ವಯಸ್ಸಾಗಿರಲಿಲ್ಲ - ಐವತ್ತರೊಳಗಿರಬಹುದು. ಆದರೆ ಜಟಾಭಾರವು ಕಡಿಮೆಯಾಗಿರಲಿಲ್ಲ. ಕಾಸಿದ ಬಂಗಾರದ ಬಣ್ಣದ ಮೇಲೆ ಜಟಾಭಾರವು ಬಹು ಅಂದವಾಗಿ ಕಣ್ಗೊಳಿಸುವುದು. ಸನ್ಯಾಸಿಯ ಉಡುಪು ಒಂದು ಕೌಪೀನಮಾತ್ರವಾಗಿದ್ದಿತು-ಕೈಯಲ್ಲೊಂದು ಕಬ್ಬಿಣದ ಹಿಮುಟಿಗೆ.

ರಮಣೀಮೋಹನನು ಸನ್ಯಾಸಿಯನ್ನು ಕುರಿತು, "ತಮಗೇನು ಬೇಕು?" ಎಂದು ವಿಚಾರಿಸಿದನು.

ಸನ್ಯಾಸಿಯು ಉತ್ತರವನ್ನು ಕೊಡದೆ ನೀರದೆಯನ್ನು ನೋಡುತ್ತಿದ್ದನು-ಸನ್ಯಾಸಿಯು ಹುಡುಗಿಯನ್ನು ಕೊಂಡೊಯ್ಯುವನೆಂದು ಮೋಹನನಿಗೆ ಭಯವುಂಟಾಯಿತು. ಅವನು ಬೇಗಬೇಗನೆ ನೀರದೆಯನ್ನು ಕರೆದುಕೊಂಡು ಯಜಮಾನಿ ಮುಂತಾದವರು ಅವನಿಗೆ ಸಲವಾಗಿ ಕಾದಿದ್ದ ಸ್ಥಳಕ್ಕೆ ಬಂದನು. ಯಜಮಾನಿಯು ಕಳವಳಗೊಂಡು, "ಏನಾಯಿತು, ಮಗು?" ಎಂದು ಕೇಳಿದಳು.

"ಅಮ್ಮಾ! ನೋಡಿ, ಒಬ್ಬ ಸನ್ಯಾಸಿಯು ಬೆನ್ನಟ್ಟಿ ನಮ್ಮ ಹಿಂದೆ ಹಿಂದೆ ಓಡಿಬರುತ್ತಾನೆ."

ಇಬ್ಬರು ಆಳುಗಳು ಹೋಗಿ ಸನ್ಯಾಸಿಯನ್ನು ಅಡ್ಡಗಟ್ಟಿ ನಿಲ್ಲಿಸಿದರು. ಯಜಮಾನಿಯು ಬಳಗದ ಸಮೇತವಾಗಿ ಬಂಡಿಯನ್ನು ಹತ್ತಿದಳು. ಬಂಡಿಗಳು ಹೊರಟುವು. ಆಗ ಸೂರ್ಯಾಸ್ತವಾಗಿದ್ದಿತು.

ಬಂಡಿಯು ಅರ್ಧಹಾದಿ ಬಂದಬಳಿಕ ಮೋಹನನು ಹಿಂದಿರುಗಿನೋಡಿ ವಿಸ್ಮಿತನಾದನು-ಸನ್ಯಾಸಿಯು ಹಿಂದೆ ಹಿಂದೆ ಓಡಿ ಬರುತ್ತಿದ್ದನು; "ಅಮ್ಮಾ! ಸನ್ಯಾಸಿಯು ಬರುತ್ತಾನೆ" ಎಂದನು.

"ಎಲ್ಲೋ ಮಗು!"

"ಬಂಡಿಯ ಹಿಂದೆ"

"ಇದೇನೆ! ಇಂತಹ ಸನ್ಯಾಸಿಯನ್ನು ಎಲ್ಲಿಯೂ ಕಾಣೆ."

ಕತ್ತಲೆಯಾಗುತ ಬಂದಿತು -ಸನ್ಯಾಸಿಯು ಕಣ್ಣಿಗೆ ಬೀಳಲಿಲ್ಲ.

ಮರುದಿನ ಪ್ರಭಾತದಲ್ಲಿ ಮೋಹನನು ಎದ್ದು ಬಾಗಲಿಗೆ ಬಂದನು. ಬಾಗಿಲಲ್ಲಿ ಸನ್ಯಾಸಿಯು ನಿಂತಿದ್ದನು. ಅವನನ್ನು ಕಂಡು ಮೋಹನನು ಚಿಂತಿತನಾಗಿ ಹೆದರದೆ, ಮುಂದುವರಿದು, ಸನ್ಯಾಸಿಯನ್ನು ಕುರಿತು, "ನಿನಗೇನು ಬೇಕು?" ಎಂದು ವಿಚಾರಿಸಿದನು-ಅದಕ್ಕೆ ಉತ್ತರವನ್ನು ಕೊಡದೆ ಸನ್ಯಾಸಿಯು, "ನಿನ್ನೆ ನಿಮ್ಮ ಸಂಗಡ ಇದ್ದ ಹುಡುಗಿಯು ಎಲ್ಲಿ?" ಎಂದು ಕೇಳಿದನು.

ರಮ -ಹುಡುಗಿಯು ಎಲ್ಲಾದರೂ ಇರಲಿ-ಅವಳಿಂದ ನಿನಗೇನು ಪ್ರಯೋಜನ -

ಸನ್ಯಾಸಿ—ಪ್ರಯೋಜನವಿಲ್ಲದೆ ನಿಮ್ಮನ್ನೇಕೆ ಬೇಸರಗೊಳಿಸುತ್ತಿದ್ದೆನು? ಅವಳನ್ನು ಕರೆತಂದರೆ ಒಮ್ಮೆ ಚೆನ್ನಾಗಿ ನೋಡುವೆನು.

ರಮ -ನೀನು ಭಂಡನೆಂದೂ ಅಧಾರ್ಮಿಕನೆಂದೂ ಕಾಣುತ್ತದೆ,

ಸನ್ಯಾಸಿ--ಸ್ವಲ್ಪಮಟ್ಟಿಗೆ ಹಾಗೇ ಆದೀತು-ಹುಡುಗಿಯು ಎಲ್ಲಿ?

ರಮ-- ನೀನವಳನ್ನು ನೋಡಲಾರೆ.

ಸನ್ಯಾಸಿ—ಒಳ್ಳೆಯ ಕೆಲಸವಾಯಿತು -ನನ್ನದೊಂದು ಮಾತಿಗೆ ಉತ್ತರವನ್ನು ಹೇಳಿರಿ.

ರಮ--ನಿನುಬೇಕೋ, ಬೇಗನೆ ಕೇಳು.

ಸನ್ಯಾಸಿ -ಹುಡುಗಿಯು ನಿಮಗೇನಾಗಬೇಕು?

ರಮ--ಹುಡುಗಿಯೆ? ಹುಡುಗಿಯು ನನಗೆ ಸೋದರಿ.

ಸನ್ಯಾಸಿ—ನಿಜವನ್ನು ಹೇಳು-ವಂಚಿಸಬೇಡ.

ರಮ--ಸುಳ್ಳನ್ನು ಹೇಳುವುದಿಲ್ಲ-ಹುಡುಗಿಯು ಸೋದರಿಯಂತೆ ನಮ್ಮ ಮನೆಯಲ್ಲಿ ಪಾತ್ರಯಾಗುತ್ತಿದ್ದಾಳೆ.

ಸನ್ಯಾಸಿ---ಹಾಗಾದರೆ, ಹುಡುಗಿಯು ನಿನಗೆ ಸಾಕುತಂಗಿ?

ರಮ--ಅಹುದು.

ಸನ್ಯಾಸಿ- ಅವಳು ನಿನಗೆಲ್ಲಿ ಸಿಕ್ಕಳು?

ರಮು—ನಿನಗೇಕೆ ಅಷ್ಟನ್ನೆಲ್ಲಾ ಹೇಳಬೇಕು ?

ಸನ್ಯಾಸಿ—ಈಶ್ವರಸಾಕ್ಷಿಯಾಗಿ-ನಿಮ್ಮ ಗುರುವಿನಸಾಕ್ಷಿಯಾಗಿ ಹೇಳು, ಹುಡುಗಿಯು ಎಲ್ಲಿ ಸಿಕ್ಕಳು ?

ರಮಣೀಮೋಹನನು ಉತ್ತರವನ್ನು ಹೇಳುವುದಕ್ಕೆ ಮೊದಲು, ದೂರದಲ್ಲಿದ್ದ ವಾಮೆಯು ಸನ್ಯಾಸಿಯನ್ನು ಕಂಡು, "ಅದೇನೆ ! ಪುನಃ ಸನ್ಯಾಸಿಯು ಬಂದನಲ್ಲೆ ! ಹಾಳಾದ ಆಳುಗಳು ಏನಾದರೆ ? ಅನ್ನಗೇಡರು. ತಿಂದು ಕುಳಿತು ಆಡುವರು-ಎದ್ದುಹೋಗಿ ನೋಡಿರೊ-ಕಡೆಗಾಲದಲ್ಲಿ ಹುಡುಗಿಯನ್ನು ಸನ್ಯಾಸಿಯು ಚಿಮುಟಿಗೆಗೆ ಬಲಿಕೊಡಬೇಕಾಯಿತಲ್ಲ !" ಎಂದು ಕೂಗಿದಳು.

ವಾಮೆಯು ಕೂಗನ್ನು ಕೇಳಿ ಆಳುಗಳೆದ್ದುಹೋಗಿ ಸನ್ಯಾಸಿಯನ್ನು ಹೊಡೆದೋಡಿಸಿದರು. ಸನ್ಯಾಸಿಯು ಹೋಗುವಾಗ, "ಹೇಗಾದರೂ ಮಾಡಿ ಹುಡುಗಿಯನ್ನು ಕೊಂಡೊಯ್ದೇ ಬಿಡೆನು, ಅಡ್ಡಿಮಾಡುವವರಾರು ? ನೋಡುವೆನು" ಎಂದು ಹೇಳುತ್ತ ಹೊರಟುಹೋದನು.

ಹದಿನಾರನೆಯ ಪರಿಚ್ಛೇದ.

ಸನ್ಯಾಸಿಯ ಕಡೆಯ ಮಾತನ್ನು ಕೇಳಿ ಮೋಹನನಿಗೆ ಬಹಳ ವ್ಯಸನವಾಯಿತು. ಅವನು ಮನಸ್ಸಿನಲ್ಲಿ, "ಸನ್ಯಾಸಿಯು ನೀರದೆಯನ್ನು ಕೊಂಡೊಯ್ಯುವನು ಅದಕ್ಕೆ ಅಡ್ಡಿಮಾಡುವವರಾರು ? ನನಗೇನು ಅಧಿಕಾರ ? ನಾನವಳಿಗೇನಾಗಬೇಕು ? ನೀರದೆಯೆನಗೇನೂ ಸಂಬಂಧವಿಲ್ಲವೆ ? ಹಾ ! ದೇವರೆ ! ನೀರದೆಗೂ ನನಗೂ ಸಂಬಂಧವೇನೂ ಇಲ್ಲ" ವೆಂದು ಹೇಳಿಕೊಂಡು ಪರಿತಪಿಸಿದನು.

ಅಂದು ಸಾಯಂಕಾಲಕ್ಕೆ ಸ್ವಲ್ಪಮೊದಲು ಯಜಮಾನಿಯು ಪಾಂಡೆಯ ಸಂಗಡ ಮಂದಿರಾಭಿಮುಖವಾಗಿ ಹೊರಟು ಹೋದ ಬಳಿಕ ಮೋಹನನು ವಾಮೆಯನ್ನು ಕರೆದನು. ಆಗ ಸೂರ್ಯಾಸ್ತವಾಗಿದ್ದಿತು, ಆದರೆ

ಕತ್ತಲಾಗಿರಲಿಲ್ಲ-ತಾಮಸಿಯಾದ ರಾತ್ರಿಯು ಜೊಂಪಲು ಜೊಂಪಲಾಗಿದ್ದ ಮರಗಳ ಹಿಂದೆ ನಿಂತು, ಸೂರ್ಯದೇವನು ಮುಳುಗಿದನೆ ಇಲ್ಲವೆ ಎಂದು ತಿಳಿಯಲು ಇಣಿಕಿಣಿಕಿ ನೋಡುತ್ತಿದ್ದಳು.

ಮೋಹನನೂ ವಾಮೆಯೂ ಮಹಡಿಯ ಮೇಲೆ ಪಶ್ಚಿಮಮುಖವಾಗಿ ಕುಳಿತರು. ರಮಣೀಮೋಹನನು "ವಾಮಾತಾಯಿ!" ಎಂದು ಸಂಬೋಧಿಸಿದನು.

ವಾಮೆ—ಏನೋ, ಮಗು!

ರಮ—ನಿನಗೊಂದು ಮಾತನ್ನು ಹೇಳಬೇಕಾಗಿದೆ.

ವಾಮೆ—ಏನು? ಹೇಳು.

ಮೋಹನನು ಏನನ್ನೂ ಹೇಳಲಾರದೆ ಹೋದನು—ಮೌನವಾಗಿದ್ದನು-ವಾಮೆಯು ಸ್ವಲ್ಪ ಉದ್ವಿಗ್ನೆಯಾಗಿ "ನೀನೇಕೆ ಹೀಗೆ ಮಾಡುತ್ತಿ? ಏನನ್ನು ಹೇಳಬೇಕೋ ಅದನ್ನು ಹೇಳು" ಎಂದಳು.

ರಮ—ನಾನಾರಿಗೆ ಮದುವೆಯಾಗಬೇಕೋ ಅವಳು ತಂದೆಯ ಸಂಗಡ ದೇವಘಟ್ಟಕ್ಕೆ ಬಂದಿದ್ದಾಳಲ್ಲವೆ?

ವಾಮ—ಅಹುದು-ಬಂದಿದ್ದಾಳೆ.

ರಮ—ವಾಮಾತಾಯಿ! ನಾನು ಮದುವೆಯಾಗೆನು.

ವಾಮೆ—ಅದೇಕೊ?

ರಮ—ವಾಮಾತಾಯಿ! ನಾನು ಹುಡುಗನಲ್ಲ-ನಾನಾರನ್ನೂ ಮದುವೆಯಾಗೆನು.

ವಾಮೆ—ಅದು ಹೇಗಾಗುವುದು, ಹುಚ್ಚ!

ರಮ—ಆದರೆ—

ವಾಮೆ—ಆದರೇನು? ಹೇಳು.

ರಮ—ನೀರದೆಯಾದರೆ ಮದುವೆಯಾಗುವೆನು.

ವಾಮೆ—ಅಮ್ಮಾ! ನಾನೆಲ್ಲಿಗೆ ಹೋಗಲಿ! ನೀನು ನೀರದೆಯನ್ನೊಲಿಸಿಕೊಂಡಿರುವಿಯಾ!

ರಮ—ನೀರದೆಗೊಲಿದಿದ್ದೇನೋ ಇಲ್ಲವೋ ಗೊತ್ತಿಲ್ಲ, ಆದರೆ ನೀರದೆಯನ್ನೊಂದು ನಿಮಿಷವಾದರೂ ನೋಡದಿರೆನು.

ವಾಮೆ—ನಿನಗಿಷ್ಟು ವಿದ್ಯವೆ !

ರಮು—ವಾಮಮಾತಾಯಿ ! ನಕ್ಕು, ಮಾತನ್ನು ಹಾರಿಸಬೇಡ.

ವಾಮೆ—ಇದೇನು, ನಗುವ ಸಮಾಚಾರವೇನೊ, ಹುಚ್ಚ ! ನೀನು ನೀರದೆಯನ್ನು ಮದುವೆಯಾಗಬಹುದೆ ?

ರಮು—ಏಕಾಗಕೂಡದು. ವಾಮಮಾತಾಯಿ ?

ವಾಮೆ—ನೀರದೆಗೆ ಜಾತಿ, ಕುಲ, ಆವದೂ ಗೊತ್ತಿಲ್ಲ.

ರಮು—ಗೊತ್ತಿಲ್ಲದಿದ್ದರೆ ಬಾಧಕವೇನು ?

ವಾಮೆ— ನೀರದೆಯು ಒಬ್ಬ ದೊಂಬರವನ ಮಗಳಾಗಿದ್ದರೆ ?

ರಮು—ದೊಂಬರ ಮಗಳೆ ! ಬ್ರಾಹ್ಮಣರಲ್ಲಾಗಲಿ ದೇವತೆಯರಲ್ಲಾಗಲಿ ಅಂತಪ ಒಬ್ಬ ಹುಡುಗಿಯನ್ನು ತೋರು, ನೋಡುವೆನು. ಆವಳು ದೊಂಬರವಳಲ್ಲವೆಂದು ನೀನು ಚೆನ್ನಾಗಿ ಬಲ್ಲೆ.

ವಾಮೆ—ನನಗೆ ಹೇಗೋ ಗೊತ್ತು ?

ರಮು—ದೊಂಬರವಳಾಗಿದ್ದರೆ, ಅವಳನ್ನು ಏಕೆಗೆ ಕಟ್ಟಿಕೊಂಡು ಪ್ರೀತಿಸುತ್ತಿದ್ದಿಯಾ ?

ವಾಮೆ -ಅಯ್ಯೊ, ಪಾಪ ! ಅನಾಥೆಯಾದ ಹುಡುಗಿ !

ವಾಮೆಯ ಕಂಠವು ಅಡುಗಿತು. ಅವಳು ಅಲ್ಲಿ ಕುಳಿತಿರಲಾರದೆ ಹೋದಳು-ಹೊರಡುವುದಕ್ಕೆದ್ದಳು. ಅಷ್ಟರೊಳಗೆ ನೋಡಿದನು. "ವಾಮಮಾತಾಯಿ !" ಎಂದು ಕರೆದನು.

ವಾಮೆ -ಪುನಃ ಮತ್ತೇನು ?

ರಮು --ತಾಯಿಗೆ ಹೇಳುವಿಯಾ ?

ವಾಮೆ -ಏನೆಂದು ಹೇಳಲೋ ! ನೀನೊಬ್ಬ ಹುಚ್ಚನಾದೆ-ಇಂತಪ ಮಾತನ್ನಾರಿಗಾದರೂ ಹೇಳುವುದುಂಟೆ ?

ರಮು -ಹೇಳದಿದ್ದರೆ ಸಾಗುವುದಿಲ್ಲ-ವೈದ್ಯನಾಥನ ಆಣೆ—ನಾನು ನೀರದೆಯನ್ನು ಬಿಟ್ಟು ಮತ್ತಾರನ್ನೂ ಮದುವೆಯಾಗೆನು.

ವಾಮೆ -ನಿನಗೆ ನಿಜವಾಗಿ ಹುಚ್ಚು ಹಿಡಿದಿದೆ-ನೀರದೆಯನ್ನು ಮದುವೆಯಾದರೆ ನಿನಗೆ ಜಾತಿಯುಳಿಯುವುದೆ ?

ರಮ --ನೀರದೆಗಿಂತ ಜಾತಿಯು ದೊಡ್ಡದಲ್ಲ-ಜಾತಿ, ಮತ, ಸಮಾಜ, ಎಲ್ಲವೂ ರಸಾತಲಕ್ಕೆ ಹೋಗಲಿ-ನಾನು ನೀರದೆಯನ್ನೇ ಮದುವೆಯಾಗುವೆನು.

ವಾಮೆಯು ಕೋಪಗೊಂಡವಳು, ಸ್ವಲ್ಪ ಉತ್ತೇಜಿತ ಕಂಠದಿಂದ "ನಿನಗೇನೋ ಜಾತಿಯು ದೊಡ್ಡದಲ್ಲದಿರಬಹುದು-ನಮಗೆ ಜಾತಿಯೇ ದೊಡ್ಡದು" ಎಂದಳು.

ರಮ —ನನ್ನ ಸುಖಶಾಂತಿಗಳಿಗಿಂತ ಜಾತಿಯು ದೊಡ್ಡದೆ ?

ವಾಮೆ—ನಿನ್ನ ತಾಯಿಯ ಸುಖಶಾಂತಿಗಳಿಗಿಂತ ನಿನಗೆ ನೀರದೆಯು ಹೆಚ್ಚಾದಳೂ ?

ವಾಮೆಯು ಉತ್ತರವನ್ನು ಕೇಳುವುದಕ್ಕೆ ಮೊದಲು ಗರಗುರ ಎಂದು ಎದ್ದು ಹೊರಟು ಹೋದಳು.

ಹದಿನೇಳನೆಯ ಪರಿಚ್ಛೇದ.

ಸುದ್ದಿಯು ಗುಟ್ಟಾಗಿರಲಿಲ್ಲ--ಹೊರಪಟ್ಟು ಎಲ್ಲರಿಗೂ ತಿಳಿಯಿತು. ಕ್ರಮವಾಗಿ ಯಜಮಾನಿಯ ಕಿವಿಗೆ ಬಿದ್ದಿತು. ಅವಳು ಕ್ರೋಧದಿಂದ ಗಜಿ-ಸುತ ವಾಮೆಯನ್ನು ಚೆನ್ನಾಗಿ ತಿರಸ್ಕರಿಸಿದಳು. ವಾಮೆಯ ತಪ್ಪೇನೆಂದರೆ ಅವಳೇಕೆ ನೀರದಗ ಮನೆಯಲ್ಲಿರಲು ಸ್ಥಳವನ್ನು ಕೊಡಿಸಿದಳು ? ವಾಮೆಯು ಚೆನ್ನಾಗಿ ಮಾತಿಗೆ ಮಾತನ್ನು ಜೋಡಿಸಿದಳು. ಅತ್ತ ಸರಿಬೀಳದೆ ಯಜಮಾನಿಯು ನೀರದೆಯಮೇಲೆ ಬಿದ್ದಳು. ದಾಸಿಯ ವೃತ್ತಿಗೆ ಯೋಗ್ಯಳಲ್ಲದವಳು ಸೊಸೆಯಾಗಬೇಕೆ ? ಯಜಮಾನಿಯ ಪ್ರಾಣವಿರುವವರೆಗೂ ಅದು ಸಾಗದು.

ಎರಡು ದಿನಗಳು ನೀರದೆಗೆ ಹೊಡೆತ, ಬೈಗಳೂ ಸಮಭಾವದಲ್ಲಿ ಜರಿಗಿದುವು. ನಮಗೆ ತಿಳಿದು ಬಂದುದರಲ್ಲಿ ಆ ಎರಡು ದಿನ ಕಾಗೆಯು ಮನೆಯಮೇಲೆ ಹಾರಾಡುವುದಕ್ಕವಕಾಶವಿರಲಿಲ್ಲನೆಂದು ತಿಳಿಯಬಂದಿತು. ಮನೆ

ಯಲ್ಲಿ ನಿತ್ಯವೂ ಎರಡು ಬೆಕ್ಕುಗಳು ಕಾದಾಡುತ್ತಿದ್ದುವು. ಆ ಎರಡು ದಿನವೂ ಅವು ತಮ್ಮ ತಮ್ಮ ವ್ಯಾಜ್ಯವನ್ನು ತಂತಮ್ಮಲ್ಲಿ ಸರಿಮಾಡಿಕೊಂಡು ಭೀತಚಿತ್ತವುಳ್ಳವವಾಗಿ ಒಂದು ಮೂಲೆಯಲ್ಲಿ ಕುಳಿತು ಒಳಗೊಳಗೆ ನಗುತಿದ್ದುವು. ಸನ್ಯಾಸಿಯು ಬಂದು ಪುನಃ ಹೆಚ್ಚು ರಗಳೆಗೆ ಕಾರಣವಾಗುವುದೆಂದು ತಿಳಿದು ನೆರೆಯವರು ಅವನಾವನೂ ಜಟಾಧಾರಿ ವ್ಯಕ್ತಿಯನ್ನು ಬೀದಿಯಲ್ಲಿ ಕಂಡರೆ ಆ ಬೀದಿಗೆ ಬರಗೊಡಿಸರು. ರಮಾನಾಥನೋ ಅವನು ಆ ಎರಡು ದಿನಗಳೂ ಆವಾಗಲಾದರೂ ಒಮ್ಮೆ ಒಳಮನೆಗೆ ಹೋಗುವನು.

ಮತ್ತೆ ನೀರದೆಯೋ? ನೀರದೆಯು ಆರಿಗೂ ಮುಖವನ್ನು ತೋರಳು-ಒಳಮನೆಯಲ್ಲೊಂದು ಅಂಧಕಾರವಾದ ಕತ್ತಲೆ ಕೋಣೆಯಲ್ಲಿ ಕುಳಿತು ರಾತ್ರಿ ಹಗಲು ಅಳುತ್ತಿರುವಳು. ಅವಳು ಊಟವನ್ನು ಮಾಡಳು-ನಿದ್ದೆಹೋಗಳು. ರಾತ್ರಿ ಹಗಲು ಅವಳಿಗೊಂದೇ ಯೋಚನೆ-ಅವಳು ಮನಸ್ಸಿನಲ್ಲಿ. "ಅವನೇಕೆ ಅಂತಹ ಮಾತನ್ನು ನಾನುಗೆ ಹೇಳಿದನು-ನಾನೇನೋ ಚೆನ್ನಾಗಿದ್ದೆನು-ಅವನಿರುವ ಮನೆಯಲ್ಲಿ ನಾನೂ ಇರುತ್ತಿದ್ದೆನು-ಅವನು ತಿರುಗಾಡುವ ಸ್ಥಳವನ್ನು ನೋಡುತ್ತಿದ್ದೆನು. ಅವನೂ ನನ್ನನ್ನು ನೋಡುವನು-ಅದನ್ನು ನಾನು ತಿಳಿದುಕೊಳ್ಳುತ್ತಿದ್ದೆನು. ಅದಕ್ಕಿಂತ ಮತ್ತಾವ ಸುಖವು ಬೇಕು? ನನಗಿಂತ ಮತ್ತಾರು ಹೆಚ್ಚು ಸುಖಿಯಾಗಿದ್ದರು?" ಎಂದು ಭಾವಿಸಿಕೊಳ್ಳುವಳು.

ಪುನಃ, "ನಿಜ ಅಂತಹ ದೇವರಂತಹವನ ಮನೆಯಲ್ಲಿ ದಾಸಿಯಾಗಿರುವುದಕ್ಕೂ ನಾನು ಯೋಗ್ಯೆಯಲ್ಲ-ನಾನೊಂದು ಅಗಣ್ಯಕೀಟ-ಅತನೋ-ಎಷ್ಟೊಂದು ದೊಡ್ಡವ! ಒಂದಾನೊಂದು ದಿನ ಅತನ ಕೈಯಿಂದ ಒತ್ತಿದನೆ ಭಿಕ್ಷವನ್ನು ಪಡೆದಿದ್ದೆನು-ಅದರಿಂದಲ್ಲವೆ, ನನಗಿಷ್ಟೊಂದು ಅಹಂಕಾರ? ಛಿ, ಛಿ! ಏನು ನಾಚಿಕೆಗೇಡು-ಅವನೇಕೆ ಅಂತಹ ಮಾತನ್ನು ನಾಮೆಗೆ ಹೇಳಿದನು? ಮನುಷ್ಯರಿಗೆ ಮುಖವನ್ನು ತೋರಲು ಲಜ್ಜೆಯಾಗಿದೆ" ಎಂದು ಭಾವಿಸುವಳು.

ನೀರದೆಯು ಎರಡು ದಿನಗಳಿಂದ ಊಟವನ್ನು ಮಾಡಲಿಲ್ಲವೆಂದು ನಾಮೆಯು ಕೇಳಿದಳು. ಅವಳಿಗೆ ಬಹಳ ವ್ಯಥೆಯಾಯಿತು-ಆದರೆ ನೀರದೆಯ ಮುಖವನ್ನು ನೋಡಲವಳಿಗೆ ಪ್ರವೃತ್ತಿಯುಂಟಾಗಲಿಲ್ಲ. ನೀರದೆಯು

ಸರ್ವನಾಶಿನಿ-ರೂಪವನ್ನಿಟ್ಟುಕೊಂಡು ಮೋಹನನ್ನು ಮೋಹಗೊಳಿಸಿದಳು. ವಾಮೆಯು ಸ್ವಲ್ಪ ರೇಗಿದರೆ ಹುಡುಗಿಗೆ ಮನೆಯಲ್ಲಿ ಅನ್ನವು ಸಿಗುವುದೆಂದು ದಾಸದಾಸಿಯರೆಲ್ಲರೂ ತಿಳಿದಿದ್ದರು. ಆದರದು ಸೀರದೆಗೆ ತಿಳಿಯದು-ಅವಳಾ ಕತ್ತಲೆ ಕೋಣೆಯಲ್ಲಿ ಆಹಾರವಿಲ್ಲದೆ ನೆಲದ ಮೇಲೆ ಬಿದ್ದಿದ್ದಳು.

ಮೂರನೆಯ ದಿನ ಯಜಮಾನಿಯು ಒಬ್ಬ ದಾಸಿಯ ಮೂಲಕ, ಸೀರದೆಯು ಮನೆಯನ್ನು ಬಿಟ್ಟು ಹೊರಟು ಹೋಗಬೇಕೆಂದು ಅವಳಿಗೆ ತಿಳಿಸುವಂತೆ ಹೇಳಿ ಕಳುಹಿದಳು.

ದಾಸಿಯ ಹೆಸರು ರಾಧಿಕೆ–ಎಲ್ಲರೂ ಅವಳನ್ನು "ರಾಧಿ" ಎಂದು ಕರೆಯುವರು-ಸೀರದೆಯನ್ನು ಕಂಡರೆ ಅವಳಿಗೆ ಆಗದು-ಅವಳು ಸೀರದೆಯನ್ನು ಮನೆಯಿಂದ ಹೊರಡಿಸಲು ಆನಂದದಿಂದ ಮುಂದಾದಳು.

ರಾಧಿಯು ಹೋಗಿ ನೋಡಿದಾಗ ಸೀರದೆಯು ಆಹಾರವಸ್ತ್ರಕವ್ರೊ ಸೆರಿಗಿನಿಂದ ಮುಚ್ಚಿದವಳಾಗಿ ನೆಲದ ಮೇಲೆ ಮಲಗಿದ್ದಳು-ಆಗ ಕಾರ್ತಿಕ ಮಾಸ-ಛಳಿಗೆ ಪ್ರಾರಂಭವಾಗಿದ್ದಿತು; ಸೀರದೆಗೆ ಹೊದ್ದುಕೊಳ್ಳಲು ಸರಿಯಾದ ಬಟ್ಟೆಯಿಲ್ಲ.

ಹಸಿವಿನಿಂದಲೂ ಬಾಯಾರಿಕೆಯಿಂದಲೂ ಸೀರದೆಗೆ ಪ್ರಾಣಹೋಗುತ್ತಿದ್ದಿತು. ಒಬ್ಬರಾದರೂ ಒಂದು ಥಾಲಿ ನೀರನ್ನು ತಂದುಕೊಂಡರು-ಅವಳು ಬಿದ್ದಿದ್ದ ಕೋಣೆಯನ್ನು ಇಣಿಕಿನೋಡರು-ಅಭಾಗಿನಿಯಾದಾ ಸೀರದೆಯು ಒತ್ತಡವೆ ಎದ್ದು ಕುಳಿತುಕೊಳ್ಳುವಳು-ಕೂಡಲೆ ಮಲಗುವಳು-ನೀರಿಗೆ ಸಲವಾಗಿ ಒದ್ದಾಡುವಳು.

ರಾಧಿಯು ಹೋಗಿ, "ಅದಾರೆ, ಮಲಗಿ? –ಏಳು-ಇನ್ನೇಕೆ ಈ ಮನೆಯಲ್ಲಿರುವ? ಬಹಳವಾಯಿತು! ಮಾನದಿಂದೆದ್ದು ಹೊರಟು ಹೋಗು" ಎಂದಳು.

ಸೀರದೆಯು ಮಲಗಿದ್ದಳು ಏಳಲಿಲ್ಲ-ರಾಧಿಯು ಮತ್ತಷ್ಟು ಘಾಟಿಯಾಗಿ, "ಜೋಟುದ್ದ ಹುಡುಗಿಗೆ ಎಷ್ಟೊಂದು ಏಟ್ಟೆ! ಯಜಮಾನಿಯು ನಿನ್ನನ್ನು ಸಹರದವನಿಂದ ಹೊರಗೆ ಹೊರಡಿಸಲು ಹೇಳಿದ್ದಾಳೆ-ಮರ್ಯಾದೆಯಿಂದೆದ್ದು ಹೋಗು" ಎಂದಳು.

ರಾಧಿ—ನಿಜವಲ್ಲದೆ ಪುಣ್ಯಕ್ಷೇತ್ರದಲ್ಲಿ ನಿಂತು ಸುಳ್ಳನ್ನು ಹೇಳು ವೆನೆ? ನಿನ್ನನ್ನು ಸುಟ್ಟರು !

ನೀರ—ನಾನು-ಮತ್ತೆಲ್ಲಿಗೆ ಹೋಗಲಿ ?

ರಾಧಿ—ನಿನಗೆ ಸ್ಥಳಕ್ಕೆ ಕಡಿಮೆಯೇ ? ದಾರಿಯಲ್ಲಿ ಹೋಗುತ್ತಿದ್ದರೆ ಎಷ್ಟೋ ಸ್ಥಳಗಳು ಸಿಗುವುವು.

ನೀರದೆಗದು ಚೆನ್ನಾಗಿ ಅರ್ಥವಾಗಲಿಲ್ಲ-ಅವಳಿಗದನ್ನು ತಿಳಿಯಹೇಳಲು ರಾಧಿಯು ಅವಳ ಮುಖಕ್ಕೆ ಕೈತೋರುತ್ತ, “ನಿನಗೆ ರೂಪವಿದೆ, ಯೌವನವಿದೆ, ಹೋದೆಡೆ ಅವುಗಳನ್ನು ಮಾರಿಕೊಂಡು ಇದ್ದು, ತಿಂದು ಕೊಂಡುಹೋಗು-ಸ್ಥಳಕ್ಕೇನು ಕಡಿಮೆ-ಈಗ ಏಳು” ಎಂದಳು.

ನೀರದೆಯೇಳಲಿಲ್ಲ-ರಾಧಿಯು, “ಪಹರೇದವನನ್ನು ಕರೆಯಬೇಕೆ ?” ಎಂದಳು. ನೀರದೆಯು ಅಳುತ್ತ ನೆಲದಮೇಲೆ ಮಲಗಿದ್ದಳು. ರಾಧಿಯು ಕೋಪದಿಂದ ಬೇಗ ಪಹರೇದವನನ್ನು ಕರೆಯಲು ಹೋದಳು.

ಪಹರೇದವನು ಚಿಕ್ಕದೊಂದು ಕೋಣೆಯಲ್ಲಿ ಕುಳಿತು ಸುಣ್ಣವನ್ನು ಹಚ್ಚಿ ಹೊಗೆಲೆಯನ್ನು ತೀಡುತಿದ್ದನು. ರಾಧಿಯು ಹೋಗಿ, “ಚೌಬೆ ಮಹಾಶಯ ! ಬತ್ತಡವೆ ಮನೆಯೊಳಗೆ ಬಾ-ಯಜಮಾನಿಯು ಅಪ್ಪಣೆಯಾಗಿದೆ” ಎಂದಳು.

ಕೈಯಲ್ಲಿ ಮಾಡುತಿದ್ದ ಕೆಲಸವನ್ನು ಬಿಡದೆ, “ಏನದು ?” ಎಂದು ವಿಚಾರವನ್ನು ಮಾಡಿದನು.

ರಾಧಿ—ಒಬ್ಬ ಹುಡುಗಿಯನ್ನು ಮನೆಯಿಂದ ಹೊರಡಿಸಬೇಕು.

ಚೌಬೆ-ಸನ್ಯಾಸಿಯು ಪುನಃ ಬಂದನೆ ?

ರಾಧಿ—ಇಲ್ಲವೊ-ಒಬ್ಬ ಹುಡುಗಿಯಿದ್ದಾಳೆ-ಅವಳನ್ನು ಹೊರಗೆ ಹೊರಡಿಸಬೇಕು.

ಚೌಬೆ—ಆರನ್ನು ಹೊರಡಿಸಬೇಕು ?

ರಾಧಿ—ನೀರಿಯನ್ನು.

ಚೌಬೆಮಹಾಶಯನು ಹೊಗೆಲೆಯನ್ನು ಬಾಯಲ್ಲಿಟ್ಟುಕೊಂಡು, ದೊಡ್ಡದೊಂದು ಕೋಲನ್ನು ತೆಗೆದುಕೊಂಡು, “ಕತ್ತಿನನ್ನು ಹಿಡಿ ಬೇಕೆ ?” ಎಂದನು.

ರಾಧಿ—ಅಯ್ಯೋ, ಕೆಟ್ಟ ಪೋರೆಯುವನೆ! ನೀರಿಯುಂತಹ ಚೋಟುದ್ದ ಹುಡುಗಿಯನ್ನು ಹೊರಡಿಸುವುದಕ್ಕೆ ಕತ್ತಿಯು ಬೇಕೇನೊ?

ಆ ಮಾತು ರಮಣೀಮೋಹನನ ಕಿವಿಗೆ ಬಿದ್ದಿತು-ಅವನು ಬೈಠಕು ಖಾನೆಯಲ್ಲಿ ಕುಳಿತಿದ್ದನು-ಅವನೆದ್ದು ಹೊರಗೆಬಂದು, "ಪಹರೆದವನಾರೊ?" ಎಂದು ಕೂಗಿದನು.

"ಹುಜೂರ್!"

"ರಾಧಿಯನ್ನು ಹಿಡಿದುಕೊ?

ಓಡಿ ಹೋಗಲು ರಾಧಿಗೆ ಅವಕಾಶವಾಗಲಿಲ್ಲ-ಚೋಬೆಮಹಾಶಯನು ಭೀಮದರ್ಪದಿಂದ ಅವಳನ್ನು ಹಿಡಿದನು.

"ರಾಧಿ!" ರಾಧಿಯು ಆಗ ನಡುಗುತಿದ್ದಳು-ಪ್ರಭುವೂ ನಡುಗುತ್ತಿದ್ದನು-ಒಬ್ಬಳು ಭಯದಿಂದ-ಮತ್ತೊಬ್ಬನು ಕೋಪದಿಂದ-

"ರಾಧಿ!"

"ಅಪ್ಪಣೆ—ನಾನೇನನ್ನೂ ಅರಿಯೆನು"

"ನಿನಗಷ್ಟೊಂದು ಧೈರ್ಯವೆ? ನೀರದೆಯನ್ನು ಮನೆಯಿಂದ ಹೊರಡಿಸುವಿರಾ?"

"ಬಾಬುಗಳೆ! ತಮ್ಮ ಪಾದದಾಣೆ, ನಾನೇನನ್ನೂ ಅರಿಯೆನು"

"ಚೋಬೆ! ಕುತ್ತಿಗೆಯನ್ನು ಹಿಡಿದು ಒದ್ದು ಅವಳನ್ನು ಮನೆಯಿಂದ ದೂರ ಹೊರಡಿಸು."

"ಬೇಡ, ಬಾಬುಗಳೆ!"

ಬಾಬುವು ಅಲ್ಲಿ ನಿಲ್ಲಲಿಲ್ಲ-ಅವನು ಅಂಬು ತಗಲಿದ ಹುಲಿಯಂತೆ ಗರ್ಜಿಸುತ ಒಳಗಣ ಮಹಲಿಗೆ ಹೋಗಿ, ವೈಶಾಖದ ಮೇಘದಂತೆ ಗಂಭೀರ ಕಂಠದಿಂದ "ವಾಮಾತಾಯಿ!" ಎಂದು ಕರೆದನು.

ದಾಸದಾಸಿಯರು ಸಿಕ್ಕೆಡೆ ಬಿದ್ದು ಓಡಿಹೋದರು-ಅವರು ಬಾಬುವಿನ ಕೋಪವನ್ನು ಹಿಂದೆಂದೂ ಕಂಡಿರಲಿಲ್ಲ-ರಾಧಿಯ ಗತಿಪಾರಾದುವನ್ನು ಕಂಡು, "ಮನೆಯಲ್ಲಿ ಪ್ರಳಯಕ್ಕಿಟ್ಟಿತು!" ಎಂದಂದುಕೊಂಡರು.

ರಮಣೀಮೊಹನನು ಪುನಃ, "ವಾಮಾತಾಯಿ!" ಎಂದು ಕೂಗಿದನು.

ವಾಮೆಯು ಆಗ ಬಂದು ಬಿಸಿಲಲ್ಲಿ ತಲೆಯ ಕೂದಲನ್ನಾರಿಸಿಕೊಳ್ಳು ತ್ತಿದ್ದವಳು, ರಮಣೀಮೋಹನನು ಕೂಗಿದುದನ್ನು ಕೇಳಿ ಬೇಗನೆ ಬಂದು ಅವನೆದುರಿಗೆ ನಿಂತಳು.

ಮೋಹನನ ಕಣ್ಣುಗಳೆರಡೂ ಅಶ್ರುಸಿಕ್ತವಾಗಿ ನೀರಿನ ಮೇಲಿನ ಪದ್ಮದಂತೆ ಕಾಣುತ್ತಿದ್ದುವು—ಶರೀರವು ಗಾಳಿಯಿಂದ ಹೊಡೆಯಲ್ಪಟ್ಟ ಪತಾಕ ದಂತೆ ಕಂಪಿತವಾಗುತಿದ್ದಿತು. ನಾಸಿಕೆಯು ಅರಳಿದಂತಿದ್ದಿತು-ಓಷ್ಠವು ಕಂಪಿತವಾಗುತಿದ್ದಿತು-ವಾಮೆಯೂ ಭೀತಿಗೊಂಡು ಉದ್ವಿಗ್ನೆಯಾಗಿ, "ಕರ ದುದೇಕೆ ?" ಎಂದಳು.

ಎರಡು ದಿನಗಳಲ್ಲಿ ಅವರವರಿಗೆ ಇದೇ ಪ್ರಥಮ ಸಂಭಾಷಣೆ-ಇದೇ ಪ್ರಥಮ ಸಂದರ್ಶನ-ಎರಡು ದಿನಗಳು ಅವರವರು ನೋಡಲಿಲ್ಲ-ಮೋಹ ನನು, "ನೀವೆಲ್ಲರೂ ಸೇರಿ ನೀರದೆಯನ್ನು ಮನೆಯಿಂದ ಹೊರಡಿಸಲು ಪ್ರಯ ತ್ನಪಡುವಂತಿದೆಯಲ್ಲವೆ ?" ಎಂದನು.

ವಾಮೆ—ಅದಾವುದನ್ನೂ ನಾನರಿಯೆನು.

ಮೋಹನ—ಅವಳ ಅಪರಾಧವೇನು ?

ವಾಮೆ—ನಿಮ್ಮ ತಾಯಿಯನ್ನು ಕೇಳು.

ಮೋಹನ—ಅಪರಾಧವನ್ನು ಮಾಡಿದ್ದರೆ ಪಾಪದನ್ನು ಮಾಡಿದವನು-ನನ್ನ ಅಪರಾಧಕ್ಕೆ ಸಲುವಾಗಿ ನಿರಪರಾಧಿಯಾದ ಅನಾಥೆಯನ್ನು ಮನೆಯಿಂ ದಟ್ಟುವಿರಾ ?

ವಾಮೆ—ಹಾಗಾದರೆ, ಅವಳನ್ನು ಸೊಸೆಮಾಡಿಕೊಂಡು ಮನೆಯಲ್ಲಿ ಟ್ಟುಕೊಳ್ಳಬೇಕೆ ?

ಮೋಹನ—ಸೊಸೆಯಾಗಬೇಡ-ಮನೆಯಲ್ಲಿ ಆಶ್ರಯವನ್ನು ಕೊಡ ಬಹುದಲ್ಲವೆ ?

ವಾಮೆ—ಈ ಅವಸ್ಥೆಯಲ್ಲಿ ?--ಇಷ್ಟೊಂದು ಹಗರಣವಾದ ಬಳಿಕ ಅದಾಗುವುದಿಲ್ಲ.

ಮೋಹನ—ಹಾಗಾದರೆ ಅವಳೆಲ್ಲಿರುವಳು ?

ವಾಮೆ—ಎಲ್ಲಿದ್ದಳೋ ಅಲ್ಲಿ.

ಮೋಹನ—ಅದೆಲ್ಲಿ ?

ಶಾಮೆ—ಬೀದಿಯಲ್ಲಿ.

ಮೋಹನ—ಬೀದಿಯಲ್ಲಿಯೆ ? ಶಾರದೆಯು ಬೀದಿಯಲ್ಲಿರಲಿ ? ನಾನಾರನ್ನು ಮನೆಗೆ ಸೊಸೆಯೆಂದು ಗ್ರಹಣಮಾಡಿರುವೆನೋ ಅಂತಹಳು ಬೀದಿಯಲ್ಲಿರಲಿ ?

ಶಾಮೆ—ಅಯ್ಯೊ, ರಾಮ ! ಇಷ್ಟರೊಳಗೆ ಇಷ್ಟೆ ?

ಮೋಹನ—ಕೇಳು, ಶಾಮೆ ! ನನಗೆ ಕೋಪವನ್ನೆಬ್ಬಿಸಬೇಡ-ಶಾರದೆಯೆನಗೆ ಸಹಧರ್ಮಿಣಿ, ಶಾರದೆಯೆನ್ನ ಸುಖದುಃಖಗಳಲ್ಲಿ ಭಾಗಿನಿ-ನಾನು ಜೀವದಿಂದಿರುವಾಗ ಶಾರದೆಯು ಎಂದೂ ಭಿಕಾರಿಣಿಯಾಗಿ ಬೀದಿಯಲ್ಲಿರಳು-ಬೀದಿಯಲ್ಲಿರಬೇಕಾದರೆ, ನಾನೂ

ಮಾತು ಪೂರೈಸಲಿಲ್ಲ. ಅಷ್ಟರೊಳಗೆ ಯಜಮಾನಿಯು ಬಂದು ಬಿಟ್ಟಳು. ರಮಣೀಮೋಹನನು ತಾಯಿಯನ್ನು ನೋಡದೆ ಅಲ್ಲಿಂದ ಹೊರಟು ಹೋದನು.

ಅವನು ಹೇಳಿದಾ ಕಡೆಯ ಮಾತುಗಳು ಉಚ್ಚಕಂಠದಲ್ಲಿ ಹೇಳಿದನು. ಅವು ಶಾರದೆಯ ಕಿವಿಗೂ ಮುಟ್ಟಿದುವು; ಅವಳು ಹಸಿವೂ ಬಾಯಾರಿಕೆಗಳನ್ನೆಲ್ಲಾ ಮರೆತುಬಿಟ್ಟಳು.

ಶಾಮೆಯು ಮನಸ್ಸಿನಲ್ಲಿ, "ಇಷ್ಟು ದಿನ "ಶಾಮಾತಾಯಿ" ಯಾಗಿದ್ದು ಈಗ "ಶಾಮೆ" ಯಾದೆನು" ಎಂದು ಭಾವಿಸಿಕೊಂಡಳು. "ಆ ಸತದೃಷ್ಟಿಗೆ ಮನೆಯಲ್ಲಿ ಸ್ಥಳವೇಕೆ ಕೊಟ್ಟೆನೋ" ಎಂದಂದುಕೊಂಡಳು.

ಹದಿನೆಂಟನೆಯ ಪರಿಚ್ಛೇದ.

ಆ ದಿನವೆಲ್ಲಾ ಮನೆಯವರೆಲ್ಲರಿಗೂ ಅನ್ನಾಹಾರವಿಲ್ಲ-ಹುಡುಗನು ಊಟಮಾಡಲಿಲ್ಲವಾಗಿ ತಾಯಿಯೂ ಊಟಮಾಡಳು. ಯಜಮಾನನಿಗೆ ಊಟವಿಲ್ಲದೆ ದಾಸಿದಾಸಿಯರಿಗೂ ಬಾಯಿಗೆ ತುತ್ತೆತ್ತಲಿಲ್ಲ.

ವ್ಯಾಪಾರವು ಗುರುತರವಾಗುತ ಬಂದಿತು. ವಾಮೆಗದು ಗೊತ್ತಾಯಿತು-ಆದರೆ ಅವಳೇನನ್ನು ಮಾಡಲಾಪಳು ? ಮೋಹನನು ನೀರದೆಯನ್ನು ಮದುವೆಯಾಗಕೂಡದು. ಮದುವೆಯಾಗುವ ಮಾತು ಹಾಗಿರಲಿ-ಪ್ರಕೃತ ಸ್ಥಿತಿಯನ್ನು ಯೋಚಿಸಿ ನೋಡಿದರೆ, ಹುಡುಗಿಯನ್ನು ಮನೆಯಲ್ಲಿಟ್ಟುಕೊಳ್ಳುವುದೂ ಕರ್ತವ್ಯವಾಗಿ ತೋರುಬರಲಿಲ್ಲ-ನೀರದೆಯನ್ನು ಕಣ್ಣುಮರೆ ಮಾಡುವುದು ಹೊರ್ತು ಉಪಾಯಾಂತರವು ತೋರಲಿಲ್ಲ-ಹಾಗೆ ಮಾಡುವುದು ರಗಳೆಗೆ ಕಾರಣವಾಗುತ್ತದು. ವಾಮೆಯು ಎಷ್ಟೊಂದು ಯೋಚಿಸಿದರೂ ಕೂಲವು ಸಿಗದು.

ಯಜಮಾನಿಗಿರುವ ಬಲವೆಲ್ಲಾ-ತರ್ಜನೆ, ಗರ್ಜನೆ-ಅದೂ ಕಡಿಮೆಯಾಗಲಿಲ್ಲ. ಭೂಮಿಯು ಕಾಲಿಗೆ ಕೊನೆಗಾಣುವಂತೆ ಅವಳ ತರ್ಜನಗರ್ಜನೆಗಳೂ ಕೊನೆಗಂಡುವು-ಮನೋವ್ಯಥೆಯಿಂದಲೂ, ಅನಾಹಾರದಿಂದಲೂ ಯಜಮಾನಿಯು ಪರಿಶ್ರಾಂತೆಯಾದಳು.

ವಾಮೆಯು ಬಂದು ಸಮಾಧಾನಗೊಳಿಸಲಾರಂಭಿಸಿದಳು. ಯಜಮಾನಿಯು, "ನನ್ನ ಸಮಾಧಾನದಿಂದಾಗುವುದೇನು, ವಾಮೆ ? ಸಂಸಾರಕ್ಕೆ ಏಕಮಾತ್ರ ಅವಲಂಬನವಾದವನು ಅವಿಧೇಯನಾದರೆ ನನಗೆ ಸಮಾಧಾನವನ್ನು ಹೇಳುವುದರಿಂದ ಪ್ರಯೋಜನವೇನು ?" ಎಂದು ಹೇಳಿ ಮುಖಕ್ಕೆ ಸೆರಗನ್ನು ಮುಚ್ಚಿಕೊಂಡು ಅತ್ತಳು. ವಾಮೆಯು "ಹಾಗೆ ಹೇಳಕೂಡದು-ಹುಡುಗನೆಂದೂ ನಿನಗೆ ಅವಿಧೇಯನಲ್ಲ-ಪುಣ್ಯವನ್ನು ಮಾಡಿದ್ದರೆ ಅಂತಹ ಮಗನು ಹುಟ್ಟುವನು" ಎಂದಳು.

ಯಜಮಾನಿ—ಅವಿಧೇಯನಲ್ಲವೆ ?

ವಾಮೆ—ನೀನು ಹೇಳಿದುದಾವುದಕ್ಕೆ ಅವನು ವಿಹಾರಿ ನಡೆದಿದ್ದಾನೆ ?

ಯಜಮಾನಿ—ಮಾತಿನಲ್ಲಿ ಅವಿಧೇಯನಾಗದಿದ್ದರೂ ಕಾರ್ಯದಲ್ಲಿ ಅವಿಧೇಯನಾಗಿದ್ದಾನೆ.

ವಾಮೆ—ಕಾರ್ಯದಲ್ಲಿಯೆ ? ಯಾವುದರಲ್ಲಿ, ಹೇಳು ?

ಯಜಮಾನಿ—ಹಾಳಾದಾ ನೀರದೆಯನ್ನು ಮದುವೆಯಾಗಲೆಳಸಲೇಕೆ ?

ವಾಮೆ—ಅವನು ಮದುವೆಯಾಗಿಲ್ಲ-ನೀನೊಪ್ಪಲಿಲ್ಲ—ಅವನೂ ಮದುವೆಯಾಗಲಿಲ್ಲ.

ಯಜಮಾನಿ—ನಾನು "ರಾಮ, ಕೃಷ್ಣ" ಎಂದು ಸುಖವಾಗಿದ್ದೆನು- ನನ್ನ ಸುಖವನ್ನು ನಷ್ಟಪಡಿಸಿದನು.

ಪಾಮೆ—ಮೋಹನನು ಏನನ್ನೂ ಮಾಡಲಿಲ್ಲ ; ಹಾಳಾದಾ ಹುಡುಗಿಯು ಮಾಡಿದಳು.

ಬಳಿಕ ಅವರಿಬ್ಬರೂ ಸೀರದೆಯ ಮೇಲೆ ಬಿದ್ದರು. ಬೈಗಳು ಬಾಕಿ ಉಳಿಯಲಿಲ್ಲ- ಆ ಅಭಿಧಾನಪತ್ರ (Dictionary-ನಿಘಂಟು) ಪೂರೈಸಿದ ಬಳಿಕ ಸೀರದೆಯನ್ನು ಸ್ಥಾನಾಂತರ ಮಾಡುವ ಬಗೆಯನ್ನು ಕುರಿತು ಆಲೋಚಿಸಿದರು- ಆಲೋಚನೆಯಾವದೂ ಸರಿಯಾಗಲಿಲ್ಲ- ಯಜಮಾನಿಯು ಪಾಮೆಯನ್ನು ಬಿಟ್ಟು ಸುಖಿ ಎಂಬ ಮತ್ತೊಬ್ಬ ಮುದಿದಾಸಿಯನ್ನು ಹಿಡಿದಳು- ದಾಸಿಯು, "ಯೋಚನೆಯೇಕೆ? ನಾನು ಸೀರಿಯನ್ನು ನಿಮಿಷದಲ್ಲಿ ಕಣ್ಣು ಮರೆ ಮಾಡುವೆನು" ಎಂದಳು.

ಯಜಮಾನಿಯು ಪ್ರಫುಲಿತೆಯಾಗಿ ಅವಳನ್ನು ಸಂಗಡ ಕರಕೊಂಡು ಮಹಡಿಯ ಮೇಲೆ ಹೋದಳು. ಅಲ್ಲರೂ ಇಲ್ಲದೆಹ ಕುಳಿತು ಬಹಳ ಹೊತ್ತು ಆಲೋಚಿಸಿದರು. ಆಲೋಚನೆಯಾದ ಬಳಿಕ ಕೆಳಗಿಳಿದುಬಂದು ಯಜಮಾನಿಯು, "ಇಂದು ರಾತ್ರಿಯೇ ರೈಲನ್ನು ಹತ್ತಿ ದೇಶಕ್ಕೆ ಹಿಂದಿರುಗಬೇಕು" ಎಂದು ಎಲ್ಲರಿಗೂ ತಿಳಿಸಿದಳು.

ಸಾಮಾನುಗಳನ್ನು ಕಟ್ಟುವ ಗದ್ದಲವು ಹತ್ತಿತು-ಹಾಸಿಗೆ, ಟ್ರಂಕುಗಳು, ಪೆಟ್ಟಿಗೆಗಳು, ಪಾತ್ರಪದಾರ್ಥಗಳು, ಬಟ್ಟೆಯ ಗಂಟುಗಳು, ಇವುಗಳನ್ನು ಕಟ್ಟುವ ಗದ್ದಲಕ್ಕೆ ಪ್ರಾರಂಭವಾಯಿತು- ಆ ಕೆಲಸದ ಮಧ್ಯೆ ಯಜಮಾನಿಯೂ ಪಾಮೆಯೂ ಮನಸ್ಸಿನಲ್ಲಿ "ಮೋಹನನು ಹೊರಡುವನೆ?" ಎಂದು ಅನೇಕತಡವೆ ಹೇಳಿಕೊಂಡರು.

ಮೋಹನನು ಅವಿಧೇಯನಲ್ಲ- ಹೊರಡುವುದಕ್ಕೆ ಸಿದ್ಧನಾದನು- ಆದರೆ ಸೀರದೆಯೊ? ಅವಳ ಯೋಚನೆಯು ಎಲ್ಲರಿಗೂ ಹುಟ್ಟಿ ಅವರು, ಪಾಮೆಯನ್ನೂ ಯಜಮಾನಿಯನ್ನೂ, "ಸೀರದೆಯು ಎಲ್ಲಿರುವಳು?" ಎಂದು ವಿಚಾರವನ್ನು ಮಾಡುವರು.

ಯಜಮಾನಿಯು, ತನ್ನ ಅಭಿಪ್ರಾಯವನ್ನು ಹೊರಗೆ ಬಿಡದೆ, "ನೋಡೋಣ, ಏನಾಗುವುದೊ?" ಎನ್ನುವಳು.

ಯಜಮಾನಿಗೆ ಮತ್ತೇನೋ ಅಭಿಪ್ರಾಯವಿರಬೇಕೆಂದು ಪಾಮೆಯು ತಿಳಿದುಕೊಂಡಳು. ಅವಳ ಅಭಿಪ್ರಾಯವು ಪಾಮೆಗೆ ಗೊತ್ತಾಗಲಿಲ್ಲ. ಸಾಯಂಕಾಲವಾಗುತ ಬಂದಿತು. ಆಗ ದಾಸಿ ಸುಖಿಯು ನೀರದೆಯ ಬಳಿ ಹೋಗಿ ಅವಳನ್ನೆಬ್ಬಿಸಿ ಮುಖವನ್ನು ತೊಳೆದುಕೊಳ್ಳಲು ನೀರನ್ನು ಕೊಟ್ಟು ಊಟವನ್ನು ಮಾಡಿಸಿದಳು. ಅವಳಿಗೆ ಸಬವಾಗಿ ಅನೇಕ "ಆಹಾ! ಊಹೂ!" ಗಳನ್ನು ಹೇಳಿ ಬಹಳ ಮರುಗಿದವಳಂತೆ ನಟಿಸಿದಳು. ನೀರದೆಯು ಕೇಳಿ ಕರಗಿಹೋದಳು ಅವಳು ಪ್ರಕೃತಸ್ಥೆಯಾದ ಬಳಿಕ, "ಇಂದು ನಾವೆಲ್ಲರೂ ದೇಶಕ್ಕೆ ಹೊರಡಬೇಕು" ಎಂದಳು

ನೀರದೆ–ನಾನೊ?

ಸುಖಿ–ನೀನೂ ಹೊರಡದೆ ಉಂಟೆ? ನೀನೂ ಹೊರಡುವೆ.

ನೀರದೆಯ ಮುಖವು ಪ್ರಫುಲ್ಲವಾಯಿತು. ಅವಳ ಮನಸ್ಸಿನಲ್ಲಿ, "ನೀರದೆಯು ನನ್ನ ಸಹಧರ್ಮಿಣಿ ನೀರದೆಯು ನನ್ನ ಸುಖದುಃಖಗಳಲ್ಲಿ ಭಾಗಿನಿ" ಎಂಬೀ ಮಾತುಗಳು ಚೆನ್ನಾಗಿ ನಾಟಿ ನೆಲಗೊಂಡಿದ್ದುವು. ಆ ಎರಡು ಮಾತುಗಳು ನಿರಂತರವಾಗಿ ಅವಳ ಹೃದಯದಲ್ಲಿ ಜಾಗರಿತವಾಗಿದ್ದುವು. ನೀರದೆಗಿಂತ ಮತ್ತಾರು ಹೆಚ್ಚು ಸುಖಿಯರು?

ಸುಖಿ–ಏನೆ! ನೀನು ದೇವರನ್ನು ನೋಡಿದೆಯಾ?

ನೀರದೆ–ಯಾವ ದೇವರು?

ಸುಖಿ–ಯಾವ ದೇವರೆ? ಬಾಬಾಜಿ ವೈಷ್ಣವನಾಥ ದೇವರು.

ನೀರದೆ–ಇಲ್ಲ–ನೋಡಿಲ್ಲ.

ಸುಖಿ–ಹೊರಡು–ಪ್ರಯಾಣಕ್ಕೆ ಮೊದಲು ನಾವಿಬ್ಬರೇ ಹೋಗಿ ದೇವರ ದರ್ಶನವನ್ನು ಮಾಡಿಕೊಂಡು ಬರೋಣ.

ನೀರದೆ–ಹೊತ್ತಾಗುವುದೇನೊ?

ಸುಖಿ–ಬಹಳ ಹೊತ್ತಿದೆ–ರಾತ್ರಿ ಹನ್ನೆರಡು ಘಂಟೆಗೆ ಗಾಡಿಯು ಹೊರಡುವುದು.

ನೀರದೆ–ರಾತ್ರಿ ದೇವರ ದರ್ಶನವನ್ನು ಮಾಡುವುದೆ?

ಸುಖಿ-ರಾತ್ರಿಯೇ ದೇವರಿಗೆ ಬಹಳ ಅಲಂಕಾರಗಳನ್ನು ಮಾಡು ತ್ತಾರೆ-ಆ ಸಮಯದಲ್ಲಿ ದರ್ಶನವನ್ನು ಮಾಡಿ, ಆವ ಇಷ್ಟಾರ್ಥವನ್ನು ಬೇಡಿಕೊಂಡರೂ ಅದು ಕೈಗೂಡುವುದು.

ಸೀರದೆಯು ತನ್ನ ಇಷ್ಟಾರ್ಥವೂ ಕೈಗೂಡುವುದೆ? ಎಂದು ಭಾವಿ ಸಿಕೊಂಡು ಎದ್ದಳು. ಇಬ್ಬರೂ ಸದ್ದಿಲ್ಲದೆ ಮನೆಯಿಂದ ಹೊರಟರು.

ಹತ್ತೊಂಭತ್ತನೆಯ ಪರಿಚ್ಛೇದ.

ದೇವರ ದರ್ಶನವನ್ನು ಮಾಡಿ ಸೀರದೆಯ ಹೃದಯವು ಭಕ್ತಿಯಿಂದ ಪೂರಿತವಾಯಿತು. ಅವಳು ದೇವರ ಮುಂದೆ ನಿಂತು, "ದೇವರೆ! ಅವನು ಸುಖಿಯಾಗಿರಲಿ!" ಎಂದು ಕಾಯಮನೋವಾಕ್ಕುಗಳಿಂದ ಪ್ರಾರ್ಥಿಸಿದಳು. ಆ "ಅವನು" ಆರು? ರಮಣೀಮೋಹನನನ್ನು ಬಿಟ್ಟರೆ ಸೀರದೆಗೆ ಬೇರೆ ಎರಡನೆಯ "ಅವನು" ಪ್ರಪಂಚದಲ್ಲಿಲ್ಲ.

ಸೀರದೆಯು ದೇವರಿಗೆ ಪ್ರಣಾಮವನ್ನು ಮಾಡಿ ಎದ್ದು ನೋಡಿದಳು- ಪಾರ್ಶ್ವದಲ್ಲಿದ್ದ ಸುಖಿಯಿರಲಿಲ್ಲ. ಮಂದಿರದಲ್ಲಿ ನಾಲ್ಕುಕಡೆ ನೋಡಿ ದಳು-ಅವಳೆಲ್ಲಿಯೂ ಕಾಣಲಿಲ್ಲ. ಸೀರದೆಯು ಬೇಗನೆ ಬಾಗಿಲಿಗೆ ಬಂದಳು. ನಾನಾ ದೇಶಗಳ ಜನರು ಬಂದು ಹೋಗುವರು-ಸುಖಿಯು ಮಾತ್ರ ಕಾಣ ಲಿಲ್ಲ-ಪ್ರಾಕಾರದ ಸುತ್ತ ಹುಡುಕಿದಳು-ಎಲ್ಲಿಯೂ ಕಾಣಲಿಲ್ಲ. ಬಳಿಕ ಸೀರದೆಯು ಶ್ರಾಂತೆಯಾಗಿ ಮಂದಿರದ ಬಾಗಿಲಿಗೆ ಹತ್ತಿರ ಹೋಗಿ ಬತ್ತಿಟ್ಟು ಕುಳಿತುಕೊಂಡಳು, ಸುಖಿಯು ಮಂದಿರದೊಳಗೆ ತನ್ನನ್ನು ಹುಡುಕು ತ್ತಿರುವಳೆಂದು ತಿಳಿದುಕೊಂಡಳು. ಬಳಿಕ ಮಂದಿರದೊಳಗೆ ಹೋಗಲು ಪ್ರಯತ್ನಿಸಿದಳು; ಬಂದು ಹೋಗುತ್ತಿದ್ದ ಜನರ ಗುಂಪು ಅತಿಯಾಗಿದ್ದು ದರಿಂದ ಮುಂದುವರಿದು ಹೋಗಲಾಗಲಿಲ್ಲ-ಬಳಿಕ ಮನೆಗೆ ಹಿಂದಿರಿಗಿ ಹೋ ಗೋಣವೆ? ಎಂದು ಯೋಚಿಸಿದಳು-ಆದರೆ ಕತ್ತಲೆಯಲ್ಲಿ ಮನೆಗೆ ಹೋಗುವ ಹಾದಿಯು ಗೊತ್ತಾಗದು ಅದಲ್ಲದೆ ಒಬ್ಬಳೇ ಹೋಗುವುದು ಹೇಗೆ? ಸೀರ

ದೆಯು ಕಿಂಕರ್ತವ್ಯವಿಮೂಢೆಯಾಗಿ ನಾಲ್ಕೂಕಡೆ ನೋಡಿದಳು. ಯುವಪುರುಷನೊಬ್ಬನು ನಿಂತಿದ್ದುದನ್ನು ನೋಡಿದಳು ಅವನವಳನ್ನು ಕಂಡನು.

ಆ ಯುವಕನು ವೀರಭೂಮಿಯ ಪ್ರಾಂತ್ಯದೊಬ್ಬ ಜಮೀನುದಾರನ ಮಗನಾಗಿದ್ದನು-ಹೆಸರು ರತ್ನೇಶ್ವರ-ಅವನು ವಾಯುಪರಿವರ್ತನೆಗೆ ಸಲವಾಗಿ ಮಧುಪುರಕ್ಕೆ ಬಂದಿದ್ದನು-ವಿದ್ಯವಿಲ್ಲದ ಧನವಂತರಾದ ಯುವಕರ ರೀತಿ ನೀತಿ ಚರ್ಯೆಗಳು ಹೇಗೆ ಸಾಮಾನ್ಯವಾಗಿರುವುವೋ; ರತ್ನೇಶ್ವರನ ರೀತಿ ನೀತಿ ಚರ್ಯೆಗಳೂ ಹಾಗಿದ್ದುವು. ಅವನೊಬ್ಬ ಸ್ನೇಹಿತನನ್ನು ನೋಡಲು ಅಂದು ದೇವಗಢಕ್ಕೆ ಬಂದಿದ್ದನು-ದೇವರ ದರ್ಶನಕ್ಕೆ ಅಲ್ಲದಿದ್ದರೂ ಮಂದಿರವನ್ನು ನೋಡುವುದಕ್ಕೆ ಸಲವಾಗಿ ಬಂದಿದ್ದವನು ನೀರದೆಯನ್ನು ನೋಡಿದನು-ನೋಡಿ ಅವಳ ಭಾವಗತಿಕಗಳನ್ನು ಕಂಡು ಸಂಗಡ ಬಂದಿದ್ದವಳನ್ನು ಕಳೆದುಕೊಂಡಿದ್ದಳೆಂದು ತಿಳಿದವನಾಗಿ, "ಹೆಂಗಸೊಬ್ಬಳು ನಿನ್ನನ್ನು ಹುಡುಕುತಿದ್ದಳು" ಎಂದು ಹೇಳಿದನು.

ನೀರದೆಯು ಲಜ್ಜೆಯನ್ನು ಬಿಟ್ಟು ಉತ್ಸುಕದಿಂದ, "ಎಲ್ಲಿ?" ಎಂದಳು.

ಯುವಕ—ದೊಡ್ಡ ಮಾರ್ಗವಾಗಿ ಹೋಗುತ್ತಿದ್ದಳು. ನಾವು ಬಂಡಿಯಲ್ಲಿ ಹೋದರೆ ಅವಳು ಸಿಕ್ಕುವಳು.

ನೀರದೆಯು ಸ್ವಲ್ಪವೂ ಯೋಚಿಸದೆ-ಅವನನ್ನು ಬೆನ್ನಟ್ಟಿ ಹೋದಳು. ಅವರಿಬ್ಬರೂ ಮಂದಿರವನ್ನು ಬಿಟ್ಟು ಬೀದಿಗೆ ಬಂದರು-ಅಲ್ಲೊಂದು ಬಂಡಿಯು ಯುವಕನಿಗೆ ಸಲವಾಗಿ ಕಾದು ನಿಂತಿದ್ದಿತು. ಯುವಕನು ನೀರದೆಯನ್ನು ಬಂಡಿಯಲ್ಲಿ ಹತ್ತಿಸಿ, ತಾನು ಕೋಚವಾನನು ಕುಳಿತುಕೊಳ್ಳುವ ಸ್ಥಳದಲ್ಲಿ ಕುಳಿತುಕೊಂಡನು-ಬಂಡಿಯು ನಕ್ಷತ್ರವೇಗದಿಂದ ಹೊರಟಿತು.

ಒಂದು ಘಂಟೆಯ ಹೊತ್ತಿನಲ್ಲಿ ಬಂಡಿಯು ವೈದ್ಯನಾಥದ ಜಂಕಷ ಬಳಿ (Junction -ಮೂರು ನಾಲ್ಕು ಕಡೆಗಳಿಂದ ಬಂಡಿಗಳು ಬಂದು ಸೇರುವ ಸ್ಥಳ) ಬಂದಿತು. ಯುವಕನು ಕೋಚುಬಾಕ್ಸಿಂದಿಳಿದು ಬಂದು ಬಂಡಿಯ ಬಾಗಿಲನ್ನು ತೆರೆದನು-ಆಗ ನಿಲ್ದಾಣಕ್ಕೆ (Station) ಬಂಡಿಗಳು ಬಂದಿದ್ದುವು. ನೀರದೆಯು "ನಾವೆಲ್ಲಿಗೆ ಬಂದೆವು?" ಎಂದು ವಿಚಾರಿಸಿದಳು.

ಯುವಕನು ಅದಕ್ಕೆ ಉತ್ತರವನ್ನು ಕೊಡದೆ, "ಬೇಗನೆ ಇಳಿ - ಹೊರಡುವ ಬಂಡಿಗಳು ಬಂದು ನಿಂತಿವೆ" ಎಂದನು

ನೀರದೆಯೇನೋ ಬಂಡಿಯಿಂದಿಳಿದಳು-ರತ್ನೇಶ್ವರನ ಸಂಗಡ ಹೋಗಲು ಬಂಡಿಯನ್ನು ಹತ್ತಲೊಪ್ಪಲಿಲ್ಲ-ರತ್ನೇಶ್ವರನು ಅವಳ ಕೈಯನ್ನು ಹಿಡಿಯಲು ಹೋದನು-ಆದಾಗಲಿಲ್ಲ. ನೀರದೆಯು ಕ್ರೋಧಗೊಂಡ ರಾಜಹಂಸಿಯಂತೆ ಕುತ್ತಿಗೆಯನ್ನು ಬೊಗ್ಗಿಸಿ ಸರಿದು ದೂರ ನಿಂತು, "ನೀನು ಸುಳ್ಳನ್ನು ಹೇಳಿ ನನ್ನನು ಇಲ್ಲಿಗೆ ಕರತಂದಿರುತ್ತಿ" ಎಂದಳು.

ಅವರವರಿಗೆ ವಾಗ್ವಾದವಾಗಿ ಗದ್ದಲಕ್ಕಿಟ್ಟಿತು—ನಿಲ್ದಾಣದ ಕರ್ಮಚಾರಿಗಳು ಬಂದು ನಿಂತರು-ರತ್ನೇಶ್ವರನು ಅಲ್ಲಿರುವುದು ಸರಿಯಲ್ಲವೆಂದು ಗುಂಪಿನಲ್ಲಿ ಅದೃಶ್ಯನಾದನು. ಕರ್ಮಚಾರಿಗಳು ನೀರದೆಯನ್ನು ಸುತ್ತಿಕೊಂಡರು-ಅವರು ಕೆಟ್ಟ ಯೋಚನೆಯಿಂದ ಅವಳನ್ನೊಂದು ತಟ್ಟಿಡದಲ್ಲಿಟ್ಟಿರಬೇಕೆಂದು ಗೊತ್ತುಮಾಡಿಕೊಂಡು ಅವಳನ್ನೊಯ್ದು ಒಂದು ಕತ್ತಲೆ ಮನೆಯಲ್ಲಿಟ್ಟು ಬೀಗವನ್ನು ಹಾಕಿದರು. ಆ ಮನೆಯು ನಿಲ್ದಾಣದೊಬ್ಬ ಕರ್ಮಚಾರಿಗೆ ಸೇರಿದುದು. ಅವನ ಪರಿವಾರದವರಾರೂ ಇರಲಿಲ್ಲ-ಅಲ್ಲೊಬ್ಬನೇ ವಾಸವಾಗಿದ್ದನು ನೀರದೆಯು ವ್ಯಾಘ್ರನ ಕಬಳದಿಂದ ರಕ್ಷಿತೆಯಾಗಿ ಸರ್ಪದ ವಿವರದಲ್ಲಿ ಪ್ರವೇಶಿಸಿದಂತಾಯಿತು.

ಇಪ್ಪತ್ತನೆಯ ಪರಿಚ್ಛೇದ.

ಸಾಯಂಕಾಲ ಕತ್ತಲೆಯಾಗುತ್ತ ಬಂದ ಬಳಿಕ ಯಜಮಾನಿಯು ಸಸಂಮಾನವಾಗಿ ನಿಲ್ದಾಣಾಭಿಮುಖರಾಗಿ ಪ್ರಯಾಣ ಮಾಡಿದಳು-ಕೆಲವು ಸಾಮಾನುಗಳೊಡನೆ ಅವಳ ಜನರು ಮೊದಲು ಅಲ್ಲಿಗೆ ಬಂದಿದ್ದರು-ಎಲರೂ ಬಂಡಿಯನ್ನು ಹತ್ತಿದರು-ಕತ್ತಲಲ್ಲಾರು ಯಾವ ಬಂಡಿಯಲ್ಲಿ ಕುಳಿತರೋ ರಮಣೀಮೋಹನನಿಗದು ಗೊತ್ತಾಗಲಿಲ್ಲ-ಅವನೊಬ್ಬನೇ ಒಂದು ಗಾಡಿಯಲ್ಲಿ ಕುಳಿತನು.

ದೇವಗಡವ ನಿಲ್ದಾಣಕ್ಕೆ ಬಂದ ಬಳಿಕ ನೀರದೆಯು ಬರಲಿಲ್ಲವೆಂದು ಮೋಹನನಿಗೆ ತಿಳಿಯಬಂದಿತು-ನೀರದೆಯು ಎಲ್ಲಿಗೆ ಹೋದಳು? ರಮಣೀಮೋಹನನು ಅದೇ ಬಂಡಿಯಲ್ಲಿ ಕುಳಿತು ಪುನಃ ಹಿಂದಕ್ಕೆ ಮನೆಗೆ ಹೋಗಿ ಮನೆಯನ್ನೆಲ್ಲಾ ಚೆನ್ನಾಗಿ ಹುಡುಕಿದನು. ನೀರದೆಯು ಸಿಗಲಿಲ್ಲ-ಪುನಃ ನಿಲ್ದಾಣಕ್ಕೆ ಬಂದನು-ಅಲ್ಲಿಯೂ ನೀರದೆಯಿರಲಿಲ್ಲ-ಅವನು ಉದ್ವಿಗ್ನಚಿತ್ತನಾಗಿ ಒಬ್ಬ ಸೇವಕನನ್ನು ಕುರಿತು, "ನೀರದೆಯು ಎಲ್ಲಿ?" ಎಂದು ವಿಚಾರಿಸಿದನು.

ಸೇವಕ—ಅವಳನ್ನು ಸುಖಿಯ ಸಂಗಡ ನೋಡಿದ್ದೆನು.

ಮೋಹನ—ಸುಖಿಯ ಸಂಗಡ? ಆವಾಗ?

ಸೇವಕ—ಸಾಯಂಕಾಲದಲ್ಲಿ.

ಮೋಹನ—ಎಲ್ಲಿ ನೋಡಿದ್ದೆ?

ಸೇವಕ—ನಾನು ಬಂಡಿಯನ್ನು ಸರಿಮಾಡಿಸಿಕೊಂಡು, ಅಂಗಡಿಯ ಬೀದಿಯಲ್ಲಿ ಬರುತ್ತಿದ್ದಾಗ ಅವರು ಅಂಗಡಿಯ ಬೀದಿಗಾಗಿ ಹೋಗುತ್ತಿದ್ದರು.

ಮೋಹನ—ಸುಖಿಯನ್ನು ಕರೆ ಹೇಳು.

ಸುಖಿಯು ಬಂದಳು-ನೀರದೆಯನ್ನು ಮಂದಿರದಲ್ಲಿ ಬಿಟ್ಟು ಅವಳು ನೆಟ್ಟಗೆ ನಿಲ್ದಾಣಕ್ಕೆ ಬಂದಿದ್ದಳು. ಈಗ ಕರೆಬಂದು ನಡುಗುತ್ತ ರಮಣೀಮೋಹನನೆದುರಿಗೆ ಬಂದು ನಿಂತಳು. ಅವಳು ತನ್ನ ಮೋಸವು ಹೊರಪಡಬೇಂದು ತಿಳಿದಿದ್ದವಳು ಈಗ ಕ್ರುದ್ಧಸಿಂಹನೆದುರಿಗೆ ಬಂದು ನಿಂತು, "ಎರಡು ರೂಪಾಯಿನ ಆಸೆಗೋಸ್ಕರ ಅಂತಹ ಕೆಲಸವನ್ನು ಮಾಡಿದೆನು?" ಎಂದೆಂದು ಕೊಂಡಳು.

ಮೋಹನ—ನೀರದೆ ಎಲ್ಲಿ?

ಸುಖಿ—ನಾನು-ನಾನು-

ಮೋಹನ—ನೀನೇ ಅವಳನ್ನು ಕರೆದುಕೊಂಡು ಹೋದವಳೆಂದು ಬಲ್ಲೆನು-ಅವಳನ್ನೆಲ್ಲಿ ಬಿಟ್ಟು ಬಂದೆ?

ಸುಖಿಯು, ಉಪಾಯಾಂತರವು ತೋರದೆ, "ಮಂದಿರದಲ್ಲಿ-" ಎಂದಳು.

ಮೋಹನನು ಅಲ್ಲಿ ನಿಲ್ಲದೆ ಬೇಗನೆ ಹೋಗಿ ಬಂಡಿಯನ್ನು ಹತ್ತಿದನು-ಆಗ ದಾಮೆಯು ಓಡಿ ಬಂದು, "ಮೋಹನ! ಯಜಮಾನಿಯು ನಿನ್ನನ್ನು ಕರೆಯುತ್ತಾಳೆ" ಎಂದಳು.

ಮೋಹನನು ಮೆಲ್ಲಮೆಲ್ಲನೆ ಬಂಡಿಯಿಂದಿಳಿದು ದಾಮೆಯನ್ನನುಸರಿಸಿ ಹೋದನು.

ಯಜಮಾನಿ—ಎಲ್ಲಿಗೆ ಹೋಗುತ್ತಿ?

ಮೋಹನನು ನಿಸ್ಸಂಕೋಚವಾಗಿ, "ನೀರದೆಯನ್ನು ಹುಡುಕಿಕೊಂಡು ಬರುವುದಕ್ಕೆ" ಎಂದನು.

ಯಜಮಾನಿ—ನಾನೊಬ್ಬಳೇ ಇರಲೆ?

ಮೋಹನ—ನಾಳೆಗಲೇ ಹಿಂದಿರಿಗಿ ಬರುವೆನು.

ಯಜಮಾನಿ—ಅದಾಗುವುದಿಲ್ಲ-ಗಾಡಿಯು ಹೊರಡುವುದಕ್ಕೆ ಸಾವಕಾಶವಿಲ್ಲ.

ಮೋಹನ—ಹಾಗಾದಿದ್ದರೆ ಮತ್ತೊಂದು ಗಾಡಿಯಲ್ಲಿ ಹೋಗುವೆನು.

ಯಜಮಾನಿ—ಆಗದು, ಇದೇ ಗಾಡಿಯಲ್ಲಿ ಹೋಗಬೇಕು.

ದಾಮೆಯು ಯಜಮಾನಿಯ ಕಿವಿಯಲ್ಲಿ "ಅಷ್ಟೊಂದು ಖಂಡಿತವಾಗಿ ಒತ್ತಾಯಮಾಡಲಾಗದು-ಚಿಕ್ಕ ಹುಡುಗನಲ್ಲ-ಎದುರು ಬಿದ್ದರೆ-?" ಎಂದಳು.

ಆದರೆ ಅವನು ಎದುರುಬೀಳಲಿಲ್ಲ-ಮೋಹನನು ತಾಯಿಯ ಅಪ್ಪಣೆಯನ್ನು ಮೀರಲಿಲ್ಲ-ಮೌನವಾಗಿ ನಿಂತಿದ್ದನು. ಸ್ವಲ್ಪ ಹೊತ್ತಾದ ಬಳಿಕ, "ಅಮ್ಮಾ!" ಎಂದು ಕರೆದನು.

ಯಜಮಾನಿ—ಏನು?

ಮೋಹನ—ನೀರದೆಯು ಹುಡುಗಿ-ಈ ವಿದೇಶದಲ್ಲಿ-

ಯಜಮಾನಿ—ಭಿಕ್ಷುಕರಿಗೆ ವಿದೇಶವಾವದು? ಸ್ವದೇಶವಾವದು?

ಮೋಹನ—ಅವಳೆಲ್ಲಿಗೆ ಹೋಗಲಾಪಳು?

ಯಜಮಾನಿ—ಎಲ್ಲಿದ್ದಳೋ ಅಲ್ಲಿಗೆ ಹೋಗುವಳು.

ಮೋಹನ—ಪ್ರಪಂಚದಲ್ಲಿ ಅವಳಿಗೆ ಬೇರೆ ಸ್ಥಳವಿಲ್ಲ-

ಯಜಮಾನಿ—ತೀರ್ಥಕ್ಷೇತ್ರಗಳಲ್ಲಿ ಭಿಕ್ಷಕ್ಕೆ ಕಡಿಮೆಯಿಲ್ಲ-

ಮೋಹನನು ನಿರುತ್ತರನಾಗಿ ನಿಂತನು-ಆದರೆ ಹೃದಯದ ಅಂತಸ್ಥಳವನ್ನು ಭೇದಿಸಿಕೊಂಡೊಂದು ದೀರ್ಘನಿಶ್ವಾಸವು ಹೊರಟಿತು.

ಆ ಸಮಯದಲ್ಲಿ ಪೂರ್ವಪರಿಚಿತನಾಗಿದ್ದ ಸನ್ಯಾಸಿಯು ಅಲ್ಲಿಗೆ ಬಂದನು-ಅವನು ತೀಕ್ಷ್ಣದೃಷ್ಟಿಯಿಂದ ಎಲ್ಲಾ ಕಡೆಯೂ ನೋಡಿದನು ; ನೀರದೆಯು ಎಲ್ಲಿಯೂ ಕಾಣಲಿಲ್ಲ-ಒಂದೊಂದು ಗಾಡಿಗೂ ಹೋಗಿ ಪರೀಕ್ಷಿಸಿ ನೋಡಿದನು. ನೀರದೆಯು ಕಾಣಲಿಲ್ಲ.

ಅಲ್ಲೆಲ್ಲರೂ ಸನ್ಯಾಸಿಯ ಕೆಲಸವನ್ನು ನೋಡಿದರು ಸನ್ಯಾಸಿಯಾರನ್ನು ಹುಡುಕುತ್ತಿದ್ದನೆಂದು ಯಜಮಾನಿಗೆ ಗೊತ್ತಾಯಿತು. ಅವಳು ಸುಖಿಯ ಕಿವಿಯಲ್ಲಿ "ಸನ್ಯಾಸಿಯು ನೀರದೆಯನ್ನು ಹುಡುಕುತ್ತಿದ್ದಾನೆ-ಹುಡುಗಿಯು ಸಿಕ್ಕರೆ ಮಹಾಕಾಳಿಗವಳನ್ನು ಬಲಿ ಕೊಡುವನು ; ನೀನು ಹೋಗಿ, ನೀರದೆಯು ಮಂದಿರದಲ್ಲಿದ್ದಾಳೆಂದು ಹೇಳು" ಎಂದು ಏಕಾಂತವಾಗಿ ಹೇಳಿದಳು.

ಸುಖಿ-ಎಲ್ಲವನ್ನೂ ವಿವರವಾಗಿ ಹೇಳಲಿ ?

ಯಜಮಾನಿ--ಅಹುದು ಕಣೆ, ಅಹುದು.

ಸುಖಿಯು ಹೋಗಿ ಸನ್ಯಾಸಿಗೆ ಸಂಗತಿಯನ್ನು ತಿಳಿಸಿದಳು. ಸನ್ಯಾಸಿಯು ಕಾಲವಿಳಂಬ ಮಾಡದೆ ಮಂದಿರಕ್ಕೆ ಓಡಿದನು. ನಿಲ್ದಾಣೆಯಿಂದ ಮಂದಿರಕ್ಕೆ ಹೋಗಬೇಕಾದರ ಅಂಗಡಿ ಬೀದಿಯಲ್ಲಿ ಹೋಗಬೇಕು. ಸನ್ಯಾಸಿಯು ಅಂಗಡಿ ಬೀದಿಯಲ್ಲಿ ಹೋಗುತ್ತಿದ್ದಾಗ ಒಂದು ಗಾಡಿಯು ಅತಿ ವೇಗವಾಗಿ ಅವನ ಪಾರ್ಶ್ವದಲ್ಲಿ ಹೋಯಿತು-ಗಾಡಿಯಲ್ಲೊಬ್ಬ ಹೆಂಗಸುಮಾತ್ರ ಕುಳಿತಿದ್ದುದನ್ನು ನೋಡಿದನು. ಅಂಗಡಿಗಳ ಬೆಳಕಿನಿಂದ ಗಾಡಿಯೊಳಗೆ ಚೆನ್ನಾಗಿ ಕಾಣುವುದು ಆ ಬೆಳಕಿನಿಂದ ಸನ್ಯಾಸಿಯು ಗಾಡಿಯಲ್ಲಿದ್ದವಳನ್ನು ನೀರದೆಯೆಂದು ಗುರ್ತಿಸಿದನು. ತನ್ನ ಶಕ್ತಿಯಿದ್ದಷ್ಟು ಗಾಡಿಯ ಹಿಂದೆ ಓಡಲಾರಂಭಿಸಿದನು_ಬಹಳದೂರ ಬೆನ್ನಟ್ಟಿಹೋದನು. ಕಡೆಗೆ ಕ್ಲಾಂತನಾದನು ಗಾಡಿಯು ಮುಂದಕ್ಕೆ ಹೊರಟುಹೋಯಿತು. ಸನ್ಯಾಸಿಯು ಬಿಡಲಿಲ್ಲ-ಗಾಡಿಯು ಹೋದ ಹಾದಿಗೊಂಡುಹೋದನು.

ಅದೇ ಹಾದಿಗೊಂಡುಹೋಗಿ ಸನ್ಯಾಸಿಯು ಕಡೆಗೆ ವೈದ್ಯನಾಥದಜಂಕಷನಿಗೆ ಮುಟ್ಟಿದನು-ಅಲ್ಲಿ ವಿಚಾರಿಸಿದುದರಲ್ಲಿ ಆರೋ ಒಬ್ಬನು ಒಬ್ಬ

ಹುಡುಗಿಯನ್ನು ಮರುಳ್ಗೊಳ್ಳಿಸಿ ಕರತಂದಿದ್ದನೆಂದು ತಿಳಿಯಬಂದಿತು. ಸನ್ಯಾಸಿಯು ಆ ಹುಡುಗಿಯು ನೀರಡೆಯಾಗಿರಬೇಕೆಂದು ಸ್ಥಿರಮಾಡಿಕೊಂಡನು.

ಸನ್ಯಾಸಿಯು ಸಹಸ್ರಪ್ರಯತ್ನಗಳನ್ನು ನಡಿಸಿದರೂ ನೀರಡೆಯಿದ್ದ ಸ್ಥಳವು ಗೊತ್ತಾಗಲಿಲ್ಲ-ತಂತ್ರಿಗಳಾದ ನಿಲ್ದಾಣದ ಕರ್ಮಚಾರಿಗಳು ಅವಳನ್ನು ಬಿಟ್ಟಿದ್ದ ಸ್ಥಳವು ಯಾರಿಗೂ ಗೊತ್ತಾಗತಕ್ಕ ಸ್ಥಳವಾಗಿರಲಿಲ್ಲ-ಸನ್ಯಾಸಿಯು ಎಷ್ಟೊಂದು ಹುಡುಕಿದರೂ ನೀರಡೆಯು ಸಿಗಲಿಲ್ಲ.

ಆಗ ರಾತ್ರಿ ಎರಡು ಪ್ರಹರಗಳಾಗಿದ್ದುವು-ಸನ್ಯಾಸಿಯು ಸ್ಟೇಷನ್ನಿನ ಬಳಿ ಒಂದು ಮರದ ಕೆಳಗೆ ಆಶ್ರಯವನ್ನು ಗ್ರಹಣಮಾಡಿದನು. ಸನ್ಯಾಸಿಗೆ ಅಗ್ಗಿಷ್ಟಿಕೆಯಿಲ್ಲ-ಶಿಷ್ಯನೂ ಇಲ್ಲ-ಒಬ್ಬನೇ ಕತ್ತಲಲ್ಲಿ ಕುಳಿತಿದ್ದನು.

ರಾತ್ರಿಯು ಗಭೀರ--ಎಲ್ಲವೂ ನಿಸ್ತಬ್ಧ. ಆಕಾಶವು ಭೂಮಿಯೊಂದಿಗೆ ಮೆಲ್ಲಮೆಲ್ಲನೆ ಮಾತಾಡುವುದು-ನಕ್ಷತ್ರಗಳು ಪೃಥ್ವಿಯ ದುಷ್ಕೃತ್ಯಗಳನ್ನು ಗಣನೆಮಾಡುತ್ತಿದ್ದುವು-ಮರಗಳು [illegible]ಸುತ್ತ ಮನುಷ್ಯನಿಗೆ ಪಾಪದಿಂದ ವಿರತನಾಗೆಂದು ಉಪದೇಶವನ್ನು ಮಾಡುತ್ತಿದ್ದುವು ಆ ಸಮಯದಲ್ಲಿ ಆ ನೈಶನಿಸ್ತಬ್ಧತೆಯನ್ನು ಭಂಗಮಾಡಿ ರಮಣಿಯ ಕಂಠದಿಂದ ಹೊರಟ ಒಂದು ಆರ್ತನಾದವು ಕೇಳಿತು-ಸನ್ಯಾಸಿಯು ಚಕಿತನಾಗಿ ಎದ್ದು ನಿಂತನು-ನಿಂತವನು ಆರ್ತನಾದವು ಬರುತ್ತಿದ್ದ ಕಡೆ ಓಡಿಹೋದನು.

ಪುನಃ ಆರ್ತನಾದ! ಆರ್ತನಾದವು ಒಂದು ಮನೆಯೊಳಗಿನಿಂದ ಹೊರಡುವಂತೆ ತಿಳಿಯಬಂದಿತು. ಸನ್ಯಾಸಿಯು ಮುಂದುವರಿದುಹೋಗಿ ನೋಡಿದನು-ಮನೆಯ ಬಾಗಿಲನ್ನು ಹಾಕಿತ್ತು. ಒಳಗೆ ಪ್ರವೇಶಕ್ಕೆ ಬೇರೆ ಮಾರ್ಗವಿಲ್ಲ-ನಾಲ್ಕು ಕಡೆ ಎತ್ತರವಾದ ಗೋಡೆ-ಎತ್ತರವಾದಾ ಗೋಡೆಯೂ ಸನ್ಯಾಸಿಯ ಗತಿ ರೋಧಮಾಡಲಾರದೆ ಹೋಯಿತು ; ಅವನತಿ ಸುಲಭವಾಗಿ ಗೋಡೆಯನ್ನು ಹತ್ತಿ ಒಳಗೆ ಅಂಗಳಕ್ಕೆ ಇಳಿದನು-ಅಂಗಳದಲ್ಲಿ ಬಹಳ ಕಸವು ತುಂಬಿದ್ದಿತು ; ಅಲ್ಲಿ ಎರಡು ಮನೆಗಳು-ಒಂದರಲ್ಲಿ ಬೆಳಕಿದ್ದಿತು-ಅಲ್ಲಾರೂ ಇರಲಿಲ್ಲ-ಮತ್ತೊಂದು ಮನೆಯ ಬಾಗಿಲು ಮುಚ್ಚಿ ಒಳಗಿನಿಂದ ಅಗಣಿಯು ಹಾಕಿದ್ದಿತು-ಸನ್ಯಾಸಿಯು ಕದವನ್ನು ಕಾಲಿನಿಂದೊದ್ದನು. ಕದವು ಮುರಿದುಹೋಯಿತು-ಸನ್ಯಾಸಿಯು ಒಳಗೆ ಹೋದನು.

ಒಳಗೆ ಹೋಗಿ ನೋಡಿದನು ಮೂರುನಾಲ್ಕು ನರಕಾಯಪಶುಗಳು ಒಬ್ಬ ಹುಡುಗಿಯ ಮೇಲೆ ಅತ್ಯಾಚಾರವನ್ನು ನಡೆಸಲು ಪ್ರಯತ್ನಪಡುತ್ತಿದ್ದರು. ಆದರೆ ಅವರಲ್ಲಾರೂ ಹುಡುಗಿಯ ಅಂಗಸ್ಪರ್ಶಮಾಡಲು ಸಮರ್ಥರಾಗಿರಲಿಲ್ಲ-ಹುಡುಗಿಯು ಗೋಡೆಯ ಮೂಲೆಯಲ್ಲಿ ನಿಂತು ಒಂದು ಹಿತ್ತಾಳೆಯ ಕೊಡವನ್ನು ವಲಯಿಸಿಕೊಂಡು ದೊಡ್ಡದೊಂದು ಕಬ್ಬಿಣದ ಸಲಾಕಿನಿಂದಾ ದುರಾತ್ಮರನ್ನು ದೂರಮಾಡುತ್ತಿದ್ದಳು.

ಸನ್ಯಾಸಿಯು ಹುಡುಗಿಯನ್ನು ಗುರುತಿಸಿದನು. ಆರನ್ನು ನೋಡಬೇಕೆಂದು ಹುಡುಕುತ್ತಿದ್ದನೋ ಆ ಹುಡುಗಿಯು ಅದೇ ನೀರದೆಯಾಗಿದ್ದಳು-ಆವ ನೀರದೆಯು ಮುದುಕಿಯಿಂದಲೂ ಪೋಲೀಸ ದರೋಗನಿಂದಲೂ ಸಿಡಿದೋಡಿದಂತೆ ಹಣ್ಣುಗಳನ್ನು ತಿಂದು ಉಪವಾಸದಿಂದ ಸಾಯುತ್ತಿದ್ದಳೋ ಅಂದಾ ನೀರದೆಯು ತನ್ನ ಧರ್ಮವನ್ನು ಕಾಪಾಡಿಕೊಳ್ಳಲು ಸಲಾಕಿಯನ್ನು ತಿರುಗಿಸುತ್ತ ಮೂರು ನಾಲ್ಕು ನರಪಶುಗಳನ್ನು ದೂರಮಾಡುತ್ತಿದ್ದಳು-ಬಹಳ ಹೊತ್ತಾಗಿ ಸೆಣಸಿ ಆಯಾಸವಾಗುತ್ತ ಬಂದಳು ಮೂರ್ಛೆಬೀಳುವದಕ್ಕೆ ವಿಳಂಬವಿರಲಿಲ್ಲ.

ನೀರದೆಯನ್ನುದ್ಧಾರಮಾಡಲು ಸನ್ಯಾಸಿಯು ಹೆಚ್ಚು ಪ್ರಯತ್ನಪಡಬೇಕಾಗಿರಲಿಲ್ಲ-ಆಕ್ರಮಣಮಾಡುತ್ತಿದ್ದವರು ಭಯದಿಂದ ಅವನನ್ನು ನೋಡಿದರು-ಬಾಗಿಲನ್ನೊದೆದು ಬಾಗಿಲಲ್ಲಿ ದೀರ್ಘಕಾಯವುಳ್ಳ ಜಟಾಜೂಟಧಾರಿಯಾದ ಸನ್ಯಾಸಿಯ ಮೂರ್ತಿಯನ್ನು ಕಂಡು ಅವರು ನೀರದೆಯನ್ನು ಬಿಟ್ಟು ದೂರ ಸರಿದುನಿಂತರು-ಸನ್ಯಾಸಿಯು ಅಚೈತನ್ಯಪ್ರಾಯವಾಗಿದ್ದ ಹುಡುಗಿಯನ್ನು ಎತ್ತಿಕೊಂಡು ಮನೆಯಿಂದ ಹೊರಟುಹೋದನು.

ಇಪ್ಪತ್ತೆರಡನೆಯ ಪರಿಚ್ಛೇದ.

ರಮಣೀಮೋಹನನು ತಾಯಿಯ ಆಜ್ಞೆಯನ್ನು ಮೀರಲಿಲ್ಲ-ಮನೆಗೆ ಹಿಂದಿರುಗಿ ಬಂದನು. ಮನೆಯು ಶೂನ್ಯ-ಕತ್ತಲೆ-ಆವ ಬೆಳಕನ್ನು ನೀರದೆಯು ಬೀರುತ್ತಿದ್ದಳೋ ಆ ಬೆಳಕು ಅಳಿಸಿಹೋಗಿದ್ದಿತು.

ತಾಯಿ ಮಗನಿಗೆ ಮೊದಲಿದ್ದ ಸದ್ಭಾವವಿಲ್ಲ-ರಮಣೀಮೋಹನನು ಮೊದಲಿನಂತೆ ತಾಯಿಯ ತೊಡೆಯ ಮೇಲೆ ಮಲಗುತ್ತಿರಲಿಲ್ಲ-ತಾಯಿಯೂ ಮೊದಲಿನಂತೆ ಸ್ನೇಹಪೂರ್ಣವಾಗಿ "ಮೋಹನ" ಎಂದು ಕರೆಯುತ್ತಿರಲಿಲ್ಲ ವಾಮೆಯೂ ಮೊದಲಿನಂತೆ ಸುರಮಣಿಗಳಿಗೆ ಆಶ್ರಯಸ್ಥಾನವಾಗಿ "ವಾಮಾತಾಯಿ" ಯಾಗಿರಲಿಲ್ಲ-ಅವಳು ಮಿಕ್ಕವರಂತೆ ದಾಸಿಯಾಗಿ ಮಾತ್ರ ಇದ್ದಳು.

ದಿನಗಳು ಕಳೆದ ಹಾಗೆಲ್ಲಾ ರಮಣೀಮೋಹನನಿಗೆ ಮನೋವ್ಯಥೆಯು ಹೆಚ್ಚಾಗುತ್ತ ಬಂದಿತು. ಅವನು ಮನಸ್ಸಿನಲ್ಲಿ, "ನೀರದೆಯು ಅನ್ನವಿಲ್ಲದೆ ಅಲ್ಲಲ್ಲಿ ತಿರುಗುತ್ತಿರುವಳು!" ಎಂದು ಭಾವಿಸಿಕೊಳ್ಳುವನು-ಒಂದೊಂದು ಸಮಯದಲ್ಲಿ, "ನೀರದೆಯು ತನ್ನನ್ನೆದುರು ನೋಡುತ್ತಿರುವಳು; ತಾನು ಹೋಗದಿದ್ದರೆ ಜೀವದಿಂದಿರಳು; ನೀರದೆಯನ್ನು ಹೊಂದದಿದ್ದರೆ ತಾನೂ ಉಳಿಯುವುದಿಲ್ಲ" ಎಂದು ಭಾವಿಸಿಕೊಳ್ಳುವನು-ಉತ್ತರ ಕ್ಷಣದಲ್ಲಿ, "ಇವರೆ ಎಲ್ಲಿಗೆ ಹೋದರೆ ನೀರದೆಯನ್ನು ಕಾಣುವೆನು? ನೀರದೆಯು ಈಗಲೂ ದೇವಗಡದಲ್ಲಿರುವಳೆ?" ಎಂದು ಯೋಚಿಸಿ, ಬಳಿಕ, "ನೀರದೆಯು ಭೂಮಿಯ ಮೇಲೆ ಎಲ್ಲಿದ್ದರೂ ಹುಡುಕಿ ಕರೆತರುವೆನು; ಹುಡುಕುವುದಕ್ಕೆ ಮನೆಯನ್ನು ಬಿಟ್ಟು ಹೋಗಬೇಕು; ಮನೆಯನ್ನು ಬಿಟ್ಟು ಹೋಗಲು ಏನನ್ನು ಮಾಡಲಿ; ಹೋಗಲು ತಾಯಿಯು ಅಪ್ಪಣೆಯನ್ನು ಕೊಡಳು-ಅವಳ ಅನುಮತಿಯಿಲ್ಲದೆ ಹೋಗಕೂಡದು-ತಾಯಿಗೆ ಹೇಳಿ ಕಲಿಕತ್ತೆಗೆ ಹೋಗಬಹುದು. ಅಲ್ಲಿಂದಾರಿಗೂ ಹೇಳದೆ ದೇವಗಡಕ್ಕೆ ಹೋಗಬಹುದು. ಛಿ! ಛಿ! ತಾಯಿಗೆ ವಂಚಿಸುವುದೆ? ಹಾಗೆಂದೂ ಮಾಡೆನು-ಹಾಗಾದರೆ, ಮತ್ತೇನನ್ನು ಮಾಡಲಿ? ಒತ್ತಟ್ಟು ತಾಯಿ, ಬೇರೊತ್ತಟ್ಟು ನೀರದೆ-ಇವರಿಬ್ಬರಲ್ಲಾರು ದೊಡ್ಡವರು? ತಾಯಿಯು ಹೆಚ್ಚೊ? ಅಥವಾ ನೀರದೆಯು ಹೆಚ್ಚೊ? ತಾಯಿಯೇ ಹೆಚ್ಚು-ಸಹಸ್ರತಡವೆಗೂ ತಾಯಿಯೇ ಹೆಚ್ಚು. ಲಕ್ಷ ನೀರದೆಯರು ಹೋಗಲಿ-ಕೋಟಿ ರಮಣೀಮೋಹನರ ಹೃದಯಗಳು ಚೂರ್ಣಿತವಾಗಲಿ; ತಂದೆ ತಾಯಿಯರ ಕಣ್ಣಿನಿಂದೊಂದು ತೊಟ್ಟು ನೀರನ್ನು ಬೀಳಿಸಲಾಗದು" ಎಂದು ಭಾವಿಸಿಕೊಳ್ಳುವನು.

ರಮಣೀಮೋಹನನು ತಾಯಿಯನ್ನು ಅಳುಸಕೂಡದೆಂದೂ ಅವಳಿಗೆ ವ್ಯಥೆಯನ್ನುಂಟುಮಾಡಕೂಡದೆಂದೂ ಸ್ಥಿರಮಾಡಿಕೊಂಡನು-ಅವನ ಪ್ರಾಣವು ರುದ್ಧವಾಗಿದ್ದ ಯಾತನೆಯಿಂದ ವ್ಯಥಿತವಾಗಲಾರಂಭಿಸಿತು-ಆದರೂ ಒತ್ತಡವೆಯಾದರೂ ಸೀರದೆಯ ವಿಚಾರವನ್ನು ಕುರಿತು ಬಾಯಿಂದುಚ್ಚರಿಸನು.

ಸೀರದೆಯ ವಿಚಾರವನ್ನು ಕುರಿತು ಬಾಯಿಂದಾರೂ ಹೇಳರು. ಆದರೆ ಎಲ್ಲರ ಮನಸ್ಸಿನಲ್ಲಿಯೂ ಅದು ಜಾಗರಿತವಾಗಿದ್ದಿತು. ಸೀರದೆಯ ಮಾತನ್ನು ಕುರಿತು ವಾಮೆಯು ಯಜಮಾನಿಗೆ ಹೇಳಲಿಲ್ಲ-ಯಜಮಾನಿಯೂ ಅದನ್ನು ಕುರಿತು ವಾಮೆಗೆ ಹೇಳಲಿಲ್ಲ-ಸೀರದೆಯ ವಿಷಯವು ಕ್ರಮವಾಗಿ ಆ ಮನೆಯ ಸಂಸಾರದಿಂದ ಅಳಿಸಿ ಹೋಯಿತು.

ಸ್ವಲ್ಪ ಕಾಲವಾದ ಬಳಿಕ ರಮಣೀಮೋಹನನು ಒಂದಾನೊಂದು ದಿನ ತಾಯಿಯನ್ನು ಕುರಿತು, "ಅಮ್ಮ! ಒತ್ತಡವೆ ಸ್ವಲ್ಪನು ದೇಶಕ್ಕೆ ಹೋಗಿ ಬರಬೇಕೆಂದು ಆಶೆಯಾಗುತ್ತದೆ" ಎಂದು ಹೇಳಿದನು.

ಯಜಮಾನಿಯು ಚಮಕಿತಯಾಗಿ, "ಎಲ್ಲಿಗೆ? ದೇವಗಡಕ್ಕಲ್ಲವೆ?" ಎಂದಳು.

ರಮ—ಇಲ್ಲ ದೇವಗಡಕ್ಕೆ ಪುನಃ ಹೋಗೆನು.

ತಾಯಿ—ಅದೇಕೆ?

ರಮ—ನಿನಗದು ಇಷ್ಟವಿಲ್ಲ.

ತಾಯಿಯ ಹೃದಯವು ಕರಗಿತು—ಅವಳು, "ನಿನ್ನನ್ನಗಲಿ ಹೇಗಿರಲಿ?" ಎಂದಳು.

ರಮ—ನನ್ನನ್ನಗಲಿರಲು ನಿನಗೆ ಕಷ್ಟವಾದರೆ, ನಾನು ಹೋಗುವುದಿಲ್ಲ.

ತಾಯಿಯು ಕಣ್ಣೀರನ್ನು ಸುರಿಸಿದಳು-ಮೋಹನನ ಬಾಯಲ್ಲಿ ಅಂತಹ ಇನಮಾತನ್ನು ಕೇಳಿ ಬಹಳ ದಿನಗಳಾಗಿದ್ದುವು! ಯಜಮಾನಿಯು, "ಎಷ್ಟು ದಿನಗಳಲ್ಲಿ ಹಿಂದಿರುಗಿ ಬರುವೆ?" ಎಂದು ವಿಚಾರಿಸಿದಳು.

"ಸಾಧ್ಯವಾದಷ್ಟು ಬೇಗನೆ ಬರುವೆನು—ನಿನ್ನನ್ನಗಲಿ ಎಷ್ಟು ದಿನಗಳಿರಬಲ್ಲೆನು?"

ತಾಯಿಯ ವಾತ್ಸಲ್ಯವು ಉಕ್ಕಿಹರಿಯಿತು-ಸ್ವಲ್ಪ ಹೊತ್ತಾದ ಬಳಿಕ, ಮೋಹನನು, "ಅಮ್ಮಾ!" ಎಂದನು.

"ಏನೋ, ಮಗು!"

"ಅಮ್ಮಾ!" ಎಂದು ಕರೆದುದನ್ನು ಕೇಳಿ ಬಹಳ ದಿನಗಳಾಗಿದ್ದುವು. ತಾಯಿಮಗನಿಬ್ಬರ ಹೃದಯವೂ ಸ್ನೇಹದಿಂದಲೂ ಆನಂದದಿಂದಲೂ ತುಂಬಿತು.

ತಾಯಿ—ಏನನ್ನು ಹೇಳುತ್ತಿದ್ದೆಯೋ ಅದನ್ನು ಹೇಳು, ಮಗು!

ರಮಣೀ—ಅಮ್ಮ! ಹೇಳಲೆ?

ತಾಯಿ—ಸಂತೋಷದಿಂದ ಹೇಳು.

ರಮಣೀ—ಬತ್ತಡವೆ ಅವಳನ್ನು ಹುಡುಕಿ ನೋಡಲೆ?

ತಾಯಿ—ಆರನ್ನು? ನೀರಿಯನ್ನೆ?

ರಮಣೀ—ಅಹುದು.

ತಾಯಿ—ಅವಳನ್ನಿನ್ನೂ ಮರೆತಿಲ್ಲವೆ?

ರಮಣೀ—ಹೇಗೆ ಮರೆಯಲಿ, ಅಮ್ಮಾ? ಅವಳಿಗೆ ಆಶ್ರಯವನ್ನು ಕೊಟ್ಟಿದ್ದು ಅದನ್ನು ತಪ್ಪಿಸಿದೆನು-ಆಶೆಯನ್ನು ಕೊಟ್ಟು ಆಶಾಭಂಗವನ್ನು ಮಾಡಿದೆನು.

ತಾಯಿ—(ಸ್ವಲ್ಪ ಯೋಚಿಸಿ)—ಅವಳನ್ನು ಪುನಃ ಮನೆಗೆ ಕರತರ ಬೇಕೆಂಬಾಶೆಯೊ?

ರಮಣೀ—ನಿನ್ನ ಅಪ್ಪಣೆಯಿಲ್ಲದೆ ಕರತರುವುದಿಲ್ಲ-ಅವಳಿಗೆಲ್ಲಾದರೂ ಅನ್ನಕ್ಕೆ ಮಾರ್ಗವನ್ನು ಮಾಡಿ ಬಂದು ಬಿಡುವೆನು.

ತಾಯಿ—ಹಾಳಾದಾ ಹುಡುಗಿಯ ಬಳಿ ನೀನು ಹೋಗುವುದೆನಗಿಷ್ಟವಿಲ್ಲ.

ರಮಣೀ—ನೀನು ಬೇಡವೆಂದರೆ ಹೋಗುವುದಿಲ್ಲ-ಆದರೆ, ನಿನ್ನ ಪಾದಗಳನ್ನು ಮುಟ್ಟಿ ಶಪಥಮಾಡುವೆನು-ನಿನ್ನ ಅಪ್ಪಣೆಯಿಲ್ಲದೆ ಅವಳನ್ನು ಮುಟ್ಟುವುದಿಲ್ಲ-ಮನೆಗೆ ಕರತರುವುದೂ ಇಲ್ಲ.

ತಾಯಿಯು ಪುಲಕಿತೆಯಾಗಿ, ಮನಸ್ಸಿನಲ್ಲಿ, "ಸನ್ಯಾಸಿಯು ಇಷ್ಟು ದಿನಕ್ಕೆ ನೀರಿಯನ್ನು ಮಹಾಕಾಳಿಗೆ ಬಲಿಯನ್ನಾದರೂ ಕೊಟ್ಟಿರುವನು, ಅಥವಾ ಅವಳು ಧರ್ಮಭ್ರಷ್ಟೆಯಾಗಿದ್ದರೂ ಇರಬಹುದು-ಹಾಗಿರುವ

ಸಂಭವದಲ್ಲಿ ಸಮ್ಮತಿಸುವುದಕ್ಕೆ ಆಕ್ಷೇಪಣೆಯೇನು ?" ಎಂದು ಯೋಚಿಸಿಕೊಂಡು ಬಳಿಕ, "ಹುಡುಗಿಯು ಕುಲತ್ಯಾಗಿನಿಯಾಗಿದ್ದರೆ ಅವಳನ್ನೆಲ್ಲಾದರೂ ಇಟ್ಟು ಹೊರಟು ಬಾ" ಎಂದಳು.

ತಾಯಿಯ ಪಾದಗಳಿಗೆರಗಿ ಮೋಹನನು ನೀರದೆಯನ್ನು ಹುಡುಕಲು ಹೊರಟನು.

ಇಪ್ಪತ್ತೆರಡನೆಯ ಪರಿಚ್ಛೇದ.

ದೇವಗಡದಲ್ಲಿ ನೀರದೆಯ ಸಮಾಚಾರವಾವದೂ ಗೊತ್ತಾಗಲಿಲ್ಲ- ವೈದ್ಯನಾಥದ ಜಂಕ್ಷನಿನಲ್ಲಿ ಸ್ವಲ್ಪ ಮಟ್ಟಿಗೆ ತಿಳಿಯ ಬಂದಿತು. ಆವರದು ಅತಿಸಾಮಾನ್ಯವಾದ ಸಮಾಚಾರ-ಸಮಾಚಾರವು ಸಾಮಾನ್ಯವಾದುದಾದರೂ ರಮಣೀಮೋಹನನು ಅದೇ ಸುಳುವನ್ನು ಅವಲಂಬಿಸಿ ದೇಶಗಳಲ್ಲಿ ನೀರದೆಯನ್ನು ಹುಡುಕುತ್ತ ಹೋಗುತ್ತಿದ್ದನು.

ಸನ್ಯಾಸಿಯು ನೀರದೆಯನ್ನು ಎತ್ತಿಕೊಂಡು ಹೋಗಿದ್ದಾನೆಂದು ಮೋಹನನು ನಂಬಿದನು-ಅದುಕಾರಣ ಅವನು ಸನ್ಯಾಸಿಗಳ ವಳವನ್ನು ಕಂಡರೆ ನೀರದೆಯನ್ನು ಹುಡುಕುವನು-ರೈಯಲು ಗಾಡಿಯನ್ನು ಬಿಟ್ಟು ಕುದುರೆಯ ಗಾಡಿ, ಕುದುರೆಯ ಗಾಡಿಯನ್ನು ಬಿಟ್ಟು ಕಾಲುನಡೆಗೆ, ಹೀಗೆ ದೇಶದೇಶ ತಿರುಗಿದನು-ಒಂದು ತಿಂಗಳಾಯಿತು-ನೀರದೆಯ ಸಮಾಚಾರವು ಗೊತ್ತಾಗಲಿಲ್ಲ.

ರಮಣೀಮೋಹನನ ಸಂಗಡ ಒಬ್ಬ ಆಳು ಇದ್ದನು-ಯಜಮಾನನಂತೆ ಅನಾಹಾರಿಯಾಗಿ ಊರೂರು ತಿರುಗುವುದಕ್ಕೆ ಅವನಿಗಿಷ್ಟವಿಲ್ಲ-ಹೊತ್ತಿಗೆ ಸರಿಯಾಗಿ ಅನ್ನವಿಲ್ಲ-ಅನ್ನವು ಸಿಕ್ಕರೆ ಅದತಿ ಕದರ್ಯವಾದುದು-ಆಳು ಸಮಯವನ್ನು ನೋಡಿಕೊಂಡಿದ್ದವನು ಯಜಮಾನನ ಸರ್ವಸ್ವವನ್ನೂ ತೆಗೆದುಕೊಂಡು ಪಲಾಯನವಾಗಿ ಹೋದನು.

ರಮಣೀಮೋಹನನು ಒಬ್ಬೊಂಟಿಗನಾದನು-ಕೈಯಲ್ಲೊಂದು ಕಾಸು ಇಲ್ಲ-ಊರಿಗೆ ಹಿಂದಿರಿಗಿ ಹೋಗೋಣವೆ ಎಂದು ಯೋಚಿಸಿದನು-ಪುನಃ, ನೀರದೆಯ ಸಮಾಚಾರವು ಗೊತ್ತಾಗದೆ ಹೋಗಕೂಡದೆಂದಂದುಕೊಂಡನು- "ನೀರದೆಯು ಅಲ್ಲಲ್ಲಿ ಭಿಕ್ಷವನ್ನು ಬೇಡುತ್ತ ತಿರುಗುತ್ತಿರುವಳು-ಹಾಗೇವೇ ನಾನೂ ದೇಶಗಳಲ್ಲಿ ಭಿಕ್ಷುಕನಾಗಿ ತಿರುಗುತ್ತಿರುವೆನು-ನೀರದೆಯು ಸಹಿಸಬಲ್ಲುದನ್ನು ನಾನೂ ಸಹಿಸುವೆನು-ನೀರದೆಯು ಭಿಕ್ಷುಕಳಾಗಿದ್ದು ನಾನು ರಾಜಭೋಗದಲ್ಲಿರಲೆ? ಅದೆಂದೂ ಆಗದು-ನೀರದೆಯನ್ನು ಕಂಡ ಹೊರ್ತು ಮನೆಗೆ ಹಿಂದಿರುಗುವುದಿಲ್ಲ" ವೆಂದು ಸ್ಥಿರಮಾಡಿಕೊಂಡನು.

ರಮಣೀಮೋಹನನು ದ್ವಿಗುಣ ಉತ್ಸಾಹದಿಂದ ನೀರದೆಯನ್ನು ಹುಡುಕಲು ಪ್ರವೃತ್ತನಾದನು, ದಿನದಮೇಲೆ ದಿನವು ಕಳೆಯಿತು. ಛಳಿಗಾಲವು ಹೋಗಿ ಬಿಸಿಲಕಾಲವು ಬಂದಿತು. ರಮಣೀಮೋಹನನು ಭಿಕ್ಷವನ್ನು ಮಾಡಿಕೊಂಡು ಒಂದೇ ಬಟ್ಟೆಯುಳ್ಳವನಾಗಿ ದಿನವನ್ನು ಹಾಕುತ್ತಿದ್ದನು.

ಒಂದಾನೊಂದುದಿನ ರಮಣೀಮೋಹನನು ಒಬ್ಬ ಧನಾಢ್ಯನ ಬಾಗಿಲಲ್ಲಿ ನಿಂತು ಒಂದು ಬಟ್ಟೆಯನ್ನು ಬೇಡಿದನು. ಧನಾಢ್ಯನಾದಾ ಮನುಷ್ಯನು ಬಟ್ಟೆಯನ್ನು ಕೊಡದೆ ಅವಮಾನಪಡಿಸಿ ಓಡಿಸಿದನು. ರಮಣೀಮೋಹನನು ವ್ಯಸನಗೊಂಡು, "ನೀರದೆಗೂ ಹೀಗೆ ಎಷ್ಟೋತರದ ಅವಮಾನವಾಗಿರಬೇಕು" ಎಂದಂದುಕೊಳ್ಳುವನು.

ರಮಣೀಮೋಹನನು ದೇಶವನ್ನು ಬಿಟ್ಟು ಬಹಳ ದೂರ ಬಂದುಬಿಟ್ಟನು. ದೇವಗಢದಿಂದ ವಾಕುಂದಕ್ಕೆ ಬಹಳ ದೂರ-ಮೋಹನನು ದಾಮೋದರ ನದಿಯತೀರವನ್ನು ಹಿಡಿದು ಹೋಗುತ ದೊಡ್ಡದೊಂದು ಗ್ರಾಮಕ್ಕೆ ಬಂದನು. ಗ್ರಾಮದ ಹೆಸರು ಇಂದ್ರಪುರ. ಅಲ್ಲಿ ಅನೇಕ ದೇವಾಲಯಗಳೂ ಅನ್ನಸತ್ರಗಳೂ ಇದ್ದುವು. ಗ್ರಾಮದ ಹೊರಗೆ ಜಮೀನುದಾರನ ಉಪ್ಪರಿಗೆಯ ಮನೆ. ಆ ಮನೆಗೆದುರಾಗಿ ಅತಿಥಿಶಾಲೆ. ರಮಣೀಮೋವನನು ಅತಿಥಿಶಾಲೆಯಲ್ಲಿರಲು ಅಪ್ಪಣೆಯನ್ನು ಬೇಡಿದನು.

ಅಪ್ಪಣೆಯಾಗಲಿಲ್ಲ. ಅದರಲ್ಲಿ ಸಾವಿರಾರುಮಂದಿ ಭಿಕ್ಷುಕ ಮುಂತಾ

ದವರು ಇದ್ದುದರಿಂದ ಸ್ಥಳವಿರಲಿಲ್ಲ. ಯತ್ನವಿಲ್ಲದೆ ರಮಣೀಮೋಹನನು ಅಲ್ಲಿದ್ದೊಂದು ಮರದ ನೆರಳಿನಲ್ಲಿ ಆಶ್ರಯಗ್ರಹಣ ಮಾಡಿದನು.

ರಮಣೀಮೋಹನನು ಶ್ರಾಂತನಾಗಿ ಕ್ಷುಧಾರ್ತನಾಗಿದ್ದನು. ಮರದ ತಂಪಾದ ನೆರಳಿನಲ್ಲಿ ಭೂಶಯ್ಯೆಯಲ್ಲಿ ಮಲಗಿದನು. ಬೇಗನೆ ನಿದ್ರೆಯು ಹತ್ತಿತು. ಪುನಃ ಎಚ್ಚರವಾದಾಗ ಮಧ್ಯಾಹ್ನವು ತಿರಿಗಿದ್ದಿತು-ಎದ್ದು ನೋಡಿದನು. ಅತಿಥಿಶಾಲೆಯ ಬಾಗಿಲು ಮುಚ್ಚಿದ್ದಿತು. ಯತ್ನತಪ್ಪಿದವನಾಗಿ ದೊಡ್ಡದಾದಾ ಅರಮನೆಯ ಬಾಗಿಲಬಳಿ ಹೋಗಿ ಭಿಕ್ಷವನ್ನು ಬೇಡಿದನು.

ಜಮೀನುದಾರನ ಹೆಸರು ಅನ್ನದಾಪ್ರಸಾದಸಿಂಹ, ಅವನು ಧನವಂತನಾಗಿದ್ದರೂ ಅತಿಥಿಗಳಿಗೆಂದೂ ವಿಮುಖನಲ್ಲ-ಜಮೀನುದಾರನ ಮಗನಾಗಿದ್ದರೂ ಮೂರ್ಖನಾಗಿ ಸ್ವಾರ್ಥಪರನಾಗಿರಲಿಲ್ಲ-ಧಾರ್ಮಿಕನಾಗಿಯೂ ನ್ಯಾಯಶೀಲನಾಗಿಯೂ ಇದ್ದನು; ಪರರ ದುಃಖಕ್ಕೆ ಸಲವಾಗಿ ಸರ್ವಸ್ವವನ್ನಾದರೂಕೊಟ್ಟು ಅವರ ದುಃಖವಿಮೋಚನೆ ಮಾಡುವನು.

ಅನ್ನದಾಬಾಬುವಿನ ವಯಸ್ಸು ನಲ್ವತ್ತು ವರ್ಷಕ್ಕೆ ಮೀರಿರಲಿಲ್ಲ. ಅವನಿಗೆ ಹೆಂಡತಿಯು ಹೋಗಿದ್ದಳು. ಒಬ್ಬಳೇ ಒಬ್ಬ ಮಗಳು- ಅವಳಿಂದ ಎಲ್ಲಾ ಸಂಸಾರ. ಮಗಳ ಅವಲಂಬನವಿಲ್ಲದಿದ್ದರೆ ಅವನು ಸಂಸಾರದಲ್ಲಿರುತ್ತಿರಲಿಲ್ಲ. ಆರೂ ಇಲ್ಲದಿದ್ದರೆ ಸ್ವಂತ ಅವಲಂಬನ ಮನುಷ್ಯಮಾತ್ರನು ಬಾಯಲ್ಲೇನನ್ನು ಹೇಳುತ್ತಿದ್ದರೂ ಆತ್ಮತೃಪ್ತಿಗೆಸಲವಾಗಿ ಸಂಸಾರವನ್ನು ಪದದಳಿತ ಮಾಡುವುದಕ್ಕೆ ಪರಾಙ್ಮುಖನಾಗನು.

ಅನ್ನದಾಬಾಬುವಿನ ಮನೆಯೊಳಗೆ ಹೋಗಲು ಅತಿಥಿಗಳಿಗೆ ಅಡ್ಡಿಯಿಲ್ಲ. ರಮಣೀಮೋಹನನು ಬಾಗಿಲೊಳಗೆ ಹೋಗಿ ಹಜಾರದಲ್ಲಿ ನಿಂತುಕೊಂಡನು. ಆರೂ ಅಡ್ಡಿಮಾಡಲಿಲ್ಲ-ಭೃತ್ಯನೊಬ್ಬನು ವಿನೀತಭಾವದಿಂದ ಭಿಕ್ಷವನ್ನು ತರುವುದಾಗಿ ಹೇಳಿ ಒಳಗೆ ಹೋದನು. ರಮಣೀಮೋಹನನು ನಿಂತಿದ್ದನು.

ಅಲ್ಲವನು ನಿಂತಿದ್ದಂತೆ ಅತ್ತಿತ್ತ ನೋಡುತ್ತ ಎರಡನೆಯ ಅಂತಸ್ತಿನ ಒಂದು ಗವಾಕ್ಷದಮೇಲೆ ದೃಷ್ಟಿಯು ಬಿದ್ದಿತು. ಅಲ್ಲೊಬ್ಬ ಸುವರ್ಣಾಲಂಕಾರಭೂಷಿತೆಯಾದ ದೇವಿಯ ಪ್ರತಿಮೆಯಂತೆ ಭುವನಮೋಹಗೊಳಿಸುವ ಕಿಶೋರಿಯೊಬ್ಬಳು ನಿಂತಿದ್ದಳು. ಅವಳುಟ್ಟಿದ್ದ ಸೂಕ್ಷ್ಮವಾದ

ವಸ್ತ್ರಾಭ್ಯಂತರದಿಂದ ಅವಳ ದೇಹದ ಕಾಂತಿಯು ಹೊರಗೊಗಿಯುತ್ತಿದ್ದಿತು—ಹೆರಳು ಹಾಕದ ಕೃಷ್ಣಕೇಶರಾಶಿಯು ಗುಂಗುರುಗುಂಗುರಾಗಿ ವಕ್ಷವನ್ನು ಮುಚ್ಚಿದ್ದಿತು. ಚಿತ್ರಿತವಾದ ಪ್ರತಿಮೆಯಂತಿದ್ದಾಮೂರ್ತಿಯನ್ನು ನೋಡಿ ರಮಣೀಮೋಹನನು ವಿಹ್ವಲನಾದನು-ಸ್ಥಿರನಯನಗಳಿಂದ ನೋಡಿ ಹುಡುಗಿಯನ್ನು ಗುರುತಿಸಿದವನು, "ನೀರದೆ! ನೀರದೆ!!" ಎಂದು ಕೂಗಿದನು.

ನೀರದೆಯು ಆ ಕೂಗನ್ನು ಕೇಳಿದಳು. ಸ್ತೋತ್ರದಿಂದ ತುಷ್ಟವಾದ ದೇವತೆಯ ಸ್ನೇಹಾನುಗ್ರಹಪೂರ್ವಕ ಸಂಭಾಷಣೆಯಂತೆ ಆ ಉನ್ಮತ್ತಚೀತ್ಕಾರವು ನೀರದೆಯ ಕಿವಿಯಲ್ಲಿ ಸೊದೆಯಂ ಸುರಿಯಿತು. ಆರನ್ನು ಧ್ಯಾನಿಸುತ್ತಿದ್ದಳೋ ಅವನು ತನ್ನೆದುರಿಗೆ ನಿಂತಿರುವುದನ್ನು ನೋಡಿದಳು. ನೋಡಿದವಳು ನಿಂತಿರಲಾರದೆಹೋದಳು-ನಡುಗುತ್ತ ನೆಲದಮೇಲೆ ಕುಳಿತುಬಿಟ್ಟಳು.

ಇಪ್ಪತ್ತುಮೂರನೆಯ ಪರಿಚ್ಛೇದ.

ಇಬ್ಬರೂ ಮೈಮರೆತಂತವರಾಗಿ ಪರಸ್ಪರ ನೋಡುತ್ತಿದ್ದರು.

ರಮಣೀಮೋಹನನು ಭಿಕ್ಷುಕವೇಷದಲ್ಲಿರುವುದನ್ನು ನೀರದೆಯು ನೋಡಿದಳು. ಒಂದಾನೊಂದು ದಿನ ಆವ ವೇಷದಲ್ಲಿ ನೀರದೆಯು ರಮಣೀಮೋಹನನ ಮನೆಗೆ ಭಿಕ್ಷವಂ ಬೇಡಲು ಹೋಗಿದ್ದಳೋ ರಮಣೀಮೋಹನನ ವೇಷವೂ ಇಂದು ಹಾಗಿದ್ದಿತು. ತಲೆಯ ಕೂದಲು ಕೆದರಿದ್ದಿತು. ಅಂಗವು ತೈಲಹೀನ-ಬಟ್ಟೆಯು ಶತಛಿದ್ರ-ಆದರಾ ವೇಷವು ಹೇಗೆಬಂದಿತು? ನೀರದೆಯು, "ನನಗೆ ಸಲವಾಗಿರಬೇಕು" ಎಂದು ಭಾವಿಸಿದಳು.

ನೀರದೆಯು ಒಂದು ಹಿಡಿ ಅಕ್ಕಿಯ ಭಿಕ್ಷಕ್ಕೆ ಹೋಗಿದ್ದವಳು ಅಪರಿಮಿತ ದಯೆಯನ್ನೂ ಅಯಾಚಿತವಾದ ಅನಂತ ಪ್ರಣಯವನ್ನೂ ಹೊಂದಿ

ದಳು. ಇಂದು ಏನನ್ನು ಕೊಟ್ಟು ಅತಿಥಿಸತ್ಕಾರವನ್ನು ಮಾಡಬಲ್ಲಳು ! ನೀರದೆಗೆ ಉಳಿದಿರುವುದೇನು ? ಅವಳೇನನ್ನು ಕೊಡಬಲ್ಲಳು ? ಅವಳಿಗಿದ್ದುದನ್ನು ಅವಳು ಬಹುದಿನಕ್ಕೆ ಮೊದಲು ಕೊಟ್ಟುಬಿಟ್ಟಿದ್ದಳು. ನೀರದೆಯು ಅಶ್ರುಪ್ಲಾವಿತ ನಯನಗಳಿಂದ ರಮಣೀಮೋಹನನನ್ನು ನೋಡುತ್ತ ಮನಸ್ಸಿನಲ್ಲಿ, " ನಾಥ ! ನಿನಗೆ ಎಲ್ಲವನ್ನೂ ಕೊಟ್ಟುಬಿಟ್ಟಿದ್ದೇನೆ " ಎಂದಂದುಕೊಂಡಳು.

ರಮಣೀಮೋಹನನು ಮನಸ್ಸಿನಲ್ಲಿ " ನೀರದೆಯ ದುಃಖವಿಮೋಚನೆಯನ್ನು ಮಾಡಲು ಬಂದು ನಾನಿಂದು ನೀರದೆಯ ಬಾಗಿಲಲ್ಲಿ ಭಿಕ್ಷಾರ್ಥಿಯಾಗಿದ್ದೇನೆ. ಆದರೆ ನೀರದೆಯು ಉಪ್ಪರಿಗೆಯಮೇಲೆ ಹೇಗೆ ಬಂದಳು ? ಆರಾದರೂ ದಯಾಪರವಶರಾಗಿ ಅನಾಥೆಯಾಗಿದ್ದಾನೀರದೆಗೆ ಆಶ್ರಯವಂ ಕೊಟ್ಟಿರುವರೆ ? ನೀರದೆಗೆ ಅಷ್ಟೊಂದು ಸುವರ್ಣಾಲಂಕಾರಗಳು ಹೇಗೆ ಬಂದುವು!-ಹೀಗವಳನ್ನು ನೋಡುವೆನೆಂದು ನಾನೆಂದೂ ಭಾವಿಸಿರಲಿಲ್ಲ. ಅವಳನ್ನೀಸ್ಥಿತಿಯಲ್ಲಿ ನೋಡಲು ಕಾರಣವೇನಿರಬಹುದು ?" ಎಂದು ಭಾವಿಸಿಕೊಳ್ಳುತ್ತಿದ್ದನು.

ಆ ಸಮಯದಲ್ಲಿ ಮನೆಯ ಯಜಮಾನ ಅನ್ನದಾಬಾಬುವು ಬಂದು ರಮಣೀಮೋಹನನನ್ನು ಕುರಿತು, " ನಿನ್ನ ಹೆಸರು ರಮಣೀಮೋಹನನಲ್ಲವೆ ? " ಎಂದು ವಿಚಾರಿಸಿದನು.

ರಮಣೀಮೋಹನನು ವಿಸ್ಮಿತನಾಗಿ, " ಅಹುದು " ಎಂದುತ್ತರವನ್ನು ಕೊಟ್ಟನು.

ಅನ್ನದಾ ನನ್ನ ಸಂಗಡ ಬಾ.

ಇಬ್ಬರೂ ಹೋಗಿ ಬಂದು ಸಜ್ಜಿತವಾಗಿದ್ದ ಕೊಠಡಿಯಲ್ಲಿ ಕುಳಿತರು. ಅಲ್ಲಿ ಮತ್ತಾರೂ ಇರಲಿಲ್ಲ.

ಅನ್ನದಾ—ನಿನ್ನನ್ನು ದೇವಗಢದಲ್ಲಿ ನೋಡಿದ್ದೆನು ; ಆದರೆ ಆಗ ನಿನ್ನ ಹೆಸರು ಗೊತ್ತಿರಲಿಲ್ಲ. ಈಚೆಗೆ ನೀರದೆಯಿಂದ ತಿಳಿದೆನು.

ರಮಣೀ—ತಾವು—ತಾವಾರು ?

ಅನ್ನದಾ—ನೀನು ನನ್ನನ್ನು ಅರಿಯೆ—ನೀನಾಗ ಹುಡುಗನಾಗಿದ್ದೆ—ನಿನ್ನ ತಂದೆಯು ನನ್ನನ್ನು ಬಲ್ಲನು. ನನ್ನ ಹೆಸರು ಅನ್ನದಾಪ್ರಸಾದಸಿಂಹ.

ರಮಣೀ—ತಮ್ಮ ಹೆಸರನ್ನು ನಮ್ಮ ತಾಯಿಯ ಬಾಯಿಂದ ಕೇಳಿದ್ದೆನು—ತಾವು ನಮಗೆ ಒಂದಾನೊಂದುಕಾಲದಲ್ಲಿ ಬಹಳ ಉಪಕಾರವನ್ನು ಮಾಡೋಣಾಗಿದೆ.

ಅನ್ನದಾ--ಅದಕ್ಕೆ ಸಲವಾಗಿಯಲ್ಲವೆ ತಾಯಿಯೂ ಮಗನೂ ಸೇರಿ ನನ್ನನ್ನು ಮನೆಯಿಂದ ಹೊರಡಿಸಿದುದು ?

ರಮಣೀ—ತಮ್ಮನ್ನೇ ಹೊರಡಿಸಿದೆವು ?

ಅನ್ನದಾ—ಹೊರಡಿಸದೆ ಮತ್ತೇನು ? ಆದರದು ನಿಮ್ಮ ಅಪರಾಧವಲ್ಲ-ಆಗೆನ್ನ ತಲೆಯಲ್ಲಿ ಜಟೆಯಿದ್ದಿತು.

ರಮಣೀ—ಹಾಗಾದರೆ, ತಾವಾ—ಆ ಸನ್ಯಾಸಿಯೆ ?

ಅನ್ನದಾಬಾಬುವು ಮುಖವನ್ನೋರೆಮಾಡಿಕೊಂಡು ಮುಗುಳ್ನಗೆಯನ್ನು ನಕ್ಕನು—ರಮಣೀಮೋಹನನು ಮನಸ್ಸಿನಲ್ಲಿ, "ಈ ಅನ್ನದಾಬಾಬುವು ಆ ಸನ್ಯಾಸಿಯೇ ಆದುದು-ಅದೇ ಮುಖ, ಅದೇ ಮೂಗು, ಅದೇ ಕಣ್ಣುಗಳು ಆದರೆ ಅವನು ಸಂಸಾರವನ್ನು ಬಿಟ್ಟು ಸನ್ಯಾಸಿಯಾದನೇಕೆ ? ಪುನಃ, ಸನ್ಯಾಸಾಶ್ರಮವನ್ನು ಬಿಟ್ಟು ಗೃಹಿಯಾದನೇಕೆ ? ಅವೆಲ್ಲವೂ ನೀರದೆಗೆ ಸಲವಾಗಿರಬಹುದೆ ? ನೀರದೆಯಿದ್ದೆಡೆ ಅವನಿದ್ದನು—ದೇವಗಡದಲ್ಲಿ ನೀರದೆಯನ್ನು ಬೆಂಬಳಿಸುತಿದ್ದುದನ್ನು ನೋಡುತಿದ್ದೆನು-ಪುನಃ ಇಲ್ಲಿಗೆ ಬಂದರೆ ನೀರದೆಯು ಅವನ ಮನೆಯಲ್ಲಿದ್ದಾಳ-ಇದರ ಅರ್ಥವೇನಿರಬಹುದು ? ಅನ್ನದಾಬಾಬುವಿನ ಉದ್ದೇಶವೇನಿರಬಹುದು ? " ಎಂದು ಮುಂತಾಗಿ ಭಾವಿಸಿಕೊಳ್ಳುತಿದ್ದನು.

ಬಳಿಕ ರಮಣೀಮೋಹನನು, "ನೀರದೆಯು ಇಲ್ಲಿಗೆ ಹೇಗೆ ಬಂದಳು ?" ಎಂದು ವಿಚಾರಿಸಿದನು,

ಅನ್ನದಾ—ನಾನವಳನ್ನು ಕರತಂದೆನು.

ರಮಣೀ—ವೈದ್ಯನಾಥದಿಂದಲೆ ?

ಅನ್ನದಾ—ಅಹುದು.

ರಮಣೀ—ಏಕೆ ಕರತರೋಣಾಯಿತು ?

ಅನ್ನದಾ—ನೀರದೆಯು ನನಗೆ ಮಗಳು.

ರಮಣೀಮೋಹನನು ಮೂಕನಾಗಿ ಸ್ತಂಭಿತನಾದನು. ನೀರದೆಯು ಆ ಧನವಂತನಾದ ಭೂಸ್ವಾಮಿಯ ಮಗಳೆ? ಸುಳ್ಳುಮಾತು—ಹಾಗಿರದು. ನಿಜವಾಗಿದ್ದರೆ! ನಿಜವಾಗಿದ್ದರೆ, ಎಷ್ಟೊಂದು ಸುಖವಾಗುವುದು! ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ ರಮಣೀಮೋಹನನು, "ತಮ್ಮ ಸಾಕಮಗಳೆಂದು ತೋರುತ್ತದೆ?" ಎಂದನು.

ಅನ್ನದಾ--ಇಲ್ಲ—ನನ್ನ ಔರಸಮಗಳು.

ರಮಣೀ—ತಮ್ಮ ಸ್ವಂತಮಗಳನ್ನು ಭಿಕ್ಷಾಟನೆಗೆ ಬಿಟ್ಟಿರೋಣಾಯಿತೆ?

ಅನ್ನದಾ—ಎಲ್ಲವೂ ಅದೃಷ್ಟದೋಷ. ಹೆಂಗಸು ಸ್ವರ್ಗಾರೋಹಣವಂ ಮಾಡಿದಳು. ನಾನು ಸನ್ಯಾಸಾಶ್ರಮವನ್ನು ಕೈಗೊಂಡೆನು-ಮಗಳು ಬಿಕ್ಷುಕಳಾದಳು.

ರಮಣೀ—ನಾನದಾವ ಸಂಗತಿಯನ್ನೂ ಅರಿಯೆನು.

ಅನ್ನದಾ—ಹಾಗಾದರೆ ಕೇಳು--ಸಂಕ್ಷೇಪವಾಗಿ ಹೇಳುವೆನು-ಎಂಟು ವರ್ಷಕ್ಕೆ ಮೊದಲು ಒಂದೌತಣವು ಬಂದು ನಮ್ಮ ಮಾವನ ಮನೆಗೆ ಹೋಗಿದ್ದೆನು., ಸಂಗಡ ನೀರದೆಯೂ ಅವಳ ತಾಯಿಯೂ ಇದ್ದರು. ನಾವು ದಾಮೋದರನದಿಯಲ್ಲಿ ದೋಣಿಯಲ್ಲಿ ಹೋಗಬೇಕು-ಹಿಂದಿರುಗಿ ಬರುವಾಗ ದೋಣಿಯು ಮುಳುಗಿಹೋಯಿತು-ನಾನು ಬದುಕಿಕೊಂಡೆನು. ನನ್ನ ಹೆಂಡತಿ ಮತ್ತು ಮಗಳ ಸಮಾಚಾರವು ಗೊತ್ತಾಗಲಿಲ್ಲ, ಕೆಲವು ದಿನಗಳಲ್ಲಿ ನನ್ನ ಹೆಂಡತಿಯ ಶವವು ಸಿಕ್ಕಿತು. ನೀರದೆಯ ಸಮಾಚಾರವು ಗೊತ್ತಾಗಲಿಲ್ಲ. ಅದು ಮೊದಲ್ಗೊಂಡು ನಾನು ಗೃಹತ್ಯಾಗಿ ಸನ್ಯಾಸಿಯಾದೆನು.

ಅನ್ನದಾಬಾಬುವು ವ್ಯಸನಭಾರಾಕ್ರಾಂತವಾಗಿ ಅಧೋಮುಖಿಯಾಗಿ ಮೌನವಾಗಿದ್ದವನು, ಸ್ವಲ್ಪಹೊತ್ತಾದಬಳಿಕ ಪುನಃ ಹೇಳತೊಡಗಿದನು :— ಆರೇಳುವರ್ಷಗಳಾದ ಬಳಿಕ ತಪೋವನದ ಬೆಟ್ಟದಲ್ಲಿ ನೀರದೆಯನ್ನು ನಿನ್ನ ಸಂಗಡ ನೋಡಿದೆನು-ಮೊದಲು ಚೆನ್ನಾಗಿ ಗುರುತಾಗಲಿಲ್ಲ--ಸಂದೇಹವಾಗಿದ್ದಿತು. ನನ್ನ ಸಂದೇಹದ ನಿವಾರಣೆಗೆ ನೀನೆನಗೆ ಅವಕಾಶವನ್ನು ಕೊಡಲಿಲ್ಲ—ನೀರದೆಯ ಕಣ್ಣಿನಲ್ಲಿ ಎರಡು ಮಚ್ಚೆಗಳಿದ್ದುವು. ಅಂತಹ ಮಚ್ಚೆಗಳಾರಿಗೂ ಇರದು. ಭಗವಂತನ ಅನುಗ್ರಹದಿಂದ ನೀರದೆಯನ್ನು ಪುನಃ

ಹೊಂದಿದೆನು. ಅವಳ ಕಣ್ಣಿನಲ್ಲಿ ಮಚ್ಚೆಗಳಿದ್ದುವು. ನೀರದೆಯನ್ನು ಹೊಂದಿ ನಾನು ಪುನಃ ಸಂಸಾರಿಯಾದೆನು. ನೀರದೆಯು ಅವಳ ಜೀವನದಲ್ಲಿ ಆರುವರ್ಷಕಾಲ ಪಟ್ಟ ಕಷ್ಟವನ್ನು ಎಂದಿಗೂ ಮರೆಯೆನು."

ರಮಣೀ—ಆ ಆರುವರ್ಷಕಾಲ ನೀರದೆಯೆಲ್ಲಿದ್ದಳು?

ಅನ್ನದಾ—ಒಬ್ಬ ವೇಶ್ಯೆಯ ಮನೆಯಲ್ಲಿ.

ರಮಣೀ—ನಾನೂ ಹಾಗೇವೇ ಕೇಳಿದೆನು.

ಅನ್ನದಾ—ನಿನಗೆ ಹೇಳಿದವರಾರು? ನೀರದೆಯೆ?

ರಮಣೀ—ಅಹುದು.

ಅನ್ನದಾ—ಆದರೂ ನೀನು ನೀರದೆಯನ್ನು ತಿರಸ್ಕರಿಸಿ ನಿರಾಕರಿಸದೆ ಪ್ರೀತಿಸಿದೆ.

ರಮಣೀ—ನೀರದೆಯನ್ನು ತಿರಸ್ಕರಿಸುವುದೆ? ನೀರದೆಯನ್ನು ತಿರಸ್ಕರಿಸಿದ ದಿನ ನಾನು ಮನುಷ್ಯನಾಗೆನು.

ಅನ್ನದಾಬಾಬುವಿನ ಮೈಕಂಟಕಿತವಾಯಿತು—ಕಣ್ಣು ಸೋಗೆಯಲ್ಲಿ ಎರಡು ತೊಟ್ಟು ನೀರುಕಣ್ಗೊಳಿಸಿತು. ಅವನು "ನನ್ನ ನೀರದೆಯನ್ನು ಪ್ರೀತಿಸುವವನನ್ನು ನನಗಿಂತಲೂ ಹೆಚ್ಚೆಂದು ತಿಳಿಯುವೆನು-ನಿನ್ನ ಉಪಕಾರಕ್ಕೆ ತಕ್ಕ ಪ್ರತ್ಯುಪಕಾರವನ್ನು ನಾನೆಂದೂ ಮಾಡಲಾರೆನು" ಎಂದನು.

ರಮಣೀ—ನನ್ನ ಅಭಿಪ್ರಾಯದಲ್ಲಿ ನಾವಿಬ್ಬರೂ ಋಣಿಗಳು.

ಅನ್ನದಾ—ಆರಿಗಾರು ಋಣಿ?

ರಮಣೀ—ನೀರದೆಯ ಪ್ರಾಣರಕ್ಷಣೆಯನ್ನು ಮಾಡಿದವರಿಗೆ.

ಅನ್ನದಾ—ವೇಶ್ಯೆ ಯಮುನೆಯು ನೀರದೆಯನ್ನು ಆಸನ್ನ ಮೃತ್ಯುವಿನಿಂದ ರಕ್ಷಿಸಿದವಳು-ಯಮುನೆಯು ಬ್ರಾಹ್ಮಣರ ಮಗಳು-ಗಂಡನಿಲ್ಲದವಳು. ಕುಲತ್ಯಾಗಿಯಾದಾಗ ದಾಮೋದರ ನದಿಯ ಮರಳಿನಲ್ಲಿ ನೀರದೆಯನ್ನು ಹೊಂದಿದಳು-ತಾನು ಧರ್ಮಭ್ರಷ್ಟೆಯಾಗಿದ್ದರೂ ಯಮುನೆಯು ನೀರದೆಗೆ ಧರ್ಮವನ್ನೂ ವಿದ್ಯೆಯನ್ನೂ ನೀತಿಯನ್ನೂ ಕಲಿಸಿದಳು-ನೀರದೆಯು ವಯಸ್ಸಾಗಿ ಜ್ಞಾನವು ಬಂದಾಗ ಆ ವೇಶ್ಯೆಯ ಆಶ್ರಯವನ್ನು ತ್ಯಜಿಸಿ ಭಿಕ್ಷುಕಳಾದಳು_ಅಸತ್ಸಂಗಕ್ಕಿಂತ ಭಿಕ್ಷೆಯು ಮೇಲೆಂದು ತಿಳಿದು ಹಾಗೆ ಮಾಡಿದಳು-ಬಳಿಕ ನಡೆದ ವಿದ್ಯಮಾನಗಳನ್ನು ನೀನೇ ಬಲ್ಲೆ.

ರಮಣೀ—ನಾನು ಬಲ್ಲೆನು-ಆದರೆ ತಾವು ಅರಿಯರಿ.

ಅನ್ನದಾ—ನಾನರಿಯದಿರುವುದಾವದು ? ಹೇಳು.

ರಮಣೀ—ನಾಚಿಕೆಯಿಲ್ಲದೆ ನಾನದನ್ನು ಹೇಳಬೇಕು.

ಅನ್ನದಾ—ನಿಸ್ಸಂಕೋಚವಾಗಿ ಹೇಳು.

ರಮಣೀ—ನೀರದೆಯನ್ನು ನಾನು ಮನಸಾ ನನ್ನ ಪತ್ನಿಯೆಂದು ಗ್ರಹಣ ಮಾಡಿದ್ದೇನೆ. ಅವಳ ಹೊರತು ನಾನು ಮತ್ತಾರನ್ನೂ ಮದುವೆ ಯಾಗೆನು.

ಅನ್ನದಾ—ನಾನೂ ಕನ್ಯಾದಾನ ಮಾಡಲು ಸಿದ್ಧವಾಗಿದ್ದೇನೆ-ಆದರೆ-

ರಮಣೀ—ಆದರೆ ಏನು ?

ಅನ್ನದಾ—ಆದರೆ ಇಂದೇ ಮದುವೆಯಾಗಬೇಕು.

ರಮಣೀ—ಇಂದೇ ? ಅದೇಕೆ ?

ಅನ್ನದಾ—ನೀರದೆಗಿಂದು ಮದುವೆಯಂ ಮಾಡಬೇಕೆಂದು ಪ್ರತಿಜ್ಞೆ ಮಾಡಿದ್ದೇನೆ-ನೀನೊಪ್ಪದಿದ್ದರೆ ಬೇರೆ ವರನಿಗೆ ಕೊಟ್ಟು ಮದುವೆ ಮಾಡು ವೆನು.

ರಮಣೀ—ಹಾಗಾದರೆ, ನನ್ನ ಅದೃಷ್ಟದಲ್ಲಿ ನೀರದೆಯನ್ನು ಹೊಂದು ವಂತಿಲ್ಲ.

ಅನ್ನದಾ—ಏಕೆ ?

ರಮಣೀ—ತಾಯಿಯ ಅನುಮತಿಯಿಲ್ಲದೆ ಮದುವೆಯಾಗೆನು-ಮದು ವೆಯ ಮಾತು ಹಾಗಿರಲಿ-ಅವಳನ್ನು ಸ್ಪರ್ಶವನ್ನೂ ಮಾಡೆನು.

ಅನ್ನದಾ—ನನ್ನ ಮಗಳನ್ನು ಮದುವೆಯಾಗಲು ತಾಯಿಯ ಅನುಮ ತಿಯು ಬೇಕೆ ? ನೀನಿನ್ನೂ ಹುಡುಗನಲ್ಲ.

ರಮಣೀ—ತಾಯಿಯು ಬದುಕಿರುವತನಕ ನಾನು ಹುಡುಗನೇ ಅಹುದು ; ಆಕೆಯ ಅನುಮತಿಯಿಲ್ಲದೆ ಮದುವೆಯಾಗೆನು.

ಅನ್ನದಾ—ಹಾಗಾದರೆ ನೀರದೆಯನ್ನು ಬೇರೆ ವರನಿಗೆ ಕೊಟ್ಟುಬಿಡಲೆ?

ರಮಣೀ—ಇಷ್ಟವಿದ್ದಂತೆ ಮಾಡಬಹುದು-ನೀರದೆಯನ್ನು ಹೊಂದದಿ ದ್ದರೆ, ನನ್ನ ಜೀವನವು ಮರುಭೂಮಿಯಾಗಿರುವುದು-ಸಂಸಾರವನ್ನು ಬಿಟ್ಟು ಸನ್ಯಾಸಾಶ್ರಮವನ್ನು ಗ್ರಹಣ ಮಾಡಬೇಕಾಗುವುದು-ಹಾಗೆ ಮಾಡಿ

ದರೂ ತಾಯಿಗೆ ವ್ಯಥೆಯನ್ನುಂಟುಮಾಡಿದಂತಾಗದು-ಸಹಸ್ರ ರಮಣೀಮೋಹನರ ಸುಖದುಃಖಗಳಿಗಿಂತ ತಾಯಿಯ ಕಣ್ಣೀರು ದೊಡ್ಡದು.

ಅನ್ನದಾಬಾಬುವು ಕೇಳಿ ಚಮತ್ಕೃತನಾದನು-ರಮಣೀಮೋಹನನ ಕೈಗಳನ್ನು ಹಿಡಿದುಕೊಂಡು ಉತ್ಸುಕಪೂರ್ಣನಾಗಿ, "ಅಣ್ಣಾ! ನೀನು ದೀರ್ಘಾಯುಸ್ಸುಳ್ಳವನಾಗೆಂದು ಹರಿಸುವೆನು-ನೀರದೆಯು ನಿನ್ನವಳು-ನಿನ್ನಹೊರ್ತು ನೀರದೆಯನ್ನು ಮತ್ತಾರೂ ಹೊಂದರು. ನಾನು ನಿನ್ನನ್ನು ಪರೀಕ್ಷಿಸಿದನು-ಆವನು ಮಾತೃದ್ರೋಹಿಯೋ ಅವನು ಮನುಷ್ಯತ್ವ ವರ್ಜಿತ ನರಪಿಶಾಚನು. ಮಾತೃಭಕ್ತನಿಗೆ ಭಾಗ್ಯಲಕ್ಷ್ಮಿಯು ಅವನವಳಾಗುವಳು-ಈಶ್ವರನು ಅಂತಹವನಿಗೆ ಪ್ರಸನ್ನನಾಗುವನು-ಮಾತೃವತ್ಸಲ! ಹೋಗು, ತಾಯಿಯ ಅನುಮತಿಯನ್ನು ಪಡೆದುಕೊಂಡು ಬಾ" ಎಂದು ಹೇಳಿದನು.

ಇಪ್ಪತ್ತುನಾಲ್ಕನೆಯ ಪರಿಚ್ಛೇದ.

ಬಳಿಕ ಮೂರುತಿಂಗಳುಗಳು ಕಳೆದವು-ಇಂದು ಗೋಪಾಲಪುರದಲ್ಲಿ ಬಹಳ ಗದ್ದಲ-ಗ್ರಾಮದ ಜಮಿನುದಾರ ರಮಣೀಮೋಹನನು ಮದುವೆಯಾಗಿ ಹೊಸ ಸೊಸೆಯನ್ನು ಮನೆಗೆ ಕರತರುತ್ತಾನೆ-ಹತ್ತರದ ಗ್ರಾಮದವರೆಲ್ಲರೂ ಮನೆಗೆ ಬೀಗಗಳನ್ನು ಹಾಕಿಕೊಂಡು ಸೊಸೆಯನ್ನು ನೋಡಲು ಹೊರಟರು. ಜಮಿನುದಾರನ ಮನೆಯಲ್ಲಿ ಜನವು ತುಂಬಿ ನಿಲ್ಲುವುದಕ್ಕೆ ಸ್ಥಳವಿಲ್ಲ. ವಿಸ್ತೀರ್ಣವಾದಾ ಪ್ರಾಂಗಣದಲ್ಲಿ ನಿಂತು ಯಜಮಾನಿಯು ಸೊಸೆಯನ್ನು ಬರಮಾಡಿಕೊಳ್ಳುತ್ತಾಳೆ. ಸೊಸೆಯು ಸರ್ವಾಂಗಭೂಷಿತೆಯಾಗಿ ಮಿಂಚಿನ ಲತೆಯಂತೆ ನಿಂತಿದ್ದಾಳೆ. ವಜ್ರಖಚಿತವಾದ ಸುವರ್ಣಾಲಂಕಾರಗಳಿಂದಲಂಕೃತೆಯಾಗಿದ್ದಾಳೆ-ಸ್ವರ್ಣವನ್ನು ಕಂದಿಸುವ ಸೊಸೆಯ ಮೈ ಸ್ವರ್ಣಖಚಿತ ಮಹಾಮೂಲ್ಯವುಳ್ಳ ಸೀರೆಯಿಂದಾವೃತವಾಗಿದೆ.

ಎಲ್ಲರೂ ಸೊಸೆಯನ್ನು ನೋಡಲೆಳಸುತ್ತಿದ್ದರು. ಯಜಮಾನಿಯು ಸೊಸೆಯ ಮುಖದಮೇಲಿನ ಬಟ್ಟೆಯನ್ನು ತೆಗೆದು ಮುಖವನ್ನು

ನೋಡಿದಳು.-ಅಂತಹ ಸೌಂದರ್ಯವನಾರೂ ಆವಾಗಲೂ ನೋಡಿರಲಿಲ್ಲ-ಸಾಲಂಕಾರದ ದೇವಿಯ ಪ್ರತಿಮೆಯಂತಿದ್ದಳು-ಸೊಸೆಯು ಕಣ್ಣುಗಳನ್ನು ಮುಚ್ಚಿಕೊಂಡಿದ್ದಳು-ಆದರೆ ಅಧರದಲ್ಲಿ ಮೆಲ್ನಗು-ಅದು ಗರ್ವದ ನಗುವಾಗಿರಲಿಲ್ಲ-ಆನಂದದ ನಗುವಾಗಿದ್ದಿತು-ಆ ನಗುವನ್ನಡಗಿಸಲಾರದವಳಾಗಿದ್ದಳು.

ಆದರೆ ಯಜಮಾನಿಯ ಅಧರದಲ್ಲಿ ಗರ್ವದ ನಗುವು ತೋರುವುದು. ಆನಂದದಿಂದಲೂ ಗರ್ವದಿಂದಲೂ ಹೃದಯವು ತುಂಬಿದರೆ ಮನುಷ್ಯನಾವ ನಗುವನ್ನು ನಗುವನೋ ಯಜಮಾನಿಯ ಅಧರದಲ್ಲಿ ಅಂತಹ ನಗುವು-ಕಡದ ವಿಗ್ರಹದಂತಿದ್ದ ಸೊಸೆಯನ್ನು ಬರಮಾಡಿಕೊಂಡು ಅಂತಹ ಸೊಸೆಯು ಮತ್ತಾರ ಮನೆಯಲ್ಲಿಯೂ ಇಲ್ಲವೆಂತಲೂ ತನ್ನಂತೆ ಮತ್ತಾರೂ ಸುಖಿಗಳಲ್ಲವೆಂತಲೂ ಭಾವಿಸಿಕೊಂಡಳು.

ವಾಮೆಯು ದೂರ ನಿಂತು "ನೀರದೆಯು ಅಷ್ಟೊಂದು ಸುಂದರಿಯೆಂದು ಆವಾಗಲೂ ತಿಳಿದಿರಲಿಲ್ಲವೆಂತಲೂ ಆ ಭಿಕಾರಿಣಿಯೆಲ್ಲಿ? ಈ ದೇವಿಯ ಪ್ರತಿಮೆಯೆಲ್ಲಿ?" ಅರ್ಥಾರ್ಥಸಂಬಂಧವಿಲ್ಲವೆಂತಲೂ ಸೊಸೆಯು ನಿಜವಾಗಿಯೂ ನೀರದೆಯಾಗಿರುವಳೆ? ಎಂತಲೂ ಭಾವಿಸುವಳು.

ಸೊಸೆಯು ವಯಸ್ಸಾದವಳೆಂದು ಹೆಂಗಸರ ಮಹಲಿನಲ್ಲಿ ಚರ್ಚೆಯಾಯಿತು-ಆದರೆ ಅವಳಾ ರೂಪವೂ ಅವಳಾ ಅಮೌಲ್ಯ ಅಲಂಕಾರಗಳೂ ಆ ಚರ್ಚೆಯನ್ನಡಗಿಸಿದುವು. ನಾವು ಮನುಷ್ಯರನ್ನು ದೂಷಿಸಿ ಹಿಂಸಿಸುತ್ತೇವೆ-ದೇವಿಯನ್ನು ಹಿಂಸಿಸಲಾರೆವು-ನೀರದೆಯು ಆ ದೇವಿಯಾಗಿದ್ದಳು-ಬಂದವರೆಲ್ಲರೂ ಸೊಸೆಯ ಸೊಬಗನ್ನೂ ಕೀರ್ತಿಯನ್ನೂ ಕೊಂಡಾಡುತ್ತ ಪ್ರೀತಮನಸ್ಕರಾಗಿ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು.

ಪುಷ್ಪಶಯ್ಯೆಯ ರಾತ್ರಿ ರಮಣೀಮೋಹನನು ಕೊಠಡಿಗೆ ಹೋಗಿ ನೋಡಿದನು. ಪುಷ್ಪಮಯಿ ನೀರದೆಯು ಪುಷ್ಪಾಲಂಕಾರಗಳಿಂದ ಭೂಷಿತೆಯಾಗಿ ನೆಲದಮೇಲೆ ಕುಳಿತಿದ್ದಳು-ಮೋಹನನು ವಿಸ್ಮಿತನಾಗಿ, "ನೀರದೆ? ನೆಲದಮೇಲೆ ಕುಳಿತಿರುವುದೇಕೆ?" ಎಂದು ವಿಚಾರಿಸಿದನು. ನೀರದೆಯು ಸುಮ್ಮನಿದ್ದಳು-ಕಡೆಗೆ ಒತ್ತಾಯ ಮಾಡಿದುದರಮೇಲೆ ನೀರದೆಯು "ನಾನು ಹಾಸಿಗೆಯಮೇಲೆ ಹೇಗೆ ಕುಳಿತುಕೊಳ್ಳಲಿ?—ಆ ಹಾಸಿಗೆಯು ನನಗೆ ದೇವ

ಮಂದಿರವಾಗಿರುವುದು-ಈಗ್ಗೆ ಬಹುದಿನಗಳಿಗೆ ಹಿಂದೆ ನಾನಾ ಹಾಸಿಗೆಯನ್ನು ಸರಿಮಾಡಿ ಹಾಸುತ್ತಿದ್ದೆನು-ಅದು ನೆನವಿದೆಯೆ ?" ಎಂದಳು.

ರಮಣೀ—ಆ ಸಮಯಕ್ಕೆ ಸರಿಯಾಗಿ ನಾನು ಕೊಠಡಿಗೆ ಬಂದೆನು. ಅದು ನೆನವಿದೆ. ನಾನಂದು ನಿನ್ನನ್ನು ಪ್ರೀತಿಸುತ್ತೇನೆಂದು ತಿಳಿದುಕೊಂಡೆನು.

ನೀರದೆ—ಹಾಸಿಗೆಯನ್ನೇ ದೇವಮಂದಿರವೆಂದು ಕಲ್ಪಿಸಿಕೊಂಡು, ನಿತ್ಯವೂ ಅದನ್ನು ಸರಿಮಾಡಿ ರಚನೆಯಂಗೈಯುತಿದ್ದೆನು. ಅದರಿಂದೆನಗೆ ಉಂಟಾಗುತಿದ್ದ ಸುಖವೂ ತೃಪ್ತಿಯೂ ಸ್ವಲ್ಪವಾದುದಾಗಿರಲಿಲ್ಲ. ಶಯ್ಯೆಯ ರಚನೆಯಂ ಬಿಟ್ಟು ಬೇರೆ ಆಶೆಯೆನಗಿರಲಿಲ್ಲ. ಆ ವ್ರತವನ್ನು ನಡಿಸಿ ಕೊಂಡು ಸುಖದಿಂದ ಕಾಲವನ್ನು ಕಳೆಯುತ್ತಿದ್ದೆನು. ಆದರೆ—

ರಮಣೀ—ಆದರೆ ಮತ್ತೇನು ?

ನೀರದೆ—ಆದರೆ ಹೃದಯದಲ್ಲಿ ನೂತನ ಆಶೆಯು ತಲೆದೋರಿತು. ದೈವವಾಣಿಯಂತೆ ದೇವರ ಬಾಯಿಂದ ಎಂದು "ನೀರದೆಯು ನನ್ನ ಸಹಧ -ಣಿ, ನೀರದೆಯು ನನ್ನ ಸುಖದುಃಖಗಳಲ್ಲಿ ಭಾಗಿನಿ" ಎಂದು ಕೇಳಿ ಾ ಅಂದಿನಿಂದ—

ರಮಣೀ-ನಿಲ್ಲಿಸಬೇಡ, ಹೇಳು—ನಿನ್ನಾವೀಣಾಝಂಕಾರವನ್ನು ವಿನಿಕೆ ು.

ನೀರದೆ—ಮತ್ತೇನನ್ನು ಹೇಳಲಿ ? ನನ್ನ ದೇವರು ನನ್ನನ್ನು ಪ್ರೀತಿ ್ತನೆ-ತಾಯಿಯು ನನ್ನನ್ನು ಆದರಿಸುತ್ತಾಳೆ-ನನ್ನಂತೆ ಸುಖಿಯು ್ತರು ?

ರಮಣೀ—ನಿನಗಿಂತ ನಾನು ಹೆಚ್ಚು ಸುಖಿಯೆಂದು ತೋರುತ್ತದೆ. ಒಂದಾನೊಂದುದಿನ ನೀನು ಹೆಚ್ಚೆ ? ತಾಯಿಯು ಹೆಚ್ಚೆ ? ಎಂದು ಸಂದೇಹ ಪಡುತ್ತಿದ್ದೆನು. ಇಷ್ಟೊಂದು ದಿನಗಳಾದ ಬಳಿಕ, ನಿನಗಿಂತ ತಾಯಿಯು ಬಹಳ ಹೆಚ್ಚೆಂದು ತಿಳಿದೆನು—ಆ ನಂಬುಗೆಯೇ ನನ್ನ ಸುಖವಾಗಿರು ವುದು. ಆದುದರಿಂದ ನನಗಿಂತ ಹೆಚ್ಚು ಸುಖಿಗಳು ಮತ್ತಾರೂ ಇಲ್ಲವೆಂದು ಹೇಳುತಿದ್ದೆನು.